ಚಿಂತನ ಬಯಲು

ಸಂಪುಟ 4 ಸಂಚಿಕೆ 4
ಎಪ್ರಿಲ್–ಜೂನ್ 2016

ತ್ರೈಮಾಸಿಕ
ISSN 2278-2192

Volume 4, Issue 4, April-June 2016

ಚಿಂತನ ಬಯಲು

ಸಂಪಾದಕಿ
ರೇಶ್ಮಾ ಜಿ. ಭಟ್

ಸಂಪಾದಕೀಯ ಸಲಹೆ
ಡಾ. ಅಜಕ್ಕಳ ಗಿರೀಶ ಭಟ್
ಡಾ. ಶ್ರೀಧರ್ ಎಚ್.ಜಿ.
ಡಾ. ವರದರಾಜ ಚಂದ್ರಗಿರಿ
ಡಾ. ಜಿ.ಬಿ. ಹರೀಶ್
ಶ್ರೀ ಎಂ.ಎ. ಸುಬ್ರಹ್ಮಣ್ಯ

ಚಿಂತನ ಬಯಲು
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574 219

CHINTHANA BAYALU
Kannada Quarterly; A Peer Reviewed Journal
Volume 4, Issue 4, April-June 2016

Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
Karnataka
Phone : 9449772651
Email : chinthanabayalu@gmail.com

© : Reserved

Price : Rs. 50

Pages : 64

ಮುಖಪುಟ ಚಿತ್ರ : ಕುಶಾಲನಗರದಲ್ಲಿ ಬುದ್ಧ ಧ್ಯಾನ
Cover Photo by : **Atheetha Brahma**

Cover Design : **Kallur Nagesh**

Designed & Printed at :
Aakrithi Prints
Maximus Complex
Light House Hill Road
Mangaluru - 575 001
Tel. : 0824 2443002

ಸೂಚನೆ : ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

ಪುಟನೋಟ

1. ಗಮನಾರ್ಹ ಲೇಖಕಿ
ಡಾ. ಯಮುನಾ ಲಿಂಗಪ್ಪ ❖ ಡಾ. ಶ್ರೀಧರ ಎಚ್.ಜಿ. / 5

2. ಬಾಗಿಲನು ತೆರೆದು
❖ ಡಾ. ಮಾಧವ ಪೆರಾಜೆ / 23

3. ತಾತ್ತ್ವಿಕ ಪಠ್ಯವಾಗಿ ಕಾದಂಬರಿ :
ಭೈರಪ್ಪನವರ ಧರ್ಮಶ್ರೀಯನ್ನು
ಲಕ್ಷ್ಯದಲ್ಲಿ ಇರಿಸಿಕೊಂಡು ವಿಶ್ಲೇಷಣೆ
❖ ಪಿ.ಬಿ. ಪ್ರಸನ್ನ 43

4. ವಿವೇಕ ಶಾನಭಾಗ ಮತ್ತು
ವಸುಧೇಂದ್ರರ ಕತೆಗಳಲ್ಲಿ
ನವ ವಸಾಹತುಶಾಹಿಯ ಬಿಕ್ಕಟ್ಟುಗಳು
❖ ಕಿರಣ್ 51

5. ಆರ್ಯಾಂಬ ಪಟ್ಟಾಭಿಯವರ ವಿಶ್ವಧರ್ಮ'
❖ ಸುವರ್ಣ ಎಸ್. ಹುಡೇದ / 61

ಸಂಪಾದಕೀಯ

ಮೊನ್ನೆ ಮೊನ್ನೆ ಪತ್ರಿಕೆಗಳಲ್ಲಿ ಪ್ರಕಟವಾದ ವರದಿ: "ಮಹಾರಾಷ್ಟ್ರದಲ್ಲಿ ಖಾಲಿ ಇರುವ ಹಮಾಲಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ 2424 ಮಂದಿಯಲ್ಲಿ(ಕನಿಷ್ಟ ವಿದ್ಯಾರ್ಹತೆ ನಾಲ್ಕನೇ ತರಗತಿ), 5 ಎಂ.ಫಿಲ್, 253 ಸ್ನಾತಕೋತ್ತರ ಪದವಿ, 9 ಸ್ನಾತಕೋತ್ತರ ಡಿಪ್ಲೊಮಾ, 109 ಡಿಪ್ಲೊಮಾ ಹಾಗೂ 984 ಪದವೀಧರರು ಇದ್ದಾರೆ"

1989ರಲ್ಲಿ ಕೊಂಡಜ್ಜಿ ಕೆ.ವೆಂಕಟೇಶ್ ಅವರು ಡಾ.ಎಸ್.ಎಲ್. ಭೈರಪ್ಪನವರನ್ನು ಸಂದರ್ಶಿಸುವಾಗ, "ಇಂದಿನ ಶಿಕ್ಷಣದ ಬಗ್ಗೆ ನಿಮಗೇನನ್ನಿಸುತ್ತದೆ?" ಎಂಬ ಪ್ರಶ್ನೆ ಕೇಳಿದ್ದರು. ಅದಕ್ಕೆ ಭೈರಪ್ಪ ನವರ ಉತ್ತರ ಈ ಮುಂದಿನಂತಿತ್ತು. "ನಮ್ಮಲ್ಲಿ ನಡೆಯುತ್ತಿರುವುದು ಕೇವಲ ಬಿಳಿ ಕಾಲರುಗಳನ್ನು ಸೃಷ್ಟಿಸುವ ವಿದ್ಯಾಭ್ಯಾಸ. ಡಿಗ್ರಿ ಪರೀಕ್ಷೆ ಮುಗಿಸಿಕೊಂಡು ಊರಿಗೆ ಹೊರಟಿರುವ ಯುವಕನು ರೈಲ್ವೆ ಸ್ಟೇಶನ್ನಿನಲ್ಲಿ ತನ್ನ ಪೆಟ್ಟಿಗೆಯನ್ನು ಒಂದು ಫ್ಲಾಟ್‌ಪಾರಂನಿಂದ ಇನ್ನೊಂದು ಫ್ಲಾಟ್‌ಪಾರಂಗೆ ತೆಗೆದುಕೊಂಡು ಹೋಗಲಾರದೆ ಸುಸ್ತು ಹೊಡೆಯುವನು; ಅವನನ್ನು ಸತಾಯಿಸಿ ಒಂದಕ್ಕೆ ನಾಲ್ಕರಷ್ಟು ಕೂಲಿ ವಸೂಲಿ ಮಾಡುವ ಪೋರ್ಟರನ ಚಿತ್ರಗಳನ್ನು ನೋಡಿದರೆ ನಮ್ಮ ವಿದ್ಯಾಭ್ಯಾಸ ಹೇಗಿದೆ ಎಂಬುದು ನಿಮಗೇ ಅರ್ಥವಾಗುತ್ತದೆ." ಇದಕ್ಕೆ ಯಾವ ವ್ಯಾಖ್ಯಾನವೂ ಅಗತ್ಯವಿಲ್ಲವೆನಿಸುತ್ತದೆ. ಮೇಲಿನ ಪತ್ರಿಕಾ ವರದಿ ಹಾಗೂ ಭೈರಪ್ಪನವರ ಮಾತುಗಳನ್ನು ಒಟ್ಟಿಗೆ ಇಟ್ಟು ಚಿಂತಿಸಿದಾಗ ಉನ್ನತ ಶಿಕ್ಷಣದ ಸ್ಥಿತಿಗತಿ–ಉದ್ಯೋಗ–ದೈಹಿಕಶ್ರಮ – ಬೌದ್ಧಿಕಶ್ರಮ ಇವೆಲ್ಲವುಗಳ ಕುರಿತಂತೆ ಬಿಚ್ಚಿಕೊಳ್ಳುವ ಅರ್ಥಗಳ ಪದರುಗಳು ಎಷ್ಟು?!

– ಸಂ.

ಗಮನಾರ್ಹ ಲೇಖಕಿ :
ಡಾ. ಯಮುನಾ ಲಿಂಗಪ್ಪ

ಡಾ. ಶ್ರೀಧರ ಎಚ್.ಜಿ.
ಕನ್ನಡ ವಿಭಾಗದ ಮುಖ್ಯಸ್ಥರು
ವಿವೇಕಾನಂದ ಕಾಲೇಜು, ಪುತ್ತೂರು, ದ.ಕ.

ಪುರುಷ ನಿರ್ಮಿತ ಸಾಹಿತ್ಯ ಚರಿತ್ರೆಯಲ್ಲಿ ಮಹಿಳೆಗೆ ಪ್ರಾಮುಖ್ಯ ಸಿಕ್ಕಿಲ್ಲವೆಂಬುದು ಸತ್ಯ. ಚರಿತ್ರೆಯ ಸಂದರ್ಭದಲ್ಲಿಯೂ ಈ ಬಗೆಯ ಪ್ರವೃತ್ತಿಯನ್ನು ನೋಡಲು ಸಾಧ್ಯ. ಆರಂಭದ ಹಂತದಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯೊಂದನ್ನು ನಿರ್ಮಿಸುವುದೇ ಅತ್ಯಂತ ದೊಡ್ಡ ಸವಾಲಿನ ಕೆಲಸವಾಗಿತ್ತು. ತಾಳೆಗರಿಗಳಲ್ಲಿ ಹುದುಗಿದ್ದ ಕನ್ನಡದ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸುವುದು ಅತ್ಯಂತ ಶ್ರಮದಾಯಕವೂ, ಸಮಯವನ್ನು ಬೇಡುವ ಕ್ಷೇತ್ರವೂ ಆಗಿತ್ತು. ಆದರೂ ಕನ್ನಡದ ವಿದ್ವಾಂಸರು ಪ್ರಾಚೀನ ಗ್ರಂಥಗಳನ್ನು ಸಂಗ್ರಹಿಸಿ ಪ್ರಕಟಿಸಿದರು. ಇದರ ಭಾಗವಾಗಿ ಬರೆದ ಮುನ್ನುಡಿ, ಉಪೋದ್ಘಾತಗಳು ಸಾಹಿತ್ಯ ಚರಿತ್ರೆಯನ್ನು ಬರೆಯುವುದಕ್ಕೆ ಮೂಲ ಆಕರಗಳಾಗಿ ಪರಿಣಮಿಸಿದವು. ಇದರ ಮುಂದುವರಿದ ಭಾಗವಾಗಿ ಕನ್ನಡ ಸಾಹಿತ್ಯ ಚರಿತ್ರೆಯ ಹಲವು ನಮೂನೆಗಳು ಬಂದವು. ರಂ.ಶ್ರೀ. ಮುಗಳಿಯವರು ವ್ಯಕ್ತಿಗತ ನೆಲೆಯಲ್ಲಿ ಬರೆದ 'ಕನ್ನಡ ಸಾಹಿತ್ಯ ಚರಿತ್ರೆ' ಕೃತಿಯಿಂದ ತೊಡಗಿ ಮೈಸೂರು, ಬೆಂಗಳೂರು ವಿಶ್ವವಿದ್ಯಾಲಯಗಳು ಪ್ರಕಟಿಸಿದ ಕನ್ನಡ ಸಾಹಿತ್ಯ ಚರಿತ್ರೆಯ ವಿವಿಧ ಸಂಪುಟಗಳು ಪ್ರಕಟವಾಗಿವೆ. ಇಷ್ಟಾಗಿಯೂ ಈ ಬಗೆಯ ಸಾಹಿತ್ಯ ಚರಿತ್ರೆಯ ಸಂಪುಟಗಳಲ್ಲಿ ಮಹಿಳೆಯರ ಬರವಣಿಗೆಗೆ ಸಿಕ್ಕಿದ ಪ್ರಾಶಸ್ತ್ಯ ತೀರಾಕಡಿಮೆ ಎಂದೇ ಹೇಳಬೇಕು. ಮಹಿಳೆಯರ ಬರವಣಿಗೆಯ ಬಗೆಗೆ ಪ್ರಸ್ತಾಪ ಮಾಡುವ ಸಂದರ್ಭ ಬಂದಾಗ, ಕೆಲವರ ಹೆಸರನ್ನು ಹೇಳಿ ಮುಗಿಸಿದ್ದೇ ಹೆಚ್ಚು. ಹೀಗಾಗಿ ಕನ್ನಡದಲ್ಲಿ ಬಂದಿರುವ ಸಾಹಿತ್ಯ ಚರಿತ್ರೆಯ ಕೃತಿಗಳಲ್ಲಿ ಮಹಿಳಾ ಸಾಹಿತ್ಯವನ್ನು ಪ್ರಧಾನ ಧಾರೆಯಾಗಿ ಗುರುತಿಸಿದ್ದೇ ಇಲ್ಲ.

1980ರ ದಶಕದ ಹೊತ್ತಿಗೆ ಮಹಿಳೆಯರ ಬರವಣಿಗೆಯ ಅಸ್ತಿತ್ವದ ಕುರುಹುಗಳನ್ನು ಗುರುತಿಸುವ ಪ್ರಯತ್ನಗಳು ಕರ್ನಾಟಕದಲ್ಲಿ ವ್ಯಾಪಕವಾಗಿ ನಡೆದವು. ಡಾ.ವಿಜಯಾ ದಬ್ಬೆ, ಪ್ರೊ.ಚಿ.ನ.ಮಂಗಳಾ, ಬಿ.ಎನ್.ಸುಮಿತ್ರಾಬಾಯಿ ಮೊದಲಾದವರು ಈ ನಿಟ್ಟಿನಲ್ಲಿ ಸಾಕಷ್ಟು ಶ್ರಮಿಸಿದ್ದಾರೆ. ಮಾತ್ರವಲ್ಲ, ಮರೆಗೆ ಸಂದುಹೋಗಿದ್ದ ತಿರುಮಲಾಂಬಾ, ಆರ್.ಕಲ್ಯಾಣಮ್ಮ, ಸರಸ್ವತಿಬಾಯಿ ರಾಜವಾಡೆ ಮೊದಲಾದವರು ಮುನ್ನೆಲೆಗೆ ಬಂದು ನಿಂತರು. ಇಲ್ಲಿಂದ ಮುಂದೆ ಮಹಿಳೆಯರ ಅಕ್ಷರ ಲೋಕವನ್ನು ಗುರುತಿಸುವ ಪ್ರಯತ್ನಗಳು ವ್ಯಾಪಕವಾಗಿ ನಡೆಯಿತು. ಇದೆಲ್ಲದರ ಒಟ್ಟೂ ದಾಖಲೆಯಾಗಿ ಡಾ.ಎಚ್.ಎಸ್. ಶ್ರೀಮತಿ ಇವರ ಸಂಪಾದಕತ್ವದಲ್ಲಿ 'ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ' 2006ರಲ್ಲಿ ಪ್ರಕಟವಾಯಿತು. ನೂರಾರು ಜನ ಮಹಿಳಾ ಬರಹಗಾರರು ಒಮ್ಮೆಲೆ ಇಲ್ಲಿ ಓದುಗರಿಗೆ ಲಭ್ಯವಾದರು. ಕನ್ನಡದ ಓದುಗರಿಗೆ ಅದ್ಭುತವಾದ ಮಹಿಳೆಯರ ಸಾಹಿತ್ಯ ಲೋಕವೊಂದು ಈ ಕೃತಿಯ ಮೂಲಕ ತೆರೆದುಕೊಂಡಿತು. ಇದಕ್ಕಾಗಿ ಶ್ರಮಿಸಿದ ಎಲ್ಲರೂ ಅಭಿನಂದನೆಗೆ ಯೋಗ್ಯರು ಎಂಬಲ್ಲಿ ಎರಡು ಮಾತಿಲ್ಲ. ಇಷ್ಟಾಗಿಯೂ ಮಾಹಿತಿ ಲಭ್ಯವಿಲ್ಲದೆ, ಕೃತಿಗಳೇ ಸಿಗದೆ, ಮಹಿಳಾ ಸಾಹಿತ್ಯ ಚರಿತ್ರೆಯಲ್ಲಿಯೂ ದಾಖಲಾಗದ ಮಹಿಳಾ ಬರಹಗಾರರು ಇರಬಹುದು. ಈ ದೃಷ್ಟಿಯಿಂದ ಡಾ. ಯಮುನಾ ಲಿಂಗಪ್ಪ ಇವರನ್ನು ಅಗತ್ಯವಾಗಿ ಗಮನಿಸಬೇಕಾಗುತ್ತದೆ.

ಮೂಲತ: ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿಯವರಾಗಿದ್ದ ಯಮುನಾ ಇವರ ಹೆತ್ತವರು 1920ರ ವೇಳೆಗೆ ನಂಜನಗೂಡಿಗೆ ವಲಸೆ ಹೋಗಿದ್ದರು. ಹೀಗಾಗಿ 06.12.1929 ರಂದು ನಂಜನಗೂಡಿನಲ್ಲಿ ಇವರು ಜನಿಸಿದರು. ಶಿವಳ್ಳಿ ಬ್ರಾಹ್ಮಣ ಮನೆತನಕ್ಕೆ ಸೇರಿದ ಲಕ್ಷ್ಮೀನಾರಾಯಣ ಆಚಾರ್ ಮತ್ತು ಕಮಲಮ್ಮ ಇವರ ಹೆತ್ತವರು. ನಂಜನಗೂಡಿನಲ್ಲಿಯೇ ಪ್ರಾಥಮಿಕ ಶಿಕ್ಷಣವನ್ನು ಪಡೆದ ನಂತರ ಮೈಸೂರಿನಲ್ಲಿ ಹೈಸ್ಕೂಲ್ ಶಿಕ್ಷಣವನ್ನು ಪಡೆದರು. ಅಲ್ಲಿಯೇ ಇರುವ ಸೈಂಟ್‌ಫಿಲೋಮಿನಾ ಕಾಲೇಜಿನಲ್ಲಿ ಅಧ್ಯಯನ ಮಾಡಿ ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎಸ್. ಪದವಿಯನ್ನು ಪಡೆದರು. ಅನಂತರ ಮಂಗಳೂರಿನಲ್ಲಿ ಅಧ್ಯಯನ ಮಾಡಿ ಮದ್ರಾಸು ವಿಶ್ವವಿದ್ಯಾನಿಲಯದಿಂದ ಬಿ.ಟಿ. ಪದವಿಯನ್ನು ಪಡೆದರು. ಶಿಕ್ಷಕಿಯಾಗುವುದರ ಕಡೆಗೆ ಅವರಿಗೆ ವಿಶೇಷ ಒಲವಿತ್ತು. ಹೀಗಾಗಿ ಸ್ವಲ್ಪ ಸಮಯ ಚನ್ನರಾಯಪಟ್ಟಣದಲ್ಲಿ ಹೈಸ್ಕೂಲ್ ಶಿಕ್ಷಕಿಯಾಗಿ ಕೆಲಸ ಮಾಡಿದರು.

1953ರಲ್ಲಿ ಶಿವಮೊಗ್ಗ ಜಿಲ್ಲೆ ಸೊರಬ ತಾಲೂಕಿನ ನಿಸರಾಣಿ ಸಮೀಪದ ಬನದಕೊಪ್ಪ ಊರಿನ ಹವ್ಯಕ ಸಮುದಾಯದ ಬಿ.ಟಿ. ಲಿಂಗಪ್ಪ ಇವರನ್ನು ವಿವಾಹವಾದರು. ಈ ವೇಳೆಗೆ ಬಿ.ಟಿ. ಲಿಂಗಪ್ಪನವರು ಅಮೆರಿಕಕ್ಕೆ ಉನ್ನತ ವ್ಯಾಸಂಗದ ಸಲುವಾಗಿ ತೆರಳಿದರು. ಹಡಗಿನಲ್ಲಿ ಅಮೆರಿಕಕ್ಕೆ ಹೋಗುವ ಕಾಲವದು. ಪತಿಯೊಂದಿಗೆ ಯಮುನಾ ಅವರೂ ಅಮೆರಿಕಕ್ಕೆ ಪ್ರಯಾಣ ಮಾಡಿದರು. ಅಮೆರಿಕಕ್ಕೆ ಹೋಗುವ ವೇಳೆಗಾಗಲೇ 'ತೀರದ ಆಸೆ' ಕಾದಂಬರಿ(1952), 'ಪತಂಗ' ಕಥಾಸಂಕಲನವನ್ನು(1953) ಪ್ರಕಟಿಸಿದ್ದರು. ಸಂಕಲನ ರೂಪದಲ್ಲಿ ಬರುವುದಕ್ಕಿಂತ ಮೊದಲು ಇವರ ಕಥೆಗಳು ಪ್ರಜಾಮತ, ರಾಯಭಾರಿ, ಚಿತ್ರಗುಪ್ತ ಮೊದಲಾದ ಅಂದಿನ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. 'ಪರ್ವತವಾಹಿನಿ' ಎಂಬ ಕಾವ್ಯನಾಮದಲ್ಲಿ ಇವರು ಬರೆಯುತ್ತಿದ್ದರು. ಅರ್ಧಶತಮಾನಕ್ಕಿಂತ ಹೆಚ್ಚು ಅಮೆರಿಕದಲ್ಲಿ ನೆಲೆಸಿ ಅಮೆರಿಕದವರೇ ಆಗಿಹೋದರು. ವಿಶ್ವನಾಥ (14.02.1954) ಜಯಶ್ರೀ(11.06.1959) ಮತ್ತು ಜೈರಾಮ್ ರಾವ್ (1.9.1960) ಇವರ ಮಕ್ಕಳು.

ಅಮೆರಿಕಕ್ಕೆ ತೆರಳಿದ ಅನಂತರ ಯಮುನಾರವರು ಅಲ್ಲಿನ ಮಿಚಿಗನ್ ವಿಶ್ವವಿದ್ಯಾಲಯ ದಿಂದ ಮೈಕ್ರೋಬಯಾಲಜಿಯಲ್ಲಿ ಎಂ.ಎಸ್. ಮತ್ತು ಡಾಕ್ಟರೇಟ್ ಪದವಿಯನ್ನು ಪಡೆದರು. ವರ್ಸೆಸ್ಟರ್ ಮಸಚುಸೆಟ್ಸ್‌ನ ಹೋಲಿಕ್ರಾಸ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಅಲ್ಲಿನ ಮೆಕ್‌ಗಿಲ್ ರಸ್ತೆಯಲ್ಲಿ 50 ವರ್ಷಗಳ ಕಾಲ ನೆಲೆಸಿದರು. ತಮ್ಮ ಜೀವಿತಾವಧಿಯ ಬಹುಭಾಗವನ್ನು ಅಮೆರಿಕದಲ್ಲಿ ಕಳೆದಿರುವ ಡಾ. ಯಮುನಾ ಲಿಂಗಪ್ಪನವರು ತಮ್ಮ ಪತಿಯ ಊರಿಗೆ ಆಗಾಗ ಬರುತ್ತಿರುತ್ತಾರೆ. ಉಳಿದ ಸಮಯದಲ್ಲಿ ಅಮೆರಿಕದಲ್ಲಿ ತಮ್ಮ ಮಕ್ಕಳೊಂದಿಗೆ ನೆಲೆಸಿದ್ದಾರೆ. ತಮ್ಮ ಉದ್ಯೋಗದ ಅವಧಿಯಲ್ಲಿ ಯುರೋಪಿನ ಹಲವು ದೇಶಗಳಲ್ಲಿ ಪ್ರವಾಸ ಮಾಡಿದ ಅನುಭವ ಅವರದು. ವೈಯಕ್ತಿಕವಾಗಿ ಹಲವು ವೈಜ್ಞಾನಿಕ ಲೇಖನಗಳನ್ನು ಪ್ರಕಟಿಸಿದ್ದಾರೆ. ಅಲ್ಲದೆ ತಮ್ಮ ಪತಿ ಡಾ. ಲಿಂಗಪ್ಪ ಅವರ ಸಹಭಾಗಿತ್ವದಲ್ಲಿ ಹಲವು ಲೇಖನಗಳನ್ನು ಪ್ರಕಟಿಸಿದ ಹಿರಿಮೆ ಅವರದು.

ಡಾ.ಯಮುನಾ ಅವರ ಬಗೆಗೆ ಮಾತನಾಡುವಾಗ ಡಾ.ಬಿ.ಟಿ.ಲಿಂಗಪ್ಪನವರ ಬಗೆಗೆ ನಾಲ್ಕು ಮಾತುಗಳನ್ನು ಹೇಳದೇ ಇರಲು ಸಾಧ್ಯವಿಲ್ಲ. ಈಗಾಗಲೇ ಸೂಚಿಸಿದಂತೆ ಅಪ್ಪಟ ಮಲೆನಾಡಿನ ಮಡಿಲಿನಿಂದ ಬಂದಿರುವ ಬಿ.ಟಿ. ಲಿಂಗಪ್ಪನವರ ಜನ್ಮಸ್ಥಳ ಬನದಕೊಪ್ಪ. ಕೃಷಿಪ್ರಧಾನ ಕುಟುಂಬ ಅವರದು. ಶ್ರೀಯುತ ತಿಮ್ಮಪ್ಪ ಮತ್ತು ಲಕ್ಷ್ಮಮ್ಮ ದಂಪತಿಗಳ ಮಗನಾಗಿ 19.3.1927ರಂದು ಜನಿಸಿದ ಲಿಂಗಪ್ಪನವರು 20.02.2010ರಂದು ವಿಧಿವಶ ರಾದರು. ತಮ್ಮ ಹುಟ್ಟಿದ ಊರಿನಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದ ಲಿಂಗಪ್ಪನವರು 1945ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎಸ್ಸಿ.ಪದವಿಯನ್ನು ಪಡೆದರು. 1950ರಲ್ಲಿ ಕೃಷಿವಿಜ್ಞಾನದಲ್ಲಿ ಬಿ.ಎಸ್.ಪದವಿ, 1952ರಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಿಂದ ಎಂ.ಎಸ್. ಪದವಿಯನ್ನು ಪಡೆದರು. ಇಲ್ಲಿಂದ ಮುಂದೆ ಉನ್ನತ ವ್ಯಾಸಂಗಕ್ಕಾಗಿ ಅಮೆರಿಕಕ್ಕೆ ತೆರಳಿದ ಅವರು ಅಮೆರಿಕದ ಪುರ್ದು ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿಯನ್ನು ಗಳಿಸಿದರು. 1957 ರಿಂದ 1959ರವರೆಗೆ ವ್ಯಾಸಂಗ ಮಾಡಿ ಮಿಚಿಗನ್ ವಿಶ್ವವಿದ್ಯಾನಿಲಯದಿಂದ ಪೋಸ್ಟ್ ಡಾಕ್ಟರೇಟ್ ಪದವಿ ಪಡೆದರು.

ಅಮೆರಿಕಕ್ಕೆ ತೆರಳುವ ಮೊದಲು 1952-53ರಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ ದಲ್ಲಿ ಉಪನ್ಯಾಸಕರಾಗಿದ್ದರು. 1960ರಲ್ಲಿ ಮಿಚಿಗನ್ ಸ್ಟೇಟ್ಸ್ ವಿವಿಯಲ್ಲಿ ಅಸಿಸ್ಟೆಂಟ್ ಪ್ರೊಫೆಸರ್, 1962-64ರಲ್ಲಿ ಅಸೋಸಿಯೇಟ್ ಪ್ರೊಫೆಸರ್, 1965-68ರ ಅವಧಿಯಲ್ಲಿ ಬಯಾಲಜಿ ಪ್ರೊಫೆಸರ್ ಆಗಿ ಸೇವೆಯನ್ನುಸಲ್ಲಿಸಿದ ಇವರು 1968ರಿಂದ1996ರ ಸಮಯದಲ್ಲಿ ಮಸಚೂಸೆಟ್ಸ್‌ನ ಹೋಲಿಕ್ರಾಸ್ ಕಾಲೇಜಿನಲ್ಲಿ ದೀರ್ಘ ಅವಧಿಯವರೆಗೆ ಪ್ರಾಧ್ಯಾಪಕರಾಗಿದ್ದರು. ಜೊತೆಗೆ ಸ್ವಿಟ್ಸರ್‌ಲ್ಯಾಂಡ್‌ನ ಜಿನೇವ ವಿಶ್ವವಿದ್ಯಾನಿಲಯದ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದ ಗೌರವ ಅವರದು. ತಮ್ಮ ಸಂಶೋಧನೆಗಾಗಿ ಭಾರತ ಮತ್ತು ವಿದೇಶದ ಹಲವು ವಿಶ್ವವಿದ್ಯಾನಿಲಯಗಳಿಂದ ಸಂಶೋಧನಾ ಫೆಲೋಶಿಪ್, ಸಹಾಯಧನಗಳನ್ನು ಪಡೆದು ವಿಶೇಷ ಅಧ್ಯಯನ ನಡೆಸಿದ ಹೆಗ್ಗಳಿಕೆ ಡಾ.ಲಿಂಗಪ್ಪ ಅವರದು. ಸುಮಾರು 40ರಷ್ಟು ವೈಜ್ಞಾನಿಕ ಸಂಶೋಧನಾ ಲೇಖನಗಳನ್ನು ವೈಯಕ್ತಿಕವಾಗಿ ಪ್ರಕಟಿಸಿದ್ದಾರೆ. ಬೊಟಾನಿಕಲ್ ಗೆಜೆಟ್, ಕರೆಂಟ್ ಸೈನ್ಸ್, ಅಮೆರಿಕನ್ ಜರ್ನಲ್ ಆಫ್ ನ್ಯೂ ಸೈಂಟಿಸ್ಟ್, ಸೈಂಟಿಫಿಕ್ ಅಮೆರಿಕಾ ಮೊದಲಾದ ಅಂತರ ರಾಷ್ಟ್ರೀಯ ಮಟ್ಟದ ವೈಜ್ಞಾನಿಕ ಪತ್ರಿಕೆಗಳಲ್ಲಿ ಇವರ ಲೇಖನಗಳು ಪ್ರಕಟವಾಗಿವೆ. 'ಫಂಗಸ್' ಬಗೆಗೆ ವಿಶೇಷ ಅಧ್ಯಯನ ಮಾಡಿರುವ

ಡಾ.ಲಿಂಗಪ್ಪ ಅವರು ಸರಳ ಸ್ವಭಾವದ ಮಿತಭಾಷಿ.

ಡಾ. ಯಮುನಾ ಲಿಂಗಪ್ಪನವರ ಸಾಹಿತ್ಯ ಕೃತಿಗಳನ್ನು ಗಮನಿಸುವುದಕ್ಕಿಂತ ಮೊದಲು ಅವರ ಇನ್ನೊಂದು ಸಾಹಸವನ್ನು ಹೇಳದೇ ಇರಲು ಸಾಧ್ಯವಿಲ್ಲ. ತಮ್ಮ ಟ್ರಿಪಲ್ ಡೆಕ್ಕರ್ಸ್ ಮನೆಯ ಒಂದು ಭಾಗವನ್ನು ತುಸು ಮಾರ್ಪಡಿಸಿ ಅಮೆರಿಕಾದ ಬೋಸ್ಟನ್ ನಗರದ ಹತ್ತಿರದ ದಕ್ಷಿಣ ವರ್ಸೆಸ್ಟ್‌ರ್‌ನಲ್ಲಿ ಅನ್ನಪೂರ್ಣ ಉಪಹಾರ ಗೃಹವನ್ನು 01.06.1976ರಂದು ಆರಂಭಿಸಿದರು. ಇದು ಶುದ್ಧ ಸಸ್ಯಾಹಾರಿ ಉಪಹಾರ ಗೃಹ. ಸುಮಾರು 17 ವರ್ಷಗಳ ಕಾಲ ಈ ಉಪಹಾರ ಗೃಹವನ್ನು ನಡೆಸಿದರು. ಅಲ್ಲಿನ ಸಾವಿರಾರು ಅಮೆರಿಕನ್ನರಿಗೆ ದಕ್ಷಿಣ ಭಾರತದ, ಅದರಲ್ಲಿಯೂ ಉಡುಪಿ ಶೈಲಿಯ ತಿಂಡಿ ತಿನಿಸುಗಳ ರುಚಿಯನ್ನು ಉಣಬಡಿಸಿದರು. ಇಲ್ಲಿ ಆಹಾರ ಸೇವಿಸಿದ ಸಾವಿರಾರು ಮಂದಿ ಅಮೆರಿಕನ್ನರು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಮಾತ್ರವಲ್ಲ, ಮಾಂಸಾಹಾರವಿಲ್ಲದೆ ಬದುಕಲು ಸಾಧ್ಯ ಎಂಬ ಸಸ್ಯಾಹಾರದ ಪಾಠವನ್ನು ದೂರದ ಅಮೆರಿಕದಲ್ಲಿ ಅಮೆರಿಕನ್ನರಿಗೆ ಮಾಡಿದರು; ಸಸ್ಯಾಹಾರದ ಬಗೆಗೆ ವಿಶೇಷ ತಿಳುವಳಿಕೆಯನ್ನು ಮೂಡಿಸಿದರು. ಅಮೆರಿಕದಲ್ಲಿ ಇಂತಹ ಪ್ರಯೋಗವನ್ನು ಮಾಡಿದ ಮತ್ತೊಬ್ಬರು ಸಿಗಲಾರರು. ಅನ್ನಪೂರ್ಣ ಉಪಹಾರ ಗೃಹದ ಅನುಭವದ ಹಿನ್ನೆಲೆಯಲ್ಲಿ ಈ ದಂಪತಿಗಳು ಜೊತೆಯಾಗಿ WHOLESOME NUTRITION ಕೃತಿಯನ್ನು ಇಂಗ್ಲಿಷ್‌ನಲ್ಲಿ ಬರೆದು ಪ್ರಕಟಿಸಿದರು. ವಿಶೇಷವೆಂದರೆ ಇಲ್ಲಿನ ಇಂಗ್ಲಿಷ್ ಹೆಸರಿನ ಜೊತೆಗೆ ಕನ್ನಡದ ಶಬ್ದವನ್ನು ಇಂಗ್ಲಿಷ್ ಅಕ್ಷರದಲ್ಲಿ ನೀಡಿದ್ದಾರೆ. ಉದಾಹರಣೆಗೆ Tarakari Saru (Vegetable soup) Pudina Pakoda (Mint savory) ಎಂಬ ಹೆಸರುಗಳನ್ನು ಗಮನಿಸಬಹುದು. ಈ ಕೃತಿಯಲ್ಲಿ ತಿಂಡಿ ತಿನಿಸುಗಳನ್ನು ತಯಾರಿಸುವ ವಿಧಾನವನ್ನು ಸಾಕಷ್ಟು ವಿವರವಾಗಿ ಬರೆದಿದ್ದಾರೆ.

ನನಗೆ ಪರಿಚಯವಾಗುವ ವೇಳೆಗೆ ಈ ದಂಪತಿಗಳು ಮಂಚಿಯ ಸಮೀಪದ ತೋಟದ ಮನೆಯಲ್ಲಿ ವಾಸವಾಗಿದ್ದರು. ಅಮೆರಿಕದಿಂದ ಪ್ರತಿ ವರ್ಷ ನವೆಂಬರ್ ವೇಳೆಗೆ ಮಂಚಿಗೆ ಬರುವ ಇವರು ಮಾರ್ಚ್‌ವರೆಗೆ ಇಲ್ಲಿದ್ದು, ಉಳಿದ ಸಮಯವನ್ನು ಅಮೆರಿಕದಲ್ಲಿ ಕಳೆಯುತ್ತಿದ್ದರು. ಭಾರತದ ಸಂಸ್ಕೃತಿ, ಜೀವನ ಶೈಲಿಯ ಬಗೆಗೆ ವಿಶೇಷ ವ್ಯಾಮೋಹವುಳ್ಳ ಇವರನ್ನು ನಾನು ಭೇಟಿಯಾದದ್ದು ತೀರಾ ಆಕಸ್ಮಿಕ. ತಮ್ಮಲ್ಲಿನ ಗ್ರಂಥಗಳನ್ನು ದಾನಮಾಡುತ್ತಾರೆ ಎಂಬ ವಿಷಯ ತಿಳಿದು ಅವರ ಮನೆಗೆ ಕಾಲೇಜಿನ ವತಿಯಿಂದ ನಾವು ನಾಲ್ಕಾರು ಮಂದಿ ಹೋದೆವು. ಅವರ ಭೇಟಿಯ ಅನಂತರ ವಿವೇಕಾನಂದ ಕಾಲೇಜಿನ ಗ್ರಂಥಾಲಯಕ್ಕೆ ಸುಮಾರು ಒಂದೂವರೆ ಲಕ್ಷರೂಪಾಯಿ ಮೌಲ್ಯದ ಅಪೂರ್ವ ಗ್ರಂಥಗಳನ್ನು ನೀಡಿದರು. ಅಲ್ಲದೆ ಸಂಶೋಧನೆಯ ಸಂದರ್ಭದಲ್ಲಿ ನಿರ್ಮಿಸಿದ್ದ ನೂರಾರು ಸ್ಲೈಡುಗಳನ್ನು ಪ್ರಯೋಗಾಲಯಕ್ಕೆ ನೀಡಿದರು. ಅವರನ್ನು ಭೇಟಿಯಾದ ಮೇಲೆ ನನ್ನಲ್ಲಿ ಸಾರ್ಥಕತೆಯ ಭಾವನೆ ಮೂಡಿತು. ಅರ್ಧಶತಮಾನದ ಹಿಂದೆ ಹಡಗಿನಲ್ಲಿ ಒಂದೂವರೆ ತಿಂಗಳು ಪ್ರಯಾಣ ಮಾಡಿ ಅಮೆರಿಕಕ್ಕೆ ಹೋದ ಇವರ ಆತ್ಮವಿಶ್ವಾಸ, ಅಲ್ಲಿ ಮಾಡಿದ ಸಾಧನೆಯನ್ನು ಯಾರಾದರೂ ಮೆಚ್ಚಲೇ ಬೇಕು.

ಡಾ.ಯಮುನಾ ಲಿಂಗಪ್ಪ ಇವರ ಮೊದಲ ಕೃತಿ ತೀರದ ಆಸೆ(1952)ಕಾದಂಬರಿ.ಇದು ಅವರ ವಿವಾಹಕ್ಕಿಂತ ಮೊದಲು ಬರೆದ ಕೃತಿ. ಈ ಸಮಯದಲ್ಲಿ ಅವರು ಅ.ಲ. ಯಮುನಾ, ಬಿ.ಎಸ್‌ಸಿ. ಬಿ.ಟಿ.ಎಂಬ ಹೆಸರಿನಲ್ಲಿ ಬರೆಯುತ್ತಿದ್ದರು. ಈ ಕೃತಿಯನ್ನು ವಸಂತ ಗ್ರಂಥಮಾಲೆ

ಸಾಗರ ಮತ್ತು ಜಲಂಧರ ಪ್ರಕಟಣಾಲಯ ಜೊತೆಯಾಗಿ ಪ್ರಕಟಪಡಿಸಿವೆ. ಕೃತಿಗೆ ಆರಂಭದಲ್ಲಿ ಟಿ.ಮಹಾಬಲೇಶ್ವರ ಭಟ್ಟರ ಮುನ್ನುಡಿಯಿದೆ. ಇವರ ಬರವಣಿಗೆಯ ಬಗೆಗೆ ಮುನ್ನುಡಿಯಲ್ಲಿ ಬರೆಯುತ್ತಾ "ಯಾವುದೇ ರೀತಿಯ ರಾಜಕೀಯ ಬಣ್ಣಕಟ್ಟಿ, ಪಕ್ಷ ಪ್ರತಿಪಕ್ಷಗಳೆಂಬ ಗೊಂದಲದಲ್ಲಿ ಬೀಳುವಂತೆ ಮಾಡಲು ಇವರ ಲೇಖನಿಯು ಮುಂದೆ ಬಂದಿಲ್ಲ. ಅವರ ಸ್ವಂತ ಅನುಭವಕ್ಕಾಗಿ ಕಲಿತ ವಿದ್ಯೆ, ವಿಶಾಲವಾದ ಮನೋಭಾವನೆ, ತೀಕ್ಷ್ಣವಿಮರ್ಶನಾದೃಷ್ಟಿ, ಸೂಕ್ಷ್ಮವಾದ ಸಾಹಿತ್ಯಾಭ್ಯಾಸ ಇವುಗಳಿಂದ ನಿಂತವುಗಳಾಗಿವೆ" ಎಂದು ಹೇಳಿದ್ದಾರೆ.

ತೀರದ ಆಸೆ ಕಾದಂಬರಿಯ ವಸ್ತುವನ್ನು ಹೀಗೆ ಸಂಗ್ರಹಿಸಬಹುದು: ಆಧುನಿಕ ಶಿಕ್ಷಣವನ್ನು ಪಡೆದ ತರುಣ ಜನಾಂಗದ ಆಸೆ, ಆಮಿಷಗಳು, ಪಾಶ್ಚಾತ್ಯ ಶಿಕ್ಷಣದ ಮೂಲಕ ದೊರೆತ ಸಂಸ್ಕಾರವನ್ನು ಲೇಖಕಿ ಸೂಕ್ಷ್ಮವಾಗಿ ಇಲ್ಲಿ ಚಿತ್ರಿಸುತ್ತಾರೆ. ವೈಯಕ್ತಿಕ ನೆಲೆಯಲ್ಲಿ ಸ್ನೇಹಿತರ ನಡುವೆ ನಡೆಯುವ ಸಂಘರ್ಷದ ಚಿತ್ರ ಇಲ್ಲಿದೆ. ಪುರುಷಪ್ರಧಾನ ವ್ಯವಸ್ಥೆಯ ನಡುವೆ ಮಹಿಳೆಯರು ಶಿಕ್ಷಣವನ್ನು ಪಡೆಯುವಲ್ಲಿ ಇರುವ ಸವಾಲುಗಳನ್ನು ಲೇಖಕಿ ಅನಾವರಣ ಗೊಳಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ಸ್ತ್ರೀ ಶಿಕ್ಷಣದ ಬಗೆಗಿನ ಲೇಖಕಿಯ ಚಿಂತನೆಗಳು ಸಾಕಷ್ಟು ಪ್ರಗತಿಪರವಾಗಿರುವುದನ್ನು ನೋಡಬಹುದು.

ರಾಮನಾಥ, ನಿರ್ಮಲ ಮತ್ತು ಸುಮನಾ ಬಾಲ್ಯದಿಂದಲೂ ಪರಿಚಿತರು. ಮೆಟ್ರಿಕ್ಯುಲೇಶನ್ ತರಗತಿಯನ್ನು ಒಟ್ಟಿಗೆ ಉತ್ತೀರ್ಣರಾದರು. ನಿರ್ಮಲಳಿಗೆ ಆನಂದ ಎಂಬ ಹುಡುಗನೊಂದಿಗೆ ಮದುವೆಯಾಯಿತು. ಆದರೆ ಮದುವೆಯ ನಂತರವೂ ಸುಮನಾ ಮತ್ತು ನಿರ್ಮಲರ ಸ್ನೇಹ ಮುಂದುವರಿದಿತ್ತು. ಆಯುರ್ವೇದ ವೈದ್ಯರಾಗಿದ್ದ ತಂದೆಯ ಅಪೇಕ್ಷೆಗೆ ಅನುಗುಣವಾಗಿ ರಾಮನಾಥ ಮೆಡಿಕಲ್ ಕಾಲೇಜಿಗೆ ಸೇರಿದ. ಆದರೆ ಸುಮನಾಳಿಗೆ ಮೆಡಿಕಲ್ ಮಾಡುವ ಅಪೇಕ್ಷೆಯಿತ್ತು. ಡಾಕ್ಟರ್ ಕೋಟ್ನೀಸ್‌ರಂತೆ ದೀನ ದಲಿತರ ಸೇವೆಯನ್ನು ಮಾಡಬೇಕೆಂಬ ಹಂಬಲವಿತ್ತು. ಹೀಗಾಗಿ ಆರ್ಥಿಕ ತೊಂದರೆ, ಪ್ರಭಾವಿ ವ್ಯಕ್ತಿಗಳ ಬೆಂಬಲದ ಕೊರತೆಯಿಂದಾಗಿ ಸುಮನಾಳಿಗೆ ಮೆಡಿಕಲ್ ಸೀಟು ಸಿಗಲಿಲ್ಲ. "ನನ್ನಂತೆ ಆಸೆ ಧ್ಯೇಯಗಳನ್ನು ತುಂಬಿಕೊಂಡು ಯಾರೂ ಬಡವರಾಗಿ ಹುಟ್ಟಬಾರದು" ಎಂದು ಓದಿನಲ್ಲಿ ಆಸಕ್ತಿಯನ್ನೇ ಕಳೆದುಕೊಂಡಳು. ಆದರೆ ಎಲ್ಲರ ಒತ್ತಾಯಕ್ಕೆ ಕಟ್ಟುಬಿದ್ದು ಮೈಸೂರಿನ ಸೈಂಟ್ ಫಿಲೋಮಿನಾ ಕಾಲೇಜಿಗೆ ಪದವಿ ತರಗತಿಗೆ ಸೇರಿದಳು. ಅಲ್ಲಿನ ವಿದ್ಯಾರ್ಥಿಗಳ ನಡತೆಯಲ್ಲಿ ಆಕೆಗೆ ಪ್ರೇಮಕ್ಕೆ ಬದಲಾಗಿ ಕಾಮದ ಎಳೆಗಳು ಕಾಣತೊಡಗಿದವು. ಬೆಂಚಿನ ಮೇಲೆ ಹುಡುಗಿಯರ ವಿಷಯವನ್ನು ಹೇಸಿಗೆಯಾಗಿ ಬರೆಯುತ್ತಿದ್ದರು. ಹೀಗಾಗಿ ಅಲ್ಲಿನ ವಾತಾವರಣ, ಹುಡುಗರ ವರ್ತನೆ ಸುಮನಾಳಿಗೆ ಹಿಡಿಸಲಿಲ್ಲ. "ಹೊಟ್ಟೆ ಪಾಡೊಂದಲ್ಲದೆ ಬೇರಾವ ಕಲೆ, ಸಂಸ್ಕೃತಿಯನ್ನು ಈ ವಿದ್ಯೆ ಕಲಿಸುತ್ತದೆ" ಎಂಬ ನಿಲುವು ಆಕೆಯದು. ಪಾಶ್ಚಾತ್ಯ ಶಿಕ್ಷಣ ಪದ್ಧತಿಯ ಬಗೆಗಿನ ಭ್ರಮನಿರಸನ ಇಲ್ಲಿ ವ್ಯಕ್ತವಾಗಿದೆ.

ಮೆಡಿಕಲ್ ಕಾಲೇಜಿಗೆ ಸೇರಿದ ರಾಮನಾಥನಿಗೆ ಸೀನಿಯರ್ ವಿದ್ಯಾರ್ಥಿ ಜಯರಾಮ ಆತ್ಮೀಯ ಗೆಳೆಯನಾಗಿದ್ದ. ರಾಮನಾಥನ ಜೊತೆಯಲ್ಲಿ ಮನೆಗೆ ಬಂದ ಜಯರಾಮನ ವ್ಯಕ್ತಿತ್ವಕ್ಕೆ ಸುಮನಾ ಆಕರ್ಷಿತಳಾದಳು. ಸುಮನಾ ತೀವ್ರ ಸ್ವರೂಪದ ಜ್ವರಕ್ಕೆ ತುತ್ತಾದಾಗ ಜಯರಾಮನೇ ಆಕೆಗೆ ಅಗತ್ಯವಿದ್ದ ಔಷಧಿಗಳನ್ನು ತಂದುಕೊಟ್ಟನು. ಇಷ್ಟಾಗಿಯೂ ಆಕೆಯ ಜ್ವರ ನಿಮೋನಿಯಾಕ್ಕೆ ತಿರುಗಿತು. ಇಂತಹ ಸಂದರ್ಭದಲ್ಲಿ ಜಯರಾಮ ರೋಗಿಯನ್ನು ಚೆನ್ನಾಗಿ ನೋಡಿಕೊಂಡನು. ಮಾತ್ರವಲ್ಲ, ಪರೀಕ್ಷೆಯನ್ನು ಬರೆಯಲು ಪ್ರೋತ್ಸಾಹವನ್ನೂ ನೀಡಿದನು.

ಜಯರಾಮ ಮತ್ತು ಸುಮನಾ ಹತ್ತಿರವಾಗುತ್ತಿರುವುದು ರಾಮನಾಥನಿಗೆ ಇಷ್ಟವಾಗಲಿಲ್ಲ. ಮಹಿಳೆಯ ಬಗೆಗೆ ಇವರಿಬ್ಬರ ಮನೋಧರ್ಮದಲ್ಲಿ ಸಾಕಷ್ಟು ವ್ಯತ್ಯಾಸವಿತ್ತು. ರಾಮನಾಥನಿಗೆ ಹೆಣ್ಣು ಎಂದರೆ ಭೋಗದ ವಸ್ತುವಾಗಿತ್ತು. ಹೀಗಾಗಿ ಸುಮನಾಳಲ್ಲಿ ಬಂದು ಅಸಭ್ಯವಾಗಿ ಮಾತನಾಡುತ್ತಿದ್ದ. ಆದರೆ ಜಯರಾಮನಿಗೆ ಹೆಣ್ಣು ಗೌರವದ ಸಂಕೇತ, ತ್ಯಾಗಮಯಿ ಯಾಗಿದ್ದಳು. ಮಾತ್ರವಲ್ಲ, ಸುಮನಾಳ ತಾಯಿಯ ಬಗೆಗೂ ಜಯರಾಮನಿಗೆ ಆದರವಿತ್ತು. ಅವರನ್ನು 'ಅಮ್ಮ' ಎಂದೇ ಕರೆಯುತ್ತಿದ್ದ. ಈ ಸಂದರ್ಭದಲ್ಲಿ ಲೇಖಕಿ ಹೇಳುವ ಮಾತು ಪ್ರೇಮದ ಬಗೆಗಿನ ಅವರ ಮನೋಧರ್ಮವನ್ನು ಸೂಚಿಸುತ್ತದೆ. "ಆತ್ಮವನ್ನು ಆತ್ಮದಿಂದ ಒಲಿಸಿಕೊಂಡಾಗ ಮಾತ್ರ ನಿಜವಾದ ಪವಿತ್ರ ಪ್ರೇಮ ಒಡಮೂಡುವುದು! ಆ ಪ್ರೇಮದಲ್ಲಿ ಕಾಣುವ ಸುಖವೇ ಸ್ವರ್ಗ. ಅದಕ್ಕೆ ಬದಲಾಗಿ ಆತ್ಮವನ್ನು ಕಪಟವಾದ ಬಣ್ಣದ ಮಾತುಗಳಿಂದ ಸೂರೆಗೊಂಡರೆ ಆಗ ಒಡಮೂಡುವುದು ದ್ವೇಷ. ಆ ದ್ವೇಷದಿಂದ ಹುಟ್ಟುವುದೇ ತಿರಸ್ಕಾರ ಮತ್ತು ಚಿರವಿಯೋಗ!" ಎಂಬ ಮಾತಿನಲ್ಲಿ ಕಥೆಯು ಮುಂದೆ ಸಾಗಬಹುದಾದ ಸೂಚನೆಯೂ ಇದೆ.

ಸುಮನಾಳ ಕಾಲೇಜಿನಲ್ಲಿ ಮಹಿಳೆಯರಿಗೆ ವಿದ್ಯಾರ್ಥಿಗಳಿಂದ ಸಾಕಷ್ಟು ಕಿರುಕುಳವಾಗುತ್ತಿತ್ತು. ಬೋರ್ಡಿನ ಮೇಲೆ 'ಲತಾ–ರಾಮನ್ ನವೀನ ದಂಪತಿಗಳು' ಎಂದು ಬರೆದು ಅವರದೇ ತರಗತಿಯ ಹುಡುಗಿಯ ಮಾನ ಹಾನಿಗೆ ಯತ್ನಿಸಿದ್ದರು. ಹುಡುಗರ ಈ ಪ್ರವೃತ್ತಿಯನ್ನು ವಿರೋಧಿಸಿ ಪ್ರಿನ್ಸಿಪಾಲರಿಗೆ ದೂರು ಕೊಡುವುದು ಮಾತ್ರವಲ್ಲ, ಗೆಳತಿಯರನ್ನು ತರಗತಿಯಿಂದ ಹೊರಗೆ ಕರೆದುಕೊಂಡು ಹೋಗಿ ಸಾತ್ವಿಕ ರೀತಿಯಲ್ಲಿ ಪ್ರತಿಭಟನೆಯನ್ನೂ ಸಂಘಟಿಸಿದಳು. "ನಿಮಗೆ ಇದನ್ನು ಸರಿಪಡಿಸಲು ಸಾಧ್ಯವಿದ್ದರೆ ಹೇಳಿ! ಇಲ್ಲವೇ ಇಂದೇ ನಾನು ಕಾಲೇಜು ಮುಗಿಸುತ್ತೇನೆ!" ಎಂದು ದು:ಖ ಮತ್ತು ರೋಷದಿಂದ ಪ್ರಿನ್ಸಿಪಾಲರಲ್ಲಿ ಹೇಳಿದಳು. ಸುಮನಾಳ ಮಾತು ಪ್ರಿನ್ಸಿಪಾಲರ ಕಣ್ಣಿನಲ್ಲಿಯೂ ಹನಿ ಮೂಡಿಸಿತು. ಪರಿಣಾಮವಾಗಿ ಪ್ರಿನ್ಸಿಪಾಲರು ಮುಂದೆ ಹೀಗಾಗುವುದಿಲ್ಲವೆಂದು ಭರವಸೆ ನೀಡಿದ ನಂತರವೇ ಹುಡುಗಿಯರು ತರಗತಿಗೆ ಹೋದರು.

ಇದಕ್ಕೆ ಕಾರಣರಾದ ಹುಡುಗರನ್ನು ಸುಮನಾ ನೇರವಾಗಿ ತರಾಟೆಗೆ ತೆಗೆದುಕೊಳ್ಳುವಳು. ಈ ಸಂದರ್ಭದಲ್ಲಿ ಸುಮನಾ ಹೇಳುವ ಮಾತು ಶಿಕ್ಷಣವನ್ನು ಪಡೆಯುತ್ತಿದ್ದ ಮಹಿಳೆಯ ಸ್ಥಿತಿಗತಿಯನ್ನು ಹೇಳುತ್ತದೆ. "ಲತಾ ದಾರಿ ತಪ್ಪಿ ನಡೆದಿದ್ದರೆ, ಅದರ ಸಮಪಾಲು ಅವಳ ಜೊತೆ ಸೇರಿದ ಆ ನಿಮ್ಮ ಸಹಪಾಠಿಯದೂ ಇಲ್ಲವೇ?–ಹೆಣ್ಣನ್ನು ನಾಯಿ ಮುಟ್ಟಿದ ಮಡಕೆಯೆಂದು ದೂರಮಾಡುತ್ತದೆ. ಅದೇ ಗಂಡು ಅಂದರೆ ರೊಚ್ಚಿಗೇಳುವನು, ಅಂಥವರನ್ನು ಸದೆ ಬಡಿಯುವನು!–ಹೆಣ್ಣು ಎಚ್ಚೆತ್ತಲ್ಲದೆ ಗಂಡು ತನ್ನ ಪಶುವೃತ್ತಿಯನ್ನು ಕೊನೆಗಾಣಿಸುವುದಿಲ್ಲ! ಹೋಗಿ ಇದೇ ಮಾತನ್ನು ನಿಮ್ಮ ಸ್ನೇಹಿತರಿಗೂ ತಿಳಿಸಿ ಬಿಡಿ! ಅವರ ಬುದ್ಧಿಗೆ ತೋರಿದಂತೆ ಮಾಡಲಿ!" ಎಂದು ಅವನ ಉತ್ತರವನ್ನು ನಿರೀಕ್ಷಿಸದೆ ಹೊರಟು ಹೋದಳು!. (ಪು.45) ಸಮಾಜ ಹೆಣ್ಣನ್ನು ಯಾವ ರೀತಿಯಲ್ಲಿ ನೋಡುತ್ತದೆ, ಹೆಣ್ಣು ಗಂಡುಗಳನ್ನು ನೋಡುವ ದೃಷ್ಟಿಯಲ್ಲಿರುವ ತಾರತಮ್ಯದ ಕಡೆಗೆ ಲೇಖಕಿ ಇಲ್ಲಿ ಗಮನ ಸೆಳೆಯುತ್ತಾರೆ. ಪುರುಷಪ್ರಧಾನ ಸಾಮಾಜಿಕ ವ್ಯವಸ್ಥೆಯ ಒಳಗಿನ ಹುಳುಕುಗಳನ್ನು ಬಯಲಿಗೆಳೆಯುವ ಪ್ರಯತ್ನ ಇಲ್ಲಿದೆ.

ಮುಂದಿನ ಹಂತದಲ್ಲಿ ರಾಮನಾಥನ ವ್ಯಕ್ತಿತ್ವದ ಇನ್ನೊಂದು ಮುಖ ತೆರೆದುಕೊಳ್ಳುತ್ತದೆ. ಸಾತ್ವಿಕ ವ್ಯಕ್ತಿಯಾದ ಜಯರಾಮನ ಬಗೆಗೆ ಇಲ್ಲದ ಕಥೆಗಳನ್ನು ಕಟ್ಟಿ ಸುಮನಾಳ

ಮನಸ್ಸಿನಲ್ಲಿ ಆತನ ಬಗೆಗೆ ಸಂಶಯ, ಅನುಮಾನಗಳು ಹುಟ್ಟುವಂತೆ ಮಾಡುತ್ತಾನೆ. ಜಯರಾಮ ವಿಧವೆಯ ಮಗನೆಂದು ಹೀಗಳೆಯುವನು. ಆದರೆ ರಾಮನಾಥನ ಮೋಸದ ಮಾತಿಗೆ ಸುಮನಾ ಮರುಳಾಗುವುದಿಲ್ಲ. "ಮಿ.ರಾಮನಾಥ್ ಪ್ರೀತಿಸುವುದು ಮುಖ್ಯವಲ್ಲ! ಪ್ರೀತಿಸುವಂತೆ ಮಾಡುವುದು ಮುಖ್ಯ!-ಪ್ರೀತಿಯ ಬೆಲೆ ಇರುವುದು ತ್ಯಾಗದಲ್ಲಿ" (ಪು.48). ಎನ್ನುವುದರ ಮೂಲಕ ಪ್ರೀತಿಯ ಮಹತ್ವವನ್ನು ಹೇಳಿದ್ದಾರೆ. ಆಧುನಿಕ ಮನೋಧರ್ಮಕ್ಕೆ ಇಲ್ಲಿನ ಪಾತ್ರಗಳು ತೆರೆದುಕೊಂಡಿರುವುದನ್ನು ನೋಡಬಹುದು.

ವೈಧವ್ಯದ ಸಮಸ್ಯೆಯ ಬಗೆಗೂ ಲೇಖಕಿ ಸೂಕ್ಷ್ಮವಾಗಿ ಚರ್ಚಿಸಿದ್ದಾರೆ. ಸುಮನಾಳ ಮನಸ್ಸನ್ನು ಬದಲಿಸುವುದಕ್ಕಾಗಿ ರಾಮನಾಥ ಹೇಳುವ ಮಾತನ್ನು ಈ ಸಂದರ್ಭದಲ್ಲಿ ನೋಡಬಹುದು. "ಸುಮನಾ, ನೀವು ಜಯರಾಮನನ್ನು ಬಹಳ ಅಗಾಧವಾಗಿ ತಿಳಿದು ಕೊಂಡಿರುವಿರಿ! ಅವನೊಬ್ಬ ವಿಧವೆಯ ಮಗ!. ಅವನ ತಾಯಿಯನ್ನು ಸಮಾಜಕ್ಕೆ ವಿರುದ್ಧವಾಗಿ ಆತನ ತಂದೆ ಮದುವೆಯಾದರು! ಅದೆಲ್ಲಾ ನಿಮಗೇನು ಗೊತ್ತು?" ಎಂಬಲ್ಲಿ ತಮ್ಮ ಸಮಕಾಲೀನ ಸಮಾಜ ವಿಧವೆಗೆ ನೀಡಿದ ಸ್ಥಾನ ಮತ್ತು ಮಾನದ ಬಗೆಗೆ ಸೂಚ್ಯವಾಗಿ ಹೇಳಿದ್ದಾರೆ. ಸುಮನಾ ಇದಕ್ಕೆ ನೀಡುವ ಉತ್ತರವು ಅತ್ಯಂತ ಮಾರ್ಮಿಕವಾಗಿದೆ. "ಅವರು ವಿಧವೆಯ ಮಗನಾಗಲಿ, ನೀವು ಸದುವೆಯ ಮಗನಾಗಿರಿ, ನನಗೆ ಅದರಿಂದ ಲಾಭವೂ ಇಲ್ಲ! ನಷ್ಟವೂ ಇಲ್ಲ! ನಾನು ಯಾರನ್ನಾದರೂ ಪುರಸ್ಕರಿಸಿದರೆ ಅದು ಅವರ ಗುಣ ನಡತೆಗಾಗಿಯಲ್ಲದೆ ಬೇರೆಯಲ್ಲ" ಎಂದು ಗಂಭೀರವಾಗಿ ಹೇಳಿದಳು. ಸಾಂಪ್ರದಾಯಿಕ ಅಚರಣೆಗಳು, ನಂಬಿಕೆಗಳು ಜೀವಂತವಾಗಿದ್ದ ಕಾಲಘಟ್ಟದಲ್ಲಿ ಸುಮನಾ ಹೇಳುವ ಈ ಬಗೆಯ ಮಾತುಗಳು ಆಕೆಯ ಪ್ರಜ್ಞಾವಂತಿಕೆಯನ್ನು ಸೂಚಿಸುತ್ತದೆ. ಮಾತ್ರವಲ್ಲ, ಒಂದು ಜನಸಮುದಾಯದ ನಡುವೆ ಜೀವಂತವಾಗಿರುವ ಸಮಸ್ಯೆಗೆ ಪರಿಹಾರದ ಸೂಚನೆಯೂ ಇಲ್ಲಿದೆ. ವಿಧವೆಗೆ ಮರುವಿವಾಹದ ಅವಕಾಶ ದೊರೆತಿರುವುದು ಜಡ್ಡುಗಟ್ಟಿರುವ ಸಮಾಜದ ಒಳಗೆ ಆರಂಭವಾಗಿರುವ ಚಲನೆಯನ್ನು ಸೂಚಿಸುತ್ತದೆ. ಹೀಗೆ ತನ್ನ ವೈಯಕ್ತಿಕ ಬದುಕಿನೊಳಗೆ ಇಳಿಯಲು ಪ್ರಯತ್ನಿಸುವ ರಾಮನಾಥನನ್ನು ಸುಮನಾ ದೂರವಿಡಲು ಪ್ರಯತ್ನಿಸುವಳು.

ಕರ್ನಾಟಕ ಸಂಘದ ಹುಟ್ಟು ಹಬ್ಬದಲ್ಲಿ ಸುಮನಾ ಹಾಡಿದ್ದನ್ನು ಕೇಳಿದ ರಾಮನಾಥ ಅದನ್ನೆ ನೆಪವಾಗಿಟ್ಟುಕೊಂಡು ಮನೆಗೆ ಬಂದು ಜಯರಾಮನ ಬಗೆಗೆ ಸಲ್ಲದ ಮಾತುಗಳನ್ನು ಹೇಳಿ ಆಕೆಯ ಮನಸ್ಸನ್ನು ಹಾಳು ಮಾಡಲು ಯತ್ನಿಸಿದನು. ಇದರಿಂದಾಗಿ ಸುಮನಾಳಲ್ಲಿ ಜಯರಾಮನ ವ್ಯಕ್ತಿತ್ವದ ಬಗ್ಗೆ ಸಂಶಯದ ಎಳೆಯೊಂದು ಆರಂಭವಾಯಿತು.

ಸುಮನಾಳ ತಾಯಿ ಮತ್ತೊಮ್ಮೆ ವಾತದ ಖಾಯಿಲೆಗೆ ತುತ್ತಾದಳು. ಜಯರಾಮ ಮತ್ತೊಮ್ಮೆ ಸುಮನಾಳ ನೆರವಿಗೆ ಬಂದ. ಸುಮನಾಳ ತಾಯಿಯನ್ನು ಆಸ್ಪತ್ರೆಗೆ ಸೇರಿಸಿದ. ಇದರಿಂದ ಸುಮನಾಳಿಗೆ ಓದಲು ಅನುಕೂಲವಾಗಿತ್ತು. ಆದರೆ ಬಡತನ, ತಾಯಿಯ ಖರ್ಚು ಎರಡೂ ಸೇರಿ ಸುಮನಾಳಿಗೆ ಹಣವನ್ನು ಹೊಂದಿಸುವುದು ಕಷ್ಟವಾದಾಗ ತನ್ನ ಉಂಗುರವನ್ನು ಮಾರಲೆಂದು ಜಯರಾಮನಿಗೆ ಕೊಟ್ಟಳು. ಇಂತದೇ ಸಂದರ್ಭಕ್ಕಾಗಿ ಕಾದಿದ್ದ ರಾಮನಾಥ ಉಂಗುರದ ವಿಷಯದಲ್ಲಿ ತಪ್ಪು ಕಲ್ಪನೆ ಬರುವಂತೆ ಮಾಡಿದ. ಜಯರಾಮನ ಉಪಕಾರದ ಹಿಂದೆ ಸ್ವಾರ್ಥವಿದೆ ಎಂದು ವಂಚನೆಯ ಮಾತುಗಳನ್ನಾಡಿದ. ಇದರಿಂದ ಸುಮನಾ ಮತ್ತೊಮ್ಮೆ ಜಯರಾಮನ ಬಗೆಗೆ ಸಂದೇಹಕ್ಕೆ ಒಳಗಾದಳು. ಆತ ಎದುರಿಗೆ ಸಿಕ್ಕಿದಾಗ ಕೈಯ್ಯಲ್ಲಿದ್ದ ಫ್ಲಾಸ್ಕನ್ನು ಒಗೆದು ತನ್ನ ಸಿಟ್ಟನ್ನು ತೋರಿಸಿದಳು. ಜಯರಾಮ ತನ್ನ

ಕೈಯ್ಯಲ್ಲಿದ್ದ ಉಂಗುರವನ್ನು ತೆಗೆದು ಮೇಜಿನ ಮೇಲಿಟ್ಟು ಹೊರಟು ಹೋದ.

ಇದರೆಡೆಯಲ್ಲಿ ಗಾಂಧೀಜಿಯವರು ಆರಂಭಿಸಿದ ಸತ್ಯಾಗ್ರಹದ ಪರಾಮರ್ಶೆಯನ್ನು ಲೇಖಕಿ ಮಾಡುತ್ತಾರೆ. ವಿದ್ಯಾರ್ಥಿಗಳು ಓದಿ ಆಗಿಲ್ಲವೆಂದು ಮುಷ್ಕರ ಮಾಡಲು ನಿರ್ಧರಿಸಿದರು. ಇದಕ್ಕೆ ಒಪ್ಪದ ಸುಮನಾ ನೇರವಾಗಿ ಪರೀಕ್ಷೆಗೆ ಹೋದಳು. ಆಕೆಯ ಜೊತೆಯಲ್ಲಿ ಮತ್ತಷ್ಟು ಮಂದಿ ಪರೀಕ್ಷೆಗೆ ಹೋದರು. ಹಿಂದಿರುಗಿ ಬರುವಾಗ ಹಲವರು ಆಕೆಯ ವರ್ತನೆಯನ್ನು ಅವಹೇಳನ ಮಾಡಿದರು. ಈ ಸಂದರ್ಭದಲ್ಲಿ ಸುಮನಾ ಹೇಳುವ ಮಾತು ಗಾಂಧೀಜಿಯವರ ಸತ್ಯಾಗ್ರಹದ ಮೌಲ್ಯಮಾಪನದಂತಿದೆ.

"ಹೌದು ಗಾಂಧೀ ತತ್ವವನ್ನು ಗಂಟಲೊಡೆಯುವಂತೆ, ಕಿವಿ ಕಿವುಡಾಗುವಂತೆ ಸಾರುತ್ತೀರಿ, ನಿಜ ರೂಪದಲ್ಲಿ ನಿಮ್ಮ ಕೈಯ್ಯಾರೆ ಕೊಲ್ಲುತ್ತೀರಿ! ಇಂದಿನ ಗಾಂಧೀಭಕ್ತರನ್ನು ಕಂಡು, ಅಲ್ಲಿಯೂ ಗಾಂಧಿಗೆ ಶಾಂತಿ ಇರಲಾರದು!" ಎಂಬಲ್ಲಿ ಗಾಂಧೀಜಿಯವರು ಆರಂಭಿಸಿದ ಸತ್ಯಾಗ್ರಹ ದಾರಿತಪ್ಪಿ ಅಪಮೌಲ್ಯಗೊಳ್ಳುತ್ತಿರುವುದನ್ನು ಗುರುತಿಸಿದ್ದಾರೆ. ಲೇಖಕಿಯ ಈ ನಿಲುವು ಇಂದಿಗೂ ಪ್ರಸ್ತುತ ಎನ್ನಬಹುದು.

ಸುಮನಾಳ ವರ್ತನೆಯಿಂದ ಜಯರಾಮ ಸಾಕಷ್ಟು ಆಘಾತಕ್ಕೆ ಒಳಗಾದನು. ಆಸ್ಪತ್ರೆಯಿಂದ ಮನೆಗೆ ಬಂದ ಜಯರಾಮನಿಗೆ ತೀವ್ರಸ್ವರೂಪದ ಜ್ವರ ಕಾಣಿಸಿಕೊಂಡಿತು. ಉಂಗುರದ ವಿಷಯದಲ್ಲಿ ಅಪಪ್ರಚಾರ ಮಾಡಿದ್ದು ರಾಮನಾಥ ಎಂಬ ನಿಜಸಂಗತಿ ಸುಮನಾಳಿಗೆ ಗೊತ್ತಾಗಿ ತನ್ನ ವರ್ತನೆಗೆ ದು:ಖಿಸಿದಳು. ಜಯರಾಮನಿಗೆ ಜ್ವರವೆಂದು ತಿಳಿದು ನೇರವಾಗಿ ಆತನ ಮನೆಗೆ ಹೋದಳು. ತನ್ನದು ತಪ್ಪಾಯಿತೆಂದು ಸುಮನಾ ಪಶ್ಚಾತ್ತಾಪ ಪಟ್ಟಳು. ಜಯರಾಮನ ತಾಯಿಯೂ ಸುಮನಾಳನ್ನು ತನ್ನ ಸೊಸೆ ಎಂದು ಸ್ವೀಕರಿಸುವ ಮಾತನಾಡಿದಳು. ಸುಮನಾ ತನ್ನ ಪರೀಕ್ಷೆ ಬರೆಯುತ್ತಿರುವ ಸಮಯದಲ್ಲಿಯೇ ಆಕೆಯ ತಾಯಿ ವಿಧಿವಶಳಾದಳು. ಈ ಘಟನೆಯನ್ನು ಲೇಖಕಿ ಚಿತ್ರಿಸುವುದು ಹೀಗೆ: "ಅವಳ ತಾಯಿ ಕಣ್ಣು ಬಿಟ್ಟಳು! ಇಬ್ಬರನ್ನೂ ದೃಷ್ಟಿಸಿ ನೋಡಿದಳು. ಕಣ್ಣು ತುಂಬಾ ನೀರು ತುಂಬಿಬಂತು! ಬಾಯಿ ಅಗಲಿಸಿ ನೀರು ಕೇಳಿದಳು. ಸುಮನಾ ಹಾಕಿದ ನೀರನ್ನು ಗುಟುಕು ಗುಟುಕಾಗಿ ನುಂಗುತ್ತಾ ಅವಳ ಕೈಯನ್ನು ತೆಗೆದು ಜಯರಾಮನ ಕೈಯಲ್ಲಿಟ್ಟಳು. ಅತಿ ಪ್ರಯಾಸವಾಗಿ, ಅವಳ ಅಣ್ಣನ ಮನೆಗೆ ಬೇಡ" ಎಂದು ಹೇಳಿ ಕಣ್ಣು ಮುಚ್ಚಿದಳು. ಸುಮನಾಳ ಅಮ್ಮನಿಗೆ ಜಯರಾಮನ ಮೇಲಿರುವ ವಿಶ್ವಾಸ ತನ್ನ ಮಗನ ಬಗೆಗೆ ಇಲ್ಲವೆಂಬುದು ಗಮನಿಸಬೇಕಾದ ಅಂಶ.

ತಾಯಿಯ ಸಾವಿನ ನಂತರ ಸುಮನಾ ಜಯರಾಮನ ಒತ್ತಾಯದಿಂದ ಅವನ ಮನೆಯಲ್ಲಿಯೇ ಹೋಗಿ ನಿಂತಳು. ಜಯರಾಮನ ಪರೀಕ್ಷೆ ಮುಗಿದ ಒಂದು ವಾರದಲ್ಲಿ ಸುಮನಾ, ಜಯರಾಮರ ವಿವಾಹ ಸರಳವಾಗಿ ನಡೆಯಿತು. ವಿಧವೆಯ ಮಗನೆಂದು ಮೂಗು ಮುರಿದವರು, ಕೀಳುದರ್ಜೆಯ ಬ್ರಾಹ್ಮಣ ಹೆಣ್ಣನ್ನು ಮದುವೆಯಾಗುವನೆಂದು ದೂರಿದವರಲ್ಲಿ ಕೆಲವರು ಮದುವೆಗೆ ಬಂದಿದ್ದರು. ರಾಮನಾಥನೂ ಬಂದಿದ್ದ. ನಿರೀಕ್ಷೆಯಂತೆ ಜಯರಾಮ ಉತ್ತಮ ದರ್ಜೆಯಲ್ಲಿ ಉತ್ತೀರ್ಣನಾಗಿದ್ದ. ಆತನ ಅಪೇಕ್ಷೆಯಂತೆ ವೈದ್ಯನಾಗಿ ಜನಸೇವೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ. ಇವರ ದಾಂಪತ್ಯದ ಫಲವಾಗಿ ಸುಮನಾ ಗರ್ಭಿಣಿಯಾಗಿದ್ದಳು. ಜಯರಾಮ ತನ್ನ ಮನೆಯಲ್ಲಿಯೇ ಒಂದು ಡಿಸ್ಪೆನ್ಸರಿ ತೆಗೆಯಬೇಕೆಂದು ಯೋಚಿಸುತ್ತಿದ್ದ. ಸುಮನಾ ಗಂಡು ಮಗುವಿಗೆ ಜನ್ಮ ನೀಡಿದ

ಸಂಭ್ರಮದಲ್ಲಿದ್ದಳು. ಈ ವೇಳೆಗೆ ಮೈಸೂರಿನ ಸುತ್ತ ಮುತ್ತ ಇರುವ ಹಳ್ಳಿಗಳಲ್ಲಿ ಕಾಲರಾ ಸಾಂಕ್ರಾಮಿಕ ರೋಗ ಕಾಣಿಸಿಕೊಂಡಿತು. ಇದರಿಂದ ಜಯರಾಮನಿಗೆ ಬಿಡುವೇ ಇರಲಿಲ್ಲ. ಇದ್ದಕ್ಕಿದ್ದಂತೆ ಜಯರಾಮ ಒಂದು ದಿನ ರಾತ್ರಿ ವಾಂತಿ ಮಾಡಲು ಆರಂಭಿಸಿದ. ಬೆಳಗಾಗುವಷ್ಟರಲ್ಲಿ ಸಾಕಷ್ಟು ನಿತ್ರಾಣನಾಗಿದ್ದ. ಸುಮನಾಳ ತೊಡೆಯ ಮೇಲೆ ಮಲಗಿದ್ದ ಜಯರಾಮ ಕೊನೆಯದಾಗಿ "ಚಿನ್ನ ನನ್ನ ಆಸೆ ತೀರದಾಯಿತು. ನೀನು ಖಂಡಿತಾ ಬೇರೆ ಮದ್ವೆ" ಎಂಬಷ್ಟರಲ್ಲಿ ಕಣ್ಣುಮುಚ್ಚಿದ. ಸಾವಿನ ಆ ಘಳಿಗೆಯಲ್ಲಿಯೂ ಜಯರಾಮ ಸುಮನಾಳಿಗೆ ಮತ್ತೊಂದು ಮದುವೆಯಾಗು ಎಂದು ಹೇಳುವ ಮಾತು ಗಮನಾರ್ಹವಾಗಿದೆ. ಸಮಾಜದಲ್ಲಿ ಆತಂಕಕಾರಿಯಾಗಿದ್ದ ವೈಧವ್ಯದ ಸಮಸ್ಯೆಗೆ ಮರುಮದುವೆಯನ್ನು ಪರಿಹಾರವಾಗಿ ಲೇಖಕಿ ಸೂಚಿಸುತ್ತಿದ್ದಾರೆ. ತನ್ಮೂಲಕ ಜಯರಾಮನ ಪಾತ್ರವನ್ನು ಉದಾತ್ತೀಕರಿಸುವ ಪ್ರಯತ್ನವಿದೆ.

ಜಯರಾಮನ ಅಪೇಕ್ಷೆಯಂತೆ ಸುಮನಾ ಮರುಮದುವೆಯಾಗಲಿಲ್ಲ. ಬದಲಾಗಿ ಜಯರಾಮ ಕಟ್ಟಿಸಿದ ಕಟ್ಟಡ ಧರ್ಮದ ಆಸ್ಪತ್ರೆಯ ಒಂದು ಭಾಗವಾಗಿ ಬೆಳೆದಿತ್ತು. ಸುಮನಾ ಸರ್ವೋದಯ ಆಶ್ರಮದ ಏಳಿಗೆಗಾಗಿ ದುಡಿಯುತ್ತಿದ್ದಳು. ಜಯರಾಮನ ತೀರದ ಆಸೆಯನ್ನು ತೀರಿಸಲು, ಅವನ ಮಗುವನ್ನು ಬೆಳೆಸುತ್ತಿದ್ದಳು. ಕೊನೆಯದಾಗಿ ಸುಮನಾಳ ಅತ್ತೆಯೂ ಮರುಮದುವೆಯಾಗುವಂತೆ ಸೂಚಿಸುವಳು. ಆದರೆ ಸುಮನಾ ತನ್ನ ಮುಂದಿನ ಉದ್ದೇಶ ಮತ್ತು ಆದರ್ಶವನ್ನು ತೆರೆದಿಡುವಳು. "ದೇಹ ದೇಹದೊಡನೆ ಕೂಡಿದ್ದರೆ, ಆಗ ಹೃದಯದ ತೀರದ ಆಸೆಗಾಗಿ ಪುನರ್ವಿವಾಹ ಅಗತ್ಯ! ಆದರೆ ನನ್ನ ಆತ್ಮ ಅವರ ಆತ್ಮದೊಡನೆ ಬೆರೆತು ಹೋಗಿದೆ! ನನ್ನ ರಕ್ತದ ಕಣಕಣದಲ್ಲಿಯೂ ನಾಡಿಯ ಪ್ರತಿಯೊಂದು ನರದಲ್ಲಿಯೂ ಅವರ ಶಕ್ತಿ ತುಂಬಿಹರಿಯುತ್ತಿದೆ! ಮೃತ್ಯು ಅವರ ಶರೀರವನ್ನು ನನ್ನಿಂದ ಒಯ್ದಿತೇ ಹೊರತು, ಅವರ ಆತ್ಮವನ್ನಲ್ಲ. ಅವರ ಧ್ಯೇಯ ಸಾಧನೆಗಾಗಿ, ಅವರ ತೀರದ ಆಸೆಯನ್ನು ಆದಷ್ಟು ತೀರಿಸಲಿಕ್ಕಾಗಿ, ಅವರ ನೆರಳಾಗಿ ಬಾಳಿ ನನ್ನ ಕೊನೆಯ ಉಸಿರಿರುವವರೆಗೂ ದುಡಿಯುತ್ತೇನೆ! ಅದೇ ಅವರ ಆತ್ಮಶಾಂತಿ! ನನ್ನ ಮನದ ತೃಪ್ತಿ!" ಎಂಬ ಖಚಿತವಾದ ನಿಲುವು ಸುಮನಾಳದು. ಅತ್ತೆ ನೀಡಿದ ಮರುಮದುವೆ ಸಲಹೆಯನ್ನು ನಯವಾಗಿ ತಿರಸ್ಕರಿಸುವುದರ ಮೂಲಕ ಸುಮನಾ ತಮ್ಮ ದಾಂಪತ್ಯವನ್ನು ಬೇರೆಯದೇ ಆದ ರೀತಿಯಲ್ಲಿ ನೋಡುವುದು ಸ್ಪಷ್ಟವಾಗಿದೆ. ತನ್ನ ಉಳಿದ ಬದುಕನ್ನು ನಿರ್ದಿಷ್ಟ ಉದ್ದೇಶದ ಸಾಧನೆಗಾಗಿ ಮೀಸಲಾಗಿಡುವ ಸುಮನಾಳ ಪಾತ್ರವನ್ನು ಲೇಖಕಿ ತ್ಯಾಗದ ಮೂರ್ತಿಯಾಗಿ ನಿಲ್ಲಿಸಿದ್ದಾರೆ. ಕಾಮಕ್ಕಿಂತಲೂ ಮಿಗಿಲಾದ ಆತ್ಮಸಂವಾದದ ಆವರಣವನ್ನು ಅವರು ಇಲ್ಲಿನ ಪ್ರೀತಿಗೆ ಕಲ್ಪಿಸಿದ್ದಾರೆ.

ಕಾದಂಬರಿ ತನ್ನ ಸಮಕಾಲೀನ ಬದುಕಿನ ಅನೇಕ ಸೂಕ್ಷ್ಮಗಳನ್ನು ತೆರೆಯುತ್ತಾ ಹೋಗುತ್ತದೆ. ಅಂದಿನ ಕಾಲೇಜು ಶಿಕ್ಷಣದ ವಾತಾವರಣವನ್ನು ಚಿತ್ರಿಸುತ್ತಲೇ ಮಹಿಳೆ ಅನುಭವಿಸುತ್ತಿರುವ ಕಿರುಕುಳವನ್ನೂ ದಾಖಲಿಸುತ್ತದೆ. ಗೆಳತಿಯ ಕಷ್ಟಗಳಿಗೆ ನಿರ್ಮಲಳ ಸ್ಪಂದನೆ, ಕಷ್ಟಕಾಲದಲ್ಲಿ ನಿರ್ಮಲ ನೀಡಿದ ಮಾನಸಿಕ ಸಾಂತ್ವನ, ಸುಮನಾ ಮತ್ತು ನಿರ್ಮಲರ ಆದರ್ಶ ಗೆಳೆತನ ಇಲ್ಲಿ ಗಮನ ಸೆಳೆಯುತ್ತದೆ. ಇದೇ ಹೊತ್ತಿಗೆ ರಾಮನಾಥ ಮತ್ತು ಜಯರಾಮರ ಗೆಳೆತನವನ್ನು ಚಿತ್ರಿಸುವ ಲೇಖಕಿ ಪ್ರೀತಿಯನ್ನು ಅರ್ಥಮಾಡಿಕೊಳ್ಳದ ರಾಮನಾಥನ ಕಪಟ ಗೆಳೆತನವನ್ನು ಬಯಲಿಗೆಳೆಯುತ್ತಾರೆ. ಆಧುನಿಕ ಶಿಕ್ಷಣವನ್ನು ಪಡೆದ ಇಬ್ಬರು ಪುರುಷರು ನಮ್ಮ ಕಣ್ಣೆದುರು ಬರುತ್ತಾರೆ. ಇವರಲ್ಲಿ ರಾಮನಾಥ

ಹೆಣ್ಣನ್ನು ಭೋಗದ ದೃಷ್ಟಿಯಿಂದ ನೋಡುವ ಕಾಮುಕನಾಗಿ, ಗೆಳೆತನದಲ್ಲಿ ಮೋಸಗಾರನಾಗಿ ನಮ್ಮೆದುರು ನಿಲ್ಲುತ್ತಾನೆ. ಆದರೆ ಜಯರಾಮನ ಪಾತ್ರದ ಮೂಲಕ ಎಲ್ಲ ಪುರುಷರೂ ವಂಚಕರಲ್ಲ. ಪುರುಷರಲ್ಲಿಯೂ ಸಾತ್ವಿಕರು, ಮಹಿಳೆಯ ಮನಸ್ಸನ್ನು ಅರ್ಥಮಾಡಿಕೊಳ್ಳುವ, ಆಕೆಯ ಕಷ್ಟಗಳಿಗೆ ಸ್ಪಂಧಿಸುವ ಮನೋಧರ್ಮದವರು ಇರುವುದನ್ನು ಜಯರಾಮನ ಪಾತ್ರದ ಮೂಲಕ ಗುರುತಿಸಿದ್ದಾರೆ.

ಕಾದಂಬರಿಯಲ್ಲಿ ಪ್ರೀತಿಗೆ ಒಳಗಾದ ಎರಡು ಜೀವಗಳಿಗೆ ಜಾತಿ, ವರ್ಗ, ಅಂತಸ್ತು ಮುಖ್ಯವಾಗುವುದಿಲ್ಲ. ಜಯರಾಮ ವಿಧವೆಯ ಮಗ ಎಂದು ಹೀಗಳೆದ ಸಂದರ್ಭ ದಲ್ಲಿಯೂ ಸುಮನಾ ಆತನ ಪ್ರತಿಭೆ, ಪರೋಪಕಾರದ ಗುಣಕ್ಕೆ ಮಾರು ಹೋಗುತ್ತಾಳೆ. ಮಾತ್ರವಲ್ಲ, ತನ್ನ ಪತಿ ಡಾ.ಕೋಟ್ನೀಸನಂತೆ ಒಬ್ಬ ಪ್ರಖ್ಯಾತ ಡಾಕ್ಟರಾಗಬೇಕೆಂದು ಬೆಂಬಲ ನೀಡುತ್ತಾಳೆ. ಸಾಂಸಾರಿಕ ಬದುಕಿನಲ್ಲಿ ಕಳೆದುಹೋಗದೆ ಗಂಡನ ಸೇವೆಗೆ ಬೆಂಬಲವಾಗಿ ನಿಲ್ಲುವುದರ ಮೂಲಕ ಸುಮನಾ, ತಮ್ಮ ದಾಂಪತ್ಯಕ್ಕೆ ಆದರ್ಶದ ಚೌಕಟ್ಟನ್ನು ನೀಡುತ್ತಾಳೆ. ಅಂತಿಮವಾಗಿ ಗಂಡನನ್ನು ಅಕಾಲಿಕವಾಗಿ ಕಳೆದುಕೊಂಡು ವಿಧವೆಯಾಗುವ ಸುಮನಾ ಮರುಮದುವೆಯ ಅವಕಾಶವನ್ನು ತಿರಸ್ಕರಿಸಿ ಪತಿಯ ಆದರ್ಶವನ್ನು ಈಡೇರಿಸುವುದಕ್ಕೆ ತನ್ನ ಆದ್ಯತೆಯನ್ನು ನೀಡುತ್ತಾಳೆ. ತನ್ನ ಬದುಕನ್ನು ತಾನೇ ಆಯ್ಕೆ ಮಾಡಿಕೊಳ್ಳುತ್ತಾಳೆ. ಸುಮನಾಳಿಗೆ ದೊರಕಿದ ಆಧುನಿಕ ಶಿಕ್ಷಣದ ಕಾರಣದಿಂದ ಸಮಾಜವನ್ನು ಧೈರ್ಯವಾಗಿ ಎದುರಿಸಲು ಆತ್ಮಬಲವನ್ನು ನೀಡಿದೆ. ಮಾತ್ರವಲ್ಲ, ಸ್ವಾವಲಂಬನೆಯ ಬದುಕನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗಿದೆ ಎನ್ನಬಹುದು.

'ಪತಂಗ' ಯಮುನಾ ಲಿಂಗಪ್ಪನವರ ಎರಡನೆಯ ಕೃತಿ. 1953ರಲ್ಲಿ ಪ್ರಕಟವಾದ ಕಥಾಸಂಕಲನ. ಸ್ವಯಂಪ್ರಭಾ ಸಾಹಿತ್ಯ ಮಾಲೆ ಹೊಸಹಳ್ಳಿ ಸಾಗರ ಇವರು ತಮ್ಮ ಪ್ರಕಾಶನದ ಆರನೆಯ ಕೃತಿಯಾಗಿ ಈ ಸಂಕಲನವನ್ನು ಪ್ರಕಟಿಸಿದ್ದಾರೆ. ಶ್ರೀ ಎ.ಎನ್. ಮೂರ್ತಿ ರಾಯರು ಬರೆದ ಪುಟ್ಟ ಅಭಿಪ್ರಾಯವನ್ನು ಕೃತಿಯ ಆರಂಭದಲ್ಲಿ ಪ್ರಕಟಿಸಿದ್ದಾರೆ. "ನನ್ನ ಅಭಿಪ್ರಾಯದಲ್ಲಿ ಶ್ರೀಮತಿಯವರ ಬರೆವಣಿಗೆ ಚೆನ್ನಾಗಿದೆ. ಕೆಲವು ಹೊಸ ವಿಷಯಗಳನ್ನು ಆರಿಸಿಕೊಂಡಿದ್ದಾರೆ. 'ತೆರೆಯ ಮರೆಯಲ್ಲಿ' ಎಂಬ ಕಥೆಯ ವಾಸ್ತವಿಕ ಚಿತ್ರ, ಪೋಕ್ರಿಮುರಳಿಯ ವಿಷಯ ಎರಡೂ ಹೊಸದು. ಚರ್ವಿತ ಚರ್ವಣ ಹೆಚ್ಚಾಗಿರುವ ನಮ್ಮ ಕಥಾ ಪ್ರಪಂಚದಲ್ಲಿ ಇಂಥ ವಿಷಯಗಳ ಕಡೆಗೆ ಮನಸ್ಸು ತಿರುಗಿರುವುದನ್ನು ನೋಡಿದರೆ ಸಂತೋಷವಾಗುತ್ತದೆ." ಎಂದು ಎ.ಎನ್.ಮೂರ್ತಿರಾಯರು ತಮ್ಮ ಹಾರೈಕೆಯ ಮಾತಿನಲ್ಲಿ ಹೇಳಿದ್ದಾರೆ.

'ಪತಂಗ' ಕಥಾ ಸಂಕಲನದಲ್ಲಿ ಆರು ಕಥೆಗಳಿದ್ದು ಮೊದಲ ಕಥೆಯ ಹೆಸರನ್ನೇ ಕೃತಿಗೂ ಇಟ್ಟಿದ್ದಾರೆ. ತಾಳಿಭಾಗ್ಯ, ತೆರೆಯ ಮರೆಯಲ್ಲಿ, ಸಂಸಾರ ಸುಖ, ಬಳ್ಳಿಗೊಂದು ಆಸರೆ, ಪೋಕ್ರಿಮುರಳಿ ಎಂಬ ಕಥೆಗಳು ಈ ಸಂಕಲನದಲ್ಲಿವೆ. ಪುರುಷನ ವಂಚನೆಯ ವಿರುದ್ಧ ಸೆಣಸಲಾಗದ ಹೆಣ್ಣಿನ ಅಸಹಾಯಕತೆ, ಮದುವೆಯಾದ ಹೆಣ್ಣು ತಾಳಿಭಾಗ್ಯವನ್ನು ಉಳಿಸಿಕೊಳ್ಳಲಾಗದ ಸಂಕಟ, ಶಿಕ್ಷಣ ಸಂಸ್ಥೆಗಳಲ್ಲಿ ನಡೆಯುವ ಶೋಷಣೆ, ಓದಿ ನೌಕರಿಗೆ ಹೋಗುವ ಮಹಿಳೆಯರು ಸಾಮಾಜಿಕವಾಗಿ ಎದುರಿಸುತ್ತಿದ್ದ ಸವಾಲುಗಳು, ಬ್ರಾಹ್ಮಣ ವರ್ಗದಲ್ಲಿ ತೀವ್ರವಾಗಿದ್ದ ವಿಧವೆಯ ಸಮಸ್ಯೆಗೆ ಮರುಮದುವೆಯ ಅವಕಾಶ, ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಳ್ಳುವಲ್ಲಿ ಆಗುತ್ತಿರುವ ತೊಡಕುಗಳ ಕಡೆಗೆ ಲೇಖಕಿ 'ಪತಂಗ'

ಸಂಕಲನದಲ್ಲಿ ನಮ್ಮ ಗಮನವನ್ನು ಸೆಳೆಯುತ್ತಾರೆ. ಕೌಟುಂಬಿಕ ಆವರಣದಲ್ಲಿ ಎದುರಾಗುವ ಸಂದಿಗ್ಧ ಸಂದರ್ಭಗಳಲ್ಲಿ ಹೆಣ್ಣು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾಳೆ ಎಂಬುದರ ಕಡೆಗೆ ಯಮುನಾ ಲಿಂಗಪ್ಪನವರು ನಮ್ಮ ಗಮನವನ್ನು ಸೆಳೆಯುತ್ತಾರೆ.

ಸಂಕಲನದ ಮೊದಲ ಕಥೆ 'ಪತಂಗ' ಮಾಧವರಾಯನಿಂದ ವಂಚನೆಗೆ ಒಳಗಾಗುವ ಕುಸುಮಳ ಬದುಕಿನ ಅಸಹಾಯಕತೆಯನ್ನು ಚಿತ್ರಿಸಿದೆ. ಪುರುಷನ ಮೋಸಕ್ಕೆ ಬಲಿಪಶುವಾಗಿ ಕುಸುಮ ತನ್ನ ಬದುಕನ್ನು ಕಳೆದುಕೊಳ್ಳುತ್ತಾಳೆ. ಆಕಸ್ಮಿಕವಾಗಿ ಪರಿಚಯವಾದ ಕುಸುಮ ಮತ್ತು ಮಾಧವರಾಯ ಒಬ್ಬರನ್ನೊಬ್ಬರು ಪ್ರೀತಿಸುವರು. ಮಾಧವರಾಯನ ಸಲುವಾಗಿ ತನ್ನ ಜಾತಿ ಮತವನ್ನು ಬಿಡಲೂ ತಯಾರಿದ್ದಳು. ಮದುವೆಯ ಬಗೆಗೆ ಪ್ರಸ್ತಾಪಿಸಿದಾಗಲೆಲ್ಲ ಆತ ನೆಪಗಳನ್ನು ಹೇಳಿ ಮುಂದೆ ಹಾಕುತ್ತಿದ್ದ. ಕುಸುಮಳ ತಮ್ಮ ಮೂರ್ತಿ, ಮಾಧವರಾಯನ ಬಗೆಗೆ ನೀಡಿದ ಮಾಹಿತಿ ಆಘಾತವನ್ನು ನೀಡಿತು. ಕುಸುಮಳನ್ನು ಪ್ರೀತಿಸುವ ಹೊತ್ತಿಗೆ ಮಾಧವರಾಯನಿಗೆ ಮದುವೆಯಾಗಿತ್ತು. ಮಾತ್ರವಲ್ಲ, ಮಕ್ಕಳೂ ಇದ್ದವು. ಮಾಧವರಾಯ ಮನೆಗೆ ಬಂದಾಗ ನೇರವಾಗಿ ಆತನನ್ನೇ ಪ್ರಶ್ನಿಸಿದಳು. ಆಗಲೂ ಆತ ತಾನು ಹೇಳಿದ ಸುಳ್ಳನ್ನು ಸಮರ್ಥಿಸಿಕೊಂಡ. ಇದರಿಂದ ಕೆರಳಿದ ಕುಸುಮ "ನಿಮ್ಮ ನಾಲ್ಕು ದಿನದ ಸುಖಕ್ಕಾಗಿ, ಒಂದು ಬಾಳಿನಧ್ಯಾಯವನ್ನೆಲ್ಲ ಮಣ್ಣುಗೂಡಿಸಿ, ಮುದಡಿ ಎಸೆಯಲು ಯೋಚಿಸಿದಿರಾ?" ಎಂದು ಪ್ರಶ್ನಿಸಿದಳು. ಇಂತಹ ಸಂದರ್ಭದಲ್ಲಿಯೇ ಕುಸುಮಳ ಮನೆಗೆ ಬಂದ ತರುಣಿಯೊಬ್ಬಳು "ನೀವು ತಿಳಿದಿರುವಂತೆ ಮಾಧವರಾಯರು ರತ್ನವಲ್ಲ! ರತ್ನದ ರೂಪದಲ್ಲಿ ಅನೇಕ ಜೀವಿಗಳನ್ನು ಸುಟ್ಟಿರುವ ಬೆಂಕಿ! ಪತಂಗದಂತೆ ಹೋದೆಡೆಯಲ್ಲೆಲ್ಲಾ ಉತ್ತಮ ಕುಸುಮಗಳನ್ನಾರಿಸಿ ಅದನ್ನು ಆಘ್ರಾಣಿಸಿ ಎಸೆದು ಬರುವುದೇ ಅವರ ಕಸುಬು! ನಾನು ನಿಮ್ಮಂತೆಯೇ ಅವರ ಸೋಗಿಗೆ ಬಲಿಯಾದವಳೇ!" ಎಂಬ ಸತ್ಯವನ್ನು ತೆರೆದಿಟ್ಟಳು. ಇದಾಗಿ ಮೂರನೆಯ ದಿನ ಬಂದ ಮಾಧವರಾಯ ಯಾವ ಪ್ರಶ್ನೆಗೂ ನೇರವಾಗಿ ಉತ್ತರಿಸದೆ ಮದ್ರಾಸಿಗೆ ಹೊರಟು ಹೋದನು. ಆತನ ಹೊರಡುವ ಸಂಭ್ರಮ ಕುಸುಮಳಿಗೆ ಸಂಶಯವನ್ನುಂಟುಮಾಡಿತು. ತನ್ನ ಕೊಠಡಿಯಲ್ಲಿದ್ದ ಕಾಗದವೊಂದು ಆತನ ಉದ್ದೇಶವನ್ನು ಸ್ಪಷ್ಟವಾಗಿ ತಿಳಿಸಿತು. ಹೀಗಾಗಿ ಕುಸುಮ ಆತನನ್ನೇ ಹಿಂಬಾಲಿಸಿ ರೈಲನ್ನೇರಿದಳು. ಮುಂದಿನ ನಿಲ್ದಾಣದಲ್ಲಿ ರೈಲು ನಿಂತಾಗ ಅಪರಿಚಿತ ಮಹಿಳೆಯೊಬ್ಬಳು ಮಾಧವರಾಯನ ಬಂಡಿಯನ್ನೇರಿದಳು. ಮಾಧವರಾಯ ತನ್ನ ಪಕ್ಕದಲ್ಲಿಯೇ ಆಕೆಯನ್ನು ಕೂರಿಸಿಕೊಂಡ. ಕುಸುಮ ಇದನ್ನು ಗಮನಿಸಿ ಆತನ ಎದುರು ಹೋಗಿ ನಿಂತಳು. ಕುಸುಮಳನ್ನು ನೋಡಿದ ಮಾಧವರಾಯನ ಮುಖ ಕಪ್ಪಿಟ್ಟಿತು. ಅದೇ ಹೊತ್ತಿಗೆ ರೈಲು ಹೊರಟಿತು. ಪತಂಗದ ಗುಣವುಳ್ಳ ಮಾಧವರಾಯ ಹೊರಟುಹೋದ. ಕುಸುಮ ಮಾತ್ರ ಆ ಪತಂಗವನ್ನು ಹಿಡಿಯುವ ಪ್ರಯತ್ನವನ್ನು ಮಾಡಲಿಲ್ಲ.

ಮಾಧವರಾಯ ತನಗೆ ಮೋಸ ಮಾಡಿ ಮದ್ರಾಸಿಗೆ ಹೋಗುತ್ತಿರುವುದು, ಹಾಗೆಯೇ ಇನ್ನೊಬ್ಬಳಿಗೆ ಮೋಸಮಾಡುತ್ತಿರುವುದು ಗೊತ್ತಾದಾಗಲೂ ಕುಸುಮ ಅಸಹಾಯಕಳಾಗಿ ನೋಡುತ್ತಾಳೆ. ತನ್ನಂತೆಯೇ ಮೋಸಕ್ಕೆ ಒಳಗಾದ ಮಹಿಳೆಗೆ ಎಚ್ಚರಿಸುವ ಕೆಲಸವನ್ನೂ ಮಾಡದಿರುವುದು ಪ್ರಶ್ನೆಯಾಗಿ ಕಾಡುತ್ತದೆ. ಈ ಕಥೆಯಲ್ಲಿ ಬರುವ ಮಾಧವರಾಯ ಕಾಮುಕನಾಗಿ ಕಾಣುತ್ತಾನೆ. ಮಹಿಳೆಯ ಬಗೆಗೆ ಆತನಿಗೆ ಯಾವುದೇ ಗೌರವವಾಗಲೀ, ಆದರವಾಗಲಿ ಇಲ್ಲ. ಹೂವಿಂದ ಹೂವಿಗೆ ಹಾರುವ ಪತಂಗದ ಸ್ವಭಾವ ಆತನದು.

ತಾಳಿಭಾಗ್ಯ ಸಂಕಲನದ ಎರಡನೆಯ ಕಥೆ. ಹಳ್ಳಿಯ ಮುಗ್ಧೆ ಮೀನಾಕ್ಷಿಗೆ ಆಕೆಯ ಸೋದರತ್ತೆಯ ಮಗ ಸುಂದರೇಶನೊಂದಿಗೆ ಮದುವೆಯಾಗುವುದು. ಮದುವೆಯ ಸಾಲವನ್ನು ತೀರಿಸಲೆಂದು ಸುಂದರೇಶ ಮದ್ರಾಸಿಗೆ ಕೆಲಸವನ್ನರಸಿ ಹೋಗುವನು. ಅಲ್ಲಿನ ಮಾಡರ್ನ್ ಕೆಫೆಯಲ್ಲಿ ಇಪ್ಪತ್ತು ರೂಪಾಯಿ ಸಂಬಳಕ್ಕೆ ಅಡಿಗೆ ಕೆಲಸಕ್ಕೆ ಸೇರಿದನು. ಆದರೆ ದಿನ ಕಳೆದಂತೆ ಅನಾರೋಗ್ಯಕ್ಕೆ ತುತ್ತಾದ. ಮಾತ್ರವಲ್ಲ ಕ್ಷಯರೋಗ ಪೀಡಿತನಾಗಿ ಊರಿಗೆ ಹಿಂದಿರುಗಿದ. ಹೀಗಾಗಿ ಮೀನಾಕ್ಷಿಯ ತಾಳಿಭಾಗ್ಯ ಹೇಗಿದೆಯೋ ಎಂಬ ಪ್ರಶ್ನೆಯೊಂದಿಗೆ ಕಥೆ ಮುಕ್ತಾಯವಾಗುತ್ತದೆ.

ಕಥೆಯಲ್ಲಿ ಬರುವ ಮೀನಾಕ್ಷಿ, ಆಕೆಯ ಪತಿ ಸುಂದರೇಶ ಓದುಗರ ಅನುಕಂಪಕ್ಕೆ ಪಾತ್ರರಾಗುತ್ತಾರೆ. ದಕ್ಷಿಣ ಕನ್ನಡದವರು ತಮ್ಮ ಉದ್ಯೋಗಕ್ಕೆ ಮದ್ರಾಸನ್ನು ಅವಲಂಬಿಸಿದ್ದರೆಂಬ ಸೂಕ್ಷ್ಮ ಕಥೆಯಲ್ಲಿದೆ. ಅದೇ ರೀತಿ ಹಳ್ಳಿಯಿಂದ ನಗರ ಸಂಸ್ಕೃತಿಯ ಕಡೆಗೆ ಉದ್ಯೋಗವನ್ನರಸಿ ಯುವಕರ ವಲಸೆ ನಡೆಯುತ್ತಿರುವುದರ ಕಡೆಗೆ ಕಥೆ ಗಮನ ಸೆಳೆಯುತ್ತದೆ.

'ತೆರೆಯ ಮರೆಯಲ್ಲಿ' ಕಥೆಯು ಶಾಲೆಗಳಲ್ಲಿ ನಡೆಯುತ್ತಿದ್ದ ದೌರ್ಜನ್ಯ, ಶೋಷಣೆಯ ಸ್ವರೂಪವನ್ನು ಚಿತ್ರಿಸುತ್ತದೆ. ಅರಸೀಪುರದಲ್ಲಿ ಹುಡುಗಿಯರಿಗಾಗಿಯೇ ಶಾಲೆಯೊಂದು ಆರಂಭವಾಯಿತು. ಇಲ್ಲಿಗೆ ಬಂದ ಮುಖ್ಯಾಧಿಕಾರಿಣಿಯರು ನೆಲೆ ನಿಲ್ಲುತ್ತಿರಲಿಲ್ಲ. ಎರಡು ವರ್ಷದಲ್ಲಿ ಮೂವರು ಬಂದು ಹೋಗಿದ್ದರು. ಪ್ರಸ್ತುತ ನಾಲ್ಕನೆಯವರಾಗಿ ಎಲ್ಲಿಗೂ ಬೇಡದ ಶಂಶದುನ್ನೀಸಬೇಗಂ ಅವರನ್ನು ನೇಮಿಸಿದರು. ಬಂದ ಆರಂಭದಲ್ಲಿ ಶಾಲೆಯನ್ನೇ ಮನೆಯನ್ನಾಗಿ ಮಾಡಿಕೊಂಡಿದ್ದಳು. ಅಧಿಕಾರಕ್ಕೆ ಬಂದಾಕ್ಷಣ ತನ್ನ ಮಾತನ್ನು ಕೇಳುವ ವ್ಯಕ್ತಿಗಳನ್ನು ಕೆಲಸಕ್ಕೆ ನೇಮಿಸಿಕೊಂಡಳು.

ಕಾಳನೆಂಬಾತ ಶಾಲೆಯ ಜವಾನನಾಗಿದ್ದ. ಶಂಶದುನ್ನೀಸಬೇಗಂ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ಕಾಳನಿಂದ ಹೆಬ್ಬೆಟ್ಟು ಒತ್ತಿಸಿಕೊಂಡು ಸಂಬಳವನ್ನು ಕೊಡದೆ ಸತಾಯಿಸುತ್ತಿದ್ದರು. ಕೆಲವೊಮ್ಮೆ ಸಂಬಳವನ್ನೇ ಕೊಡುತ್ತಿರಲಿಲ್ಲ. ಅಲ್ಲದೆ ಮೇಡಂ ಮನೆಯ ಕೆಲಸವನ್ನೂ ಮಾಡಬೇಕಾಗಿತ್ತು. ವಿದ್ಯಾರ್ಥಿಗಳಿಗೆ ಬರುತ್ತಿದ್ದ ವಿದ್ಯಾರ್ಥಿ ವೇತನದಲ್ಲಿಯೂ ಪಾಲು ಪಡೆಯುತ್ತಿದ್ದಳು. ಬೇಗಂರ ಪತಿ ಅತ್ಯಂತ ಸಾಧುಪ್ರಾಣಿಯಾಗಿದ್ದ. ಹೀಗಾಗಿ ಪತ್ನಿಯ ಅನ್ಯಾಯಗಳು ಗೊತ್ತಿದ್ದರೂ ಸುಮ್ಮನಾಗುತ್ತಿದ್ದ.

ಶಾಲೆಯಲ್ಲಿ ಅಧ್ಯಾಪಕರಾಗಿದ್ದ ಮೋಹನ್‌ರಾವ್ ಪ್ರಾಮಾಣಿಕ ಮತ್ತು ಸಜ್ಜನವ್ಯಕ್ತಿ. ಆತನನ್ನು ಕಛೇರಿಗೆ ಬರಲು ಹೇಳಿದ ಮುಖ್ಯೋಪಾಧ್ಯಾಯಿನಿ, ಕಾಳನಿಗೆ ಸಂಬಳ ನೀಡಿದ್ದಕ್ಕೆ ಸಾಕ್ಷಿ ಹಾಕಲು ಹೇಳಿದಳು. ಆಕೆಯ ವಂಚನೆ ಗೊತ್ತಿದ್ದ ಮೋಹನ್‌ರಾವ್ ಸಾಕ್ಷಿಹಾಕಲು ನಿರಾಕರಿಸಿದನು. ಇದರಿಂದ ತುಸು ವ್ಯಗ್ರರಾದ ಬೇಗಂ "ಮಿ. ಮೋಹನ್ ರಾವ್, ನಾನು ನಿಮ್ಮ ಹೆಡ್‌ಮೆಸ್ಟ್ರೆಸ್! ಗೆಜೆಟೆಡ್ ಆಫೀಸರ್ ಎನ್ನುವುದು ನೆನಪಿರಲಿ. ನೀವು ನನ್ನ ಅಸಿಸ್ಟೆಂಟ್! ನನ್ನ ಮಾತಿನಲ್ಲಿ ವಿಶ್ವಾಸವಿಟ್ಟು ಇದಕ್ಕೆ ರುಜು ಹಾಕುವಿರೋ ಇಲ್ಲವೋ" ಎಂದು ಘರ್ಜಿಸಿದರು. ಆದರೆ ಆತನ ಅಂತರಾಳವು ಇದಕ್ಕೆ ಒಪ್ಪಲಿಲ್ಲ. "ನಿಮ್ಮ ಮೇಲಿನ ಅಭಿಮಾನ, ವಿಶ್ವಾಸಗಳಿಗೇನೂ ಕೊರತೆ ಇಲ್ಲ! ಆದರೆ ನನ್ನ ಕರ್ತವ್ಯ ಅದಕ್ಕಿಂತ ಹಿಂದೆ! ಆತ್ಮವನ್ನು ಮಾರಿಕೊಂಡು ಕೀರ್ತಿಯನ್ನು ಪಡೆಯಬೇಕಾಗಿಲ್ಲ" ಎಂದು ಉತ್ತರಿಸಿ ಕಛೇರಿಯಿಂದ ಹೊರಬಂದರು. ಮರುದಿನ ಸೇಡಿನ ಕ್ರಮವಾಗಿ ತರಗತಿಗೆ ನೇರವಾಗಿ ಬಂದು ತರಗತಿಯ ಹುಡುಗಿಯರ ಎದುರೇ ಪಾಠದ ವಿಷಯವಾಗಿ

ಅವಮಾನಿಸಲು ಯತ್ನಿಸಿದಳು. ಆಕೆಯೊಂದಿಗೆ ತರಗತಿಯಲ್ಲಿ ಎಲ್ಲರೆದುರು ಹೆಚ್ಚು ಮಾತು ಬೆಳೆಸಲು ಇಷ್ಟಪಡದೆ ಅಧ್ಯಾಪಕರ ಕೊಠಡಿಗೆ ಬಂದು ಕುಳಿತರು.

ಇದರ ವಿಚಾರಣೆ ನಡೆದು 'ಈ ದಿನ ನೀವು ಮಾಡಿದ ಅವಿಧೇಯತೆಯ ನಡತೆಗೆ ತಪ್ಪಾಯಿತೆಂದು ಈಗಲೇ ಬರೆದುಕೊಟ್ಟು ಮತ್ತೆ ತರಗತಿಗೆ ಹೋಗಿ' ಎಂದು ಆದೇಶ ನೀಡಿದರು. ಇದಕ್ಕೆ ಒಪ್ಪದಿದ್ದಾಗ ಮೇಲಧಿಕಾರಿಗಳಿಗೆ ತಂತಿಯನ್ನು ಕಳಿಸಿ ಸಂಜೆಗೇ ಕರೆಸಿಕೊಂಡಳು. ಬಂದ ಅಧಿಕಾರಿಗಳು ಸತ್ಯವನ್ನು ತಿಳಿಯುವ ಗೋಜಿಗೇ ಹೋಗದೆ "ಇಷ್ಟು ವಿದ್ಯಾವಂತರಾದ ನೀವೂ ಹೆಂಗಸನ್ನು ಗೌರವದಿಂದ ಕಾಣದೆ ಹೀಗೆ ಲೇವಡಿ ಮಾಡುತ್ತೀರೆಂದು ನಂಬಿರಲಿಲ್ಲ. ಅದು ನಿಮ್ಮ ತಪ್ಪಲ್ಲ. ಕಾಲೇಜಿನಲ್ಲಿ ನಡೆಸಿದ ಚಳುವಳಿಯ ಚಟ ಇನ್ನೂ ಬಿಟ್ಟಿಲ್ಲ" ಎಂದು ಟೀಕಿಸಿದ್ದು ಮಾತ್ರವಲ್ಲ, ಮೋಹನ್‌ರಾವ್ ಅವರನ್ನು ಕಾಂತಾಪುರಕ್ಕೆ ವರ್ಗಾಯಿಸಿದರು. ಆದರೆ ಕಾಳನಿಗೆ ಮಾತ್ರ ಅನ್ಯಾಯ ಮಾಡಿದರು. "ಇನ್ನು ಒಂದು ನಿಮಿಷ ಇಲ್ಲಿ ನಿಂತೆಯಾದರೆ ಪೊಲೀಸ್ ಸ್ಟೇಷನ್ ಮುಖ ನೋಡ ಬೇಕಾದೀತು. ತೊಲಗು ನಾಯಿ!" ಎಂದು ಗದರಿ ಕಳಿಸಿದರು.

ಶಿಕ್ಷಣ ವ್ಯವಸ್ಥೆಯಲ್ಲಿ ತಾಂಡವವಾಡುತ್ತಿದ್ದ ಭ್ರಷ್ಟಮುಖವನ್ನು ಕಥೆ ತೆರೆಯುತ್ತಾ ಹೋಗುತ್ತದೆ. ಆರಂಭದಲ್ಲಿ ವೈಯಕ್ತಿಕ ನೆಲೆಯಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರ ಇಡಿಯಾಗಿ ಶಿಕ್ಷಣ ವ್ಯವಸ್ಥೆಯನ್ನು ಒಳಗೊಳ್ಳುತ್ತದೆ. ಪರಿಶೀಲನೆಗೆಂದು ಬಂದ ಅಧಿಕಾರಿಗಳಿಗೆ ಸತ್ಯವನ್ನು ತಿಳಿದುಕೊಳ್ಳುವ ಮನಸ್ಸಿಲ್ಲದಿರುವುದು, ಬಂದ ಅಧಿಕಾರಿಗಳು ಕೈಗೊಂಬೆಯಂತೆ ವರ್ತಿಸಿ ಏಕಪಕ್ಷೀಯವಾಗಿ ತೀರ್ಮಾನವನ್ನು ತೆಗೆದುಕೊಳ್ಳುವುದು, ತಮ್ಮ ಕಣ್ಣೆದುರೇ ಕಾಳನನ್ನು ನಾಯಿ ಎಂದು ದೂಷಿಸುವುದು ವ್ಯವಸ್ಥೆಯ ಅಧಃಪತನವನ್ನು ಸೂಚಿಸುತ್ತದೆ. ಮಹಿಳೆಯೊಬ್ಬಳು ಕರುಣೆ, ಅನುಕಂಪ, ಸೌಜನ್ಯವನ್ನು ಮರೆತು ಈ ಬಗೆಯಲ್ಲಿ ಅಧಿಕಾರ ದರ್ಪದಿಂದ ವರ್ತಿಸುವುದು ಆಘಾತದ ಸಂಗತಿ. ವಿದ್ಯಾವಂತನಾದ ಮೋಹನ್‌ರಾವ್‌ಗೆ ಬುದ್ಧಿವಾದ ಹೇಳುವ ಅಧಿಕಾರಿಗಳು ಮುಖ್ಯೋಪಾಧ್ಯಾಯಿನಿಯ ನಡವಳಿಕೆಯಲ್ಲಿ ಯಾವುದೇ ಲೋಪವನ್ನು ಗುರುತಿಸುವುದಿಲ್ಲ. ಆಕೆ ನೀಡುವ ಆದರಆತಿಥ್ಯಗಳು ಎಲ್ಲಾ ಲೋಪಗಳನ್ನು ಮುಚ್ಚಿಬಿಡುತ್ತದೆ. ಭ್ರಷ್ಟತೆಯ ವಿರುದ್ಧ ಮೋಹನ್‌ರಾವ್ ಧ್ವನಿ ಎತ್ತಿದರೂ ಯಾವುದೇ ಪ್ರಯೋಜನವಿಲ್ಲದೆ ತಣ್ಣಗಾಗುತ್ತದೆ. ಇದು ಶೈಕ್ಷಣಿಕ ವಾತಾವರಣ ಹದಗೆಡುತ್ತಿರುವ ಮುನ್ಸೂಚನೆಯನ್ನು ನೀಡುತ್ತದೆ.

ಹೆಣ್ಣುಮಕ್ಕಳನ್ನು ಮದುವೆ ಮಾಡುವಲ್ಲಿ ಇರುವ ಸಂಕಟವನ್ನು 'ಸಂಸಾರ ಸುಖ' ಕಥೆ ತೆರೆಯುತ್ತಾ ಹೋಗುತ್ತದೆ. ಲಕ್ಷ್ಮಮ್ಮನ ಮಗಳು ಮಾಲತಿ ಓದು ಮುಗಿಸಿ ನೌಕರಿಗೆ ಸೇರಿದ್ದಳು. ಇದು ಊರಿನ ಉಳಿದ ಹೆಂಗಸರಿಗೆ ಸಹನೆಯಾಗುವುದಿಲ್ಲ. 'ಮಗಳನ್ನು ಬೀದಿ ಬೀದಿ ಬಿಟ್ಟಿದ್ದಾಳೆ' ಎಂದು ಆಡಿಕೊಳ್ಳತೊಡಗಿದ್ದರು. ಹೆಣ್ಣುಮಕ್ಕಳ ಮದುವೆ ಮಾಡುವುದೂ ಸುಲಭವಾಗಿರಲಿಲ್ಲ. "ಬಂದ ವರಗಳೆಲ್ಲಾ ಹುಡುಗಿಯ ರೂಪ, ಗುಣ, ನಡವಳಿಕೆಗಳಿಗಿಂತಲೂ, ಹೆಚ್ಚಾಗಿ ಕೇಳುತ್ತಿದ್ದುದು, ಮೂರುಸಾವಿರ ವರದಕ್ಷಿಣೆ, ಮುನ್ನೂರು ರೂಪಾಯಿ ಸೈಕಲ್‌ಗೆ ಮತ್ತೆ ವಾಚ್‌ಗೆ ಸೂಟಿಗೆ ಇನ್ನೂರು ರೂಪಾಯಿ! ಅಂತು ವರೋಪಚಾರ ಮಾಡಿ ಮದುವೆ ಮುಗಿಸಬೇಕಾದರೆ ಐದು ಸಾವಿರ ಕಟ್ಟಿಡಬೇಕಿತ್ತು!" ಎಂಬ ಮಾತು ಅಂದಿನ ಸ್ಥಿತಿಯನ್ನು ತೆರೆದಿಡುತ್ತದೆ. ಹುಡುಗರು ಹಣಕ್ಕಾಗಿ ಮದುವೆಯಾಗುತ್ತಿದ್ದಂತೆ ಕಾಣುತ್ತಿತ್ತು. ಮಾಲತಿಯ ಬಗೆಗೆ ಆಕೆಯಲ್ಲಿ ವಿಚಾರಿಸಿದರೆ "ಹಣಕೊಟ್ಟು ಹೊಸ ಸಂಸಾರ ಕಟ್ಟಿಕೊಂಡು, ಇದ್ದ ಸಂಸಾರವನ್ನು ಅಧೋಗತಿಗೆ ಈಡು ಮಾಡುವ ಅಗತ್ಯವೇನೂ ನನಗೆ ಕಂಡು ಬರುವುದಿಲ್ಲ!"

ಎಂದು ಕಡಕ್ಕಾಗಿ ಉತ್ತರಿಸುತ್ತಿದ್ದಳು.

ಮಾಲತಿಯ ವೈಯಕ್ತಿಕ ಬದುಕಿನ ಬಗೆಗೆ ಇನ್ನಿಲ್ಲದ ಕುತೂಹಲ ಶಂಕರಮ್ಮನಿಗಿತ್ತು. ಏನಾದರೂ ಹೇಳಿ ಮಾಲತಿಯ ತಾಯಿಯನ್ನು ಅಳಿಸುವುದರಲ್ಲಿ ಆಕೆಗೆ ವಿಚಿತ್ರವಾದ ಸಂತೋಷವಿತ್ತು. ಕಲಿತ ಹೆಣ್ಣುಮಕ್ಕಳನ್ನು ಟೀಕಿಸುವುದೆಂದರೆ ಶಂಕರಮ್ಮನಿಗೆ ಇನ್ನಿಲ್ಲದ ಸಂಭ್ರಮ. "ಈಗಿನ ಕಾಲದ ಹೆಣ್ಣುಗಳೇನು, ನಾಲ್ಕಕ್ಷರ ಕಲಿತು ನೌಕರಿ ಸೇರಿದರೆಂದರೆ, ಅವರಿಗೆ ಮದುವೆಯೂ ಬೇಡ. ಸಂಸಾರವೂ ಬೇಡ. ಗಂಡುಬೀರಿಗಳಾಗಿ ಬಿಡುತ್ತಾರೆ. ದೇವರೇ ಬಲ್ಲ. ಆ ಒಂಟಿ ಜೀವನದಲ್ಲಿ ಅವರೇನು ಸುಖ ಕಂಡಿರುವರೋ?" ಎಂಬ ನಿಲುವು ಶಂಕರಮ್ಮನದು. ಹೆಣ್ಣುಮಕ್ಕಳು ಶಿಕ್ಷಣ ಪಡೆಯುವುದರ ಬಗೆಗೆ ಶಂಕರಮ್ಮ ಹೇಳಿದ ನಕಾರಾತ್ಮಕ ಮಾತುಗಳನ್ನು ಕೇಳಿಸಿಕೊಂಡ ಮಾಲತಿ ನೀಡುವ ಉತ್ತರಕ್ಕೆ ಸಾಮಾಜಿಕ ಆಯಾಮವೊಂದು ಪ್ರಾಪ್ತವಾಗುತ್ತದೆ. ಮಾತ್ರವಲ್ಲ, ಸಮಕಾಲೀನ ಸಮಾಜದಲ್ಲಿ ಹೆಣ್ಣಿಗಿದ್ದ ಸ್ಥಾನಮಾನದ ಬಗೆಗೂ ಸೂಚನೆಗಳನ್ನು ನೀಡುತ್ತದೆ. ಹನ್ನೆರಡು ವರ್ಷಕ್ಕೆ ಮದುವೆ ಮಾಡಿದ ಹುಡುಗಿ ಹದಿನಾರಕ್ಕೆ ವಿಧವೆಯಾದದ್ದು, ವಿದ್ಯೆ ಕಲಿತರೆ ಕೆಡುವಳೆಂದು ವಿರೂಪ ಮಾಡಿ ಮನೆಯಲ್ಲಿ ಕೆಲಸಕ್ಕೆ ಇಟ್ಟುಕೊಂಡಿದ್ದು, ಬೆಳಗಾದರೆ ಆಕೆಯದು ಅಮಂಗಳ ಮುಖವೆಂದು ಉಪಚರಿಸುವುದು, ಲಕ್ಷ್ಮಿಗೆ ಬೇಗ ಮದುವೆ ಮಾಡಬೇಕೆಂದು ಕಂಡರಿಯದವನಿಗೆ ಕೊಟ್ಟಿದ್ದರ ಪರಿಣಾಮ ಕುಡುಕನೊಂದಿಗೆ ಬದುಕುವ ಅನಿವಾರ್ಯತೆ, ಪಾರಿಜಾಕ್ಷಿಯ ಗಂಡ ವರದಕ್ಷಿಣೆಗೆಂದು ಮದುವೆಯಾಗಿ ಆಕೆಯನ್ನು ನಡುದಾರಿಯಲ್ಲಿ ಕೈಬಿಟ್ಟು ಓಡಿಹೋದದ್ದು, ಅರುವತ್ತರ ಮುದುಕನ ಕತ್ತಿಗೆ ಕಟ್ಟಿದ ಪದ್ಮಿನಿ ವರ್ಷ ತುಂಬುವುದರೊಳಗೆ ವಿಧವೆಯಾದದ್ದು – ಹೀಗೆ ಮದುವೆಯಾದ ಹೆಣ್ಣುಮಕ್ಕಳ ಸಾಂಸಾರಿಕ ಸುಖದ ವಿವಿಧ ಮುಖಗಳನ್ನು ತೆರೆಯುವ ಮಾಲತಿ ಶಂಕರಮ್ಮನ ಬಾಯಿ ಮುಚ್ಚಿಸುವಳು. ಈ ಎಲ್ಲಾ ಘಟನೆಗಳಿಗೂ ಸಾಕ್ಷಿಯಾದ ಶಂಕರಮ್ಮನಿಗೆ ಮತ್ತೆ ಮಾತನಾಡಲಾಗುವುದಿಲ್ಲ. ಸಂಸಾರ ಸುಖವೆಂದು ಹಲುಬುವ ಶಂಕರಮ್ಮನಿಗೆ ಅವಳ ಕಣ್ಣೆದುರೇ ನಡೆದ ಘಟನೆಗಳನ್ನು ಉಲ್ಲೇಖಿಸುವುದರ ಮೂಲಕ ಮದುವೆಯಾದವರ ಬದುಕಿನ ವೈರುಧ್ಯವನ್ನು ಬಿಡಿಸಿಡುವಳು. ಮಾಲತಿಯ ಮಾತು ಅಲ್ಲಿದ್ದ ಹಲವರಿಗೆ ಸರಿಯಾಗಿಯೇ ಕಂಡಿತು. ಹೆಣ್ಣಿನ ಮನಸ್ಸನ್ನು ಸರಿಯಾಗಿ ಅರ್ಥಮಾಡಿಕೊಳ್ಳದ ವರ್ಗಕ್ಕೆ ಶಂಕರಮ್ಮ ಸೇರಿದರೆ, ಅಲ್ಲಿರುವ ಅನೇಕರು ಮಾಲತಿಯ ಪರವಾಗಿ ನಿಲ್ಲುವರು. ಹೆಣ್ಣುಮಕ್ಕಳ ಮದುವೆಗೆ ಅನಗತ್ಯವಾಗಿ ತೋರುವ ಅವಸರವನ್ನು ಲೇಖಕಿ ಇಲ್ಲಿ ಪ್ರಶ್ನಿಸಿದ್ದಾರೆ. ಆಕೆಗೆ ವಿದ್ಯೆಯನ್ನು ನೀಡುವುದರ ಕಡೆಗೆ ಒತ್ತು ನೀಡಿದ್ದಾರೆ. ಮಾಲತಿಯಲ್ಲಿರುವ ಆತ್ಮವಿಶ್ವಾಸಕ್ಕೆ ಆಕೆಗೆ ದೊರಕಿರುವ ಶಿಕ್ಷಣವೇ ಕಾರಣ ಎಂಬುದು ಇಲ್ಲಿ ಸ್ಪಷ್ಟವಾಗಿದೆ.

ಬ್ರಾಹ್ಮಣ ಸಮುದಾಯದ ಒಳಪಂಗಡದಲ್ಲಿ ನಡೆಯುತ್ತಿದ್ದ ಸಂಘರ್ಷವನ್ನು ಲೇಖಕಿ 'ಬಳ್ಳಿಗೊಂದು ಆಸರೆ' ಕಥೆಯಲ್ಲಿ ಚಿತ್ರಿಸಿದ್ದಾರೆ. ತನ್ನ ಮಗಳನ್ನು ಶಿವಳ್ಳಿ ಬ್ರಾಹ್ಮಣನಲ್ಲದ ವ್ಯಕ್ತಿಗೆ ಕೊಡುವುದಿಲ್ಲವೆಂದು ಹೇಳುವ ಚಂದ್ರಶೇಖರನ ಭಾವನನ್ನು, ಅಂತರ್ಜಾತೀಯ ವಿವಾಹಕ್ಕೆ ಒಪ್ಪಿಸುವುದಕ್ಕಾಗದೆ 'ನಿಮ್ಮ ಹಣೆಬರಹ' ಎಂದು ಹೇಳಿ ಹೊರಟುಹೋದನು. ಹವ್ಯಕ ಬ್ರಾಹ್ಮಣ ಸಮುದಾಯಕ್ಕೆ ಸೇರಿದ ನಿರಂಜನ ಶಾಲೆಯೊಂದರಲ್ಲಿ ಅಧ್ಯಾಪಕನಾಗಿದ್ದ. ಚಂದ್ರಶೇಖರನ ಅಕ್ಕನ ಮಗಳಾದ ಶೈಲಳನ್ನು ಪ್ರೀತಿಸುತ್ತಿದ್ದ. ತಮ್ಮ ಮದುವೆಗೆ ಶೈಲಳ ತಂದೆಯ ಒಪ್ಪಿಗೆ ಸಿಗದಿದ್ದಾಗ, ಆಕೆಗೆ ಮದುವೆಯಾಗುವವರೆಗೆ ಬ್ರಹ್ಮಚಾರಿಯಾಗಿರುವುದಾಗಿ

ನಿರ್ಧರಿಸಿದ. ಶೈಲಳ ತಂದೆ ಮಾತ್ರ "ನನ್ನ ಮಗಳನ್ನು ಹೊಂಡಕ್ಕೆ ನೂಕಿದರೂ, ನಾನು ಮಾತ್ರ ಬೇರೆಜಾತಿಗೆ ಕೊಡಲಾರೆ"ಎಂದು ಹಠ ಹಿಡಿದುಕುಳಿತಿದ್ದರು. ಇಂತಹ ಸಂದರ್ಭ ದಲ್ಲಿಯೇ ಅಚ್ಚ ಶಿವಳ್ಳಿಬ್ರಾಹ್ಮಣ ಸಮುದಾಯಕ್ಕೆ ಸೇರಿದ ತೆಂಕಲಾಗಿನಿಂದ ಬಂದ ವರನೊಬ್ಬ ಮದುವೆಗೆ ಒಪ್ಪಿದ. "ವರ ಕಪ್ಪಾದರೂ ಲಕ್ಷಣವಾಗಿದ್ದ. ವಯಸ್ಸಾಗಿದ್ದರೂ ಗಟ್ಟಿಮುಟ್ಟಾಗಿದ್ದ. ವಿದ್ಯಾವಂತನಲ್ಲದಿದ್ದರೂ ವೇದಪಾರಂಗತನಾಗಿದ್ದ". ಹೆಣ್ಣು ಗಂಡಿನ ಜಾತಕ ಹೊಂದಿದ್ದರಿಂದ ಶಾಸ್ತ್ರೋಕ್ತವಾಗಿ ಮದುವೆಯನ್ನೂ ನೆರವೇರಿಸಿ ಮಗಳನ್ನು ಗಂಡನ ಮನೆಗೆ ಕಳಿಸಿಕೊಟ್ಟರು. ಇದಾಗಿ ಸ್ವಲ್ಪ ಸಮಯಕ್ಕೆ ನಿರಂಜನನ ವಿವಾಹವೂ ನಡೆಯಿತು.

ಶೈಲಳ ಬದುಕಿನ ನಿಜಸಂಗತಿ ಅಕೆಯು ಗಂಡನ ಮನೆಗೆ ಭೇಟಿನೀಡಿದ ಚಂದ್ರಶೇಖರನಿಗೆ ಮೊದಲ ನೋಟಕ್ಕೇ ಗೊತ್ತಾಯಿತು. ಗಂಡನ ಮನೆಯಲ್ಲಿ ಶೈಲ ಕೂಲಿಯಾಳಿನಂತೆ ಬದುಕುತ್ತಿದ್ದಳು. ಮಾತ್ರವಲ್ಲ, ಶೈಲಳ ಗಂಡನಿಗೆ ಮೊದಲೇ ಒಂದು ಮದುವೆಯಾಗಿತ್ತು. "ಸಂಸಾರ ಮಾಡುತ್ತಿರುವ ಮರ್ಯಾದೆಯ ಗೃಹಸ್ಥನೆಂದು ಕರೆಸಿಕೊಳ್ಳಲು ಮತ್ತು ವಂಶಾಭಿವೃದ್ಧಿಗಾಗಿ" ಆತ ಶೈಲಜಾಳನ್ನು ಮದುವೆಯಾಗಿದ್ದ. ಅಳಿಯ ಅಪ್ಪಟ ಶಿವಳ್ಳಿ ಬ್ರಾಹ್ಮಣನೇನೋ ಆಗಿದ್ದ. ಆದರೆ ನೈತಿಕವಾಗಿ ಬ್ರಾಹ್ಮಣ್ಯವನ್ನು ತೊರೆದ ಭ್ರಷ್ಟನಾಗಿದ್ದ. ಶೈಲಜಾಳನ್ನು ಚಂದ್ರಶೇಖರ ಒತ್ತಾಯ ಪೂರ್ವಕವಾಗಿ ತವರಿಗೆ ಕರೆದುಕೊಂಡು ಬಂದ. ಎರಡು ವರ್ಷವಾದರೂ ಅವಳ ಪತಿ ಇತ್ತ ಸುಳಿಯಲಿಲ್ಲ.

ನಿರಂಜನನ ಪತ್ನಿ ಹೆರಿಗೆಯ ಸಂದರ್ಭದಲ್ಲಿ ತೀರಿಕೊಂಡಳು. ಇದರಿಂದ ಜೀವನದಲ್ಲಿ ಬೇಸರಗೊಂಡ ನಿರಂಜನ ಮನದ ಶಾಂತಿಗಾಗಿ ದೇಶಾಟನೆಯನ್ನು ಕೈಗೊಂಡು ಮನೆ ಬಿಟ್ಟು ತೆರಳಿದ. ಶೈಲಜಾಳ ತಂದೆ ಸ್ವರ್ಗಸ್ಥರಾದ ದಿನವೇ ಅವರ ಅಳಿಯ ರೋಗವನ್ನು ಹೊತ್ತು ಬಂದ. ಶೈಲಾ ರಾತ್ರಿ ಹಗಲು ಅವನ ಸೇವೆಯನ್ನು ಮಾಡಿದರೂ ಯಾವುದೇ ಪ್ರಯೋಜನವಾಗದೆ ವಿಧಿವಶನಾದ. ದೇಶಾಟನೆಯಿಂದ ಮರಳಿದ ನಿರಂಜನ, ಚಂದ್ರಶೇಖರನ ಪ್ರೋತ್ಸಾಹದಿಂದ ಶೈಲಜಾಳನ್ನು ಮದುವೆಯಾದ. ಇದರಿಂದ "ಬಾಡುತ್ತಿದ್ದ ಬಳ್ಳಿಗೊಂದು ಆಸರೆ ದೊರೆಯಿತು" ಎಂಬುದು ಲೇಖಕಿಯ ನಿಲುವು.

ಕಥೆಯನ್ನು ಸೂಕ್ಷ್ಮವಾಗಿ ನೋಡಿದರೆ ಹಲವು ಸಂಗತಿಗಳು ಸ್ಪಷ್ಟವಾಗುತ್ತವೆ. ಜ್ಯೋತಿಷ್ಯ, ಜಾತಕ, ಜಾತಿಯನ್ನು ಕಥೆಯಲ್ಲಿ ಲೇವಡಿ ಮಾಡಿದ್ದಾರೆ. ಅತ್ಯುತ್ತಮ ಜಾತಕವೆಂದು ಮದುವೆ ಮಾಡಿದ ಭಟ್ಟರ ಕಣ್ಣೆದುರಿನಲ್ಲಿಯೇ ಮಗಳ ಬದುಕು ಕುಸಿದು ಬೀಳುವುದನ್ನು ನೋಡಬಹುದು. ಇದರೊಂದಿಗೆ ಅಚ್ಚ ಶಿವಳ್ಳಿ ಹುಡುಗನೆಂದು ನಂಬಿದ್ದ ಭಟ್ಟರ ನಂಬಿಕೆಯ ತಳಹದಿಯೇ ಕುಸಿದು ಬೀಳುವಂತಹ ಘಟನೆ ನಡೆದು ಹೋಗುತ್ತದೆ. ಆಚಾರವಂತ ಶಿವಳ್ಳಿ ಮನೆತನದ ಹುಡುಗನ ನೈತಿಕತೆಯೇ ಪ್ರಶ್ನಾರ್ಥಕವಾಗಿ ಬಿಡುತ್ತದೆ. ಶೈಲಜಾಳ ತಂದೆ ಸಂಪ್ರದಾಯದ ಪ್ರತಿನಿಧಿ. ಚಂದ್ರಶೇಖರ ಮತ್ತು ನಿರಂಜನ ಪ್ರಗತಿಪರ ನಿಲುವನ್ನು ಹೊಂದಿದ ವ್ಯಕ್ತಿಗಳಾಗಿ ನಮ್ಮೆದುರು ನಿಲ್ಲುತ್ತಾರೆ. "ಶೈಲಾ, ನಿನ್ನಂತಹ ಕಲಿತ ಹೆಣ್ಣೂ ಕೂಡ, ಇಂತಹ ಮೂಢಾಚಾರಕ್ಕೆ ಬಲಿಯಾದ ಮೇಲೆ, ಹೆಣ್ಣಿನ ಸ್ಥಾನಮಾನ ಸುಧಾರಿಸ ಬೇಕೆಂಬುದು ಬರಿಯ ಆಕಾಶರೋಧನವಾಗುವುದರಲ್ಲಿ ಸಂಶಯವೇ ಇಲ್ಲ!. – ಎಲ್ಲಿಯವರೆಗೆ ನಮ್ಮ ಸಮಾಜ ಕಾಲಮಾನಕ್ಕೆ ತಕ್ಕಂತೆ ತನ್ನ ನೀತಿಕಟ್ಟನ್ನು ಸಡಿಲಿಸುವುದಿಲ್ಲವೋ ಎಲ್ಲಿಯವರೆಗೆ ಸ್ತ್ರೀಗೂ ಗಂಡಸಿನಂತೆ ಒಂದು ಹಕ್ಕುಬಾಧ್ಯತೆ ದೊರೆಯುವುದಿಲ್ಲವೋ, ಅಲ್ಲಿಯವರೆಗೆ ನಮ್ಮ ದೇಶದ ಸ್ತ್ರೀಯರ ಸ್ಥಿತಿ ಸುಧಾರಿಸುವುದು ಬರಿಯ ಕನಸು!"

ಎಂಬ ಚಂದ್ರಶೇಖರನ ಮಾತನ್ನು ಇಲ್ಲಿ ಗಮನಿಸಬಹುದು. ಒಂದುಕಡೆಯಿಂದ ಸಾಮಾಜಿಕ ಜಾಗೃತಿಯಾಗಬೇಕು, ಇನ್ನೊಂದು ಕಡೆಯಿಂದ ಶಿಕ್ಷಣವನ್ನು ಪಡೆದ ಹೆಣ್ಣುಮಕ್ಕಳು ಬಿಡುಗಡೆಯ ಕಡೆಗೆ ದೃಷ್ಟಿಹರಿಸಬೇಕು. ಇದು ಎರಡೂ ಕಡೆಯಿಂದಲೂ ಆಗಬೇಕಾದ ಪ್ರಕ್ರಿಯೆ ಎಂಬ ಮಾತಿನಲ್ಲಿ ವಾಸ್ತವದ ಚಿತ್ರ ಸ್ಪಷ್ಟವಾಗಿದೆ.

ಸಾಮಾಜಿಕವಾಗಿ ಆಚರಣೆಯಲ್ಲಿದ್ದ ವೈಧವ್ಯದ ಸಮಸ್ಯೆಗೆ ಲೇಖಕಿ ಪರಿಹಾರವೊಂದನ್ನು ಇಲ್ಲಿ ಸೂಚಿಸಿದ್ದಾರೆ. ವಿಧುರನಾದ ನಿರಂಜನ ವಿಧವೆಯಾದ ಶೈಲಜಾಳನ್ನು ಮದುವೆಯಾಗುವುದರ ಮೂಲಕ ಈ ಸಮಸ್ಯೆಗೆ ತಾರ್ಕಿಕ ಅಂತ್ಯವೊಂದನ್ನು ನೀಡಿದ್ದಾರೆ. ಶೈಲಳ ಮಗುವನ್ನೂ ಆತ ಸ್ವೀಕರಿಸುವುದು ಗಮನಿಸಬೇಕಾದ ಅಂಶ. ಸಾಮಾನ್ಯವಾಗಿ ವಿಧವೆಯನ್ನು ಮದುವೆಯಾಗುವ ಹುಡುಗರಿಗೆ ವಿವಾಹದ ಮೊದಲ ಅನುಭವ. ಗುಲ್ವಾಡಿ ವೆಂಕಟರಾಯರ ಇಂದಿರಾಬಾಯಿ ಕಾದಂಬರಿಯಲ್ಲಿ ಅವಿವಾಹಿತ ತರುಣ ವಿಧವೆಯಾದ ಇಂದಿರಾಬಾಯಿಯನ್ನು ವಿವಾಹವಾಗುವ ಚಿತ್ರವಿದೆ. ಆದರೆ ಈ ಬಗೆಯ ಸಾಮಾಜಿಕ ನಿಲುವು 1930 ದಶಕದಲ್ಲಿ ಮತ್ತೊಮ್ಮೆ ಪರಿಷ್ಕಾರಕ್ಕೆ ಒಳಗಾದಂತಿದೆ. ಅಕದಾಸ ಗಣಪತಿ ಭಟ್ಟರು ಉತ್ತರ ಕನ್ನಡದಲ್ಲಿ ಆರಂಭಿಸಿದ ಚಳುವಳಿಗೆ ಹೊಸ ಆಯಾಮವೊಂದು ದೊರಕಿತು. ಅವರು ವಿಧುರ–ವಿಧವೆಯನ್ನು ಮಧುವೆಯಾಗಬೇಕೆಂದು ಸಲಹೆಯನ್ನು ನೀಡಿದರು. ಮಾತ್ರವಲ್ಲ, ಸ್ವತಃ ಇದನ್ನು ವೈಯಕ್ತಿಕ ಬದುಕಿನಲ್ಲಿ ಆಚರಣೆಗೆ ತಂದು ಸಮಾಜಕ್ಕೆ ಮಾದರಿಯಾದರು. 1934ರಲ್ಲಿ ಜಿ.ಜಿ.ಹೆಗಡೆಯವರು ಪ್ರಕಟಿಸಿದ ಅರಣ್ಯರೋಧನ ನಾಟಕದಲ್ಲಿ ಮೊದಲ ಸಲ ವಿಧವೆ ಮತ್ತು ವಿಧುರನಾದ ವ್ಯಕ್ತಿಯ ನಡುವೆ ವಿವಾಹ ನಡೆದ ಚಿತ್ರ ದೊರೆಯುತ್ತದೆ. ಈ ಕಥೆಯಲ್ಲಿಯೂ ಅದೇ ಬಗೆಯ ಚಿತ್ರವೊಂದು ದೊರೆಯುವುದು ಸಾಮಾಜಿಕ ನೆಲೆಯಲ್ಲಿ ಹೊಸ ಮೌಲ್ಯವೊಂದರ ಆವಿಷ್ಕಾರ ವಾಗುತ್ತಿರುವುದರ ಸೂಚನೆ ದೊರೆಯುತ್ತದೆ. ಕಥೆಯಲ್ಲಿ ಚಂದ್ರಶೇಖರನ ಕಡೆಯಿಂದ ದೊರೆಯುವ ಬೆಂಬಲವು ಅತ್ಯಂತ ಮುಖ್ಯವಾಗಿದೆ. ಶಿಕ್ಷಣವನ್ನು ಪಡೆದ ತರುಣ ಜನಾಂಗದಲ್ಲಿ ಆರಂಭವಾಗಿರುವ ಸಾಮಾಜಿಕ ಚಲನೆಯನ್ನು ಇದು ಸೂಚಿಸುತ್ತದೆ.

'ಪೋಕ್ರಿ ಮುರಳಿ' ಕಥೆಯನ್ನು ಮನೋವಿಜ್ಞಾನದ ಹಿನ್ನೆಲೆಯಲ್ಲಿ ಗಮನಿಸುವ ಅಗತ್ಯವಿದೆ. ಮುಖ್ಯವಾಗಿ ಮಕ್ಕಳಮನೋವಿಜ್ಞಾನದ ಹಿನ್ನೆಲೆಯಲ್ಲಿ ಈ ಕಥೆಯನ್ನು ಬರೆದಂತೆ ಕಾಣುತ್ತದೆ. 1950ರ ಕಾಲಘಟ್ಟದಲ್ಲಿ ಈ ಬಗೆಯ ಕಥೆಗಳು ಕನ್ನಡಕ್ಕೆ ಹೊಸತೆನ್ನಬೇಕು. ಅನಂತರದ ಕಾಲದಲ್ಲಿ ಇದು ನವ್ಯರಲ್ಲಿ ದಟ್ಟವಾಗಿ ಕಾಣಿಸಿಕೊಂಡರೂ ಇದರ ಆರಂಭವನ್ನು ಇಲ್ಲಿ ಗುರುತಿಸಲು ಸಾಧ್ಯ ಎಂಬುದು ಗಮನಿಸಬೇಕಾದ ಅಂಶ.

ಬಾಲಕ ಮುರಳಿಗೆ ಹೆಣ್ಣು ಮಕ್ಕಳನ್ನು ಕಂಡರೆ ಆಗದು. ಅವರು ಕುಳಿತ ಬೆಂಚಿನಲ್ಲಿ ಅವನು ಕುಳಿತುಕೊಳ್ಳುತ್ತಿರಲಿಲ್ಲ. ಹೀಗಾಗಿ ಶಾಲೆಯಲ್ಲಿ ಅವನಿಗೆ ನಾಲ್ಕು ಪೆಟ್ಟುಕೊಟ್ಟು ಕೂರಿಸುತ್ತಿದ್ದರು. ಒಂದು ರೀತಿಯಲ್ಲಿ ಆತ ಮಾನಸಿಕ ಸಮಸ್ಯೆಯಿಂದ ಬಳಲುತ್ತಿದ್ದ. ಮನೆಯಲ್ಲಿ ಮುರಳಿಯ ಬಗೆಗೆ ತೋರುತ್ತಿದ್ದ ಅಸಡ್ಡೆಯೇ ಆತನ ಮಾನಸಿಕ ಸಮಸ್ಯೆಗೆ ಕಾರಣವಾಗಿತ್ತು. ಮುರಳಿಯ ತಂಗಿಯನ್ನು ಮನೆಯಲ್ಲಿ ಅತಿಯಾಗಿ ಪ್ರೀತಿಸುವುದು, ಮುರಳಿಯನ್ನು ಪೋಕ್ರಿ ಎಂದು ಬೈಯ್ಯುವುದು ಆತನ ಸಮಸ್ಯೆಯ ಮೂಲವಾಗಿತ್ತು. ಮುರಳಿಯ ಮನಸ್ಸಿನ ತುಮುಲವನ್ನು ಗ್ರಹಿಸಿದ ಕಥೆಯ ನಿರೂಪಕಿ ಹೆತ್ತವರಿಗೆ ಬುದ್ಧಿವಾದವನ್ನು ಹೇಳಿದಳು.

"ದಿನಕ್ಕೆ ನೂರು ಬಾರಿ ಮನೆಯ ಮಂದಿ ಎಲ್ಲಾ ಅವನನ್ನು ಪೋಕ್ರಿ ಎಂದು ಹೇಳಿ ಎಳೆಯ ಮನಸ್ಸನ್ನು ನೋಯಿಸಿ ಕಲ್ಲು ಮಾಡಿದವರು ನೀವು! ಅವನೆದುರಿಗೇ ನಿಮಗೆ ಹೆಣ್ಣು ಮಗುವಿನ ಮೇಲೆ ಪ್ರೀತಿ ಹೆಚ್ಚೆಂದು ತೋರಿಸಿ ಅವನನ್ನು ನಿಕೃಷ್ಟವಾಗಿ ಕಂಡು ಅವನಿಗೆ ಹೆಣ್ಣಿನ ಮೇಲೆ ದ್ವೇಷ ಹುಟ್ಟುವಂತೆ ಮಾಡಿದವರು ನೀವು! ನೀವು ಆಡುವ ಒಂದೊಂದು ಮಾತೂ ನಿಮ್ಮ ಆಚರಣೆಯೂ, ಮೇಣದಂತಿರುವ ಮಕ್ಕಳ ಮನಸ್ಸಿನ ಮೇಲೆ ಎಂತಹ ಪರಿಣಾಮ ಉಂಟುಮಾಡುವುದೆಂದು!" ಎಂದು ಹಿತವಚನವನ್ನು ಹೇಳಿದಳು. ಇದನ್ನು ಸರಿಯಾಗಿ ಅರ್ಥಮಾಡಿಕೊಂಡ ಮುರಳಿಯ ಹೆತ್ತವರು ತಮ್ಮ ವರ್ತನೆಯಲ್ಲಿ ಬದಲಾವಣೆಯನ್ನು ಮಾಡಿಕೊಂಡರು. ಮರುದಿನದಿಂದ ಮುರಳಿಯ ಸ್ವಭಾವದಲ್ಲಿಯೂ ಬದಲಾವಣೆ ಕಂಡು ಬಂತು. ಸ್ವತಃ ಮುರಳಿಯೇ ತನ್ನ ತಂಗಿ ಬೇಬಿಯನ್ನು ಅಪಾರವಾಗಿ ಪ್ರೀತಿಸಲು ತೊಡಗಿದ. ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಳ್ಳಬೇಕು ಎಂಬ ಸಂದೇಶವನ್ನು ಲೇಖಕಿ ಇಲ್ಲಿ ನೀಡಿದ್ದಾರೆ. ಒಟ್ಟಿನಲ್ಲಿ ಡಾ.ಯಮುನಾ ಲಿಂಗಪ್ಪನವರು ಕನ್ನಡದಲ್ಲಿ ಬರೆದಿರುವುದು ಎರಡೇ ಕೃತಿಗಳಾದರೂ ಅದರ ವಸ್ತುವಿನ ಆಯ್ಕೆ, ನಿರೂಪಣೆಯಲ್ಲಿ ಹೊಸತನವನ್ನು ತಂದಿದ್ದಾರೆ. ತಮ್ಮ ಪಾತ್ರಗಳ ಮೂಲಕ ಸಮಕಾಲೀನ ಸಮಾಜ ಎದುರಿಸುತ್ತಿರುವ ಸಮಸ್ಯೆಗಳು, ಅದಕ್ಕೆ ಸಮಾಜದ ಒಳಗಿನಿಂದಲೇ ದೊರೆಯಬೇಕಾದ ಪರಿಹಾರವನ್ನು ಇಲ್ಲಿ ಸೂಚಿಸುತ್ತಿರುವಂತಿದೆ.

ಪಾತ್ರಗಳ ವೈವಿಧ್ಯ

ತೀರದ ಆಸೆಯ ರಾಮನಾಥ, ಪತಂಗದ ಮಾಧವರಾಯ ಒಂದೇ ಗುಣಸ್ವಭಾವದವರು. ಸ್ವಾರ್ಥಿಗಳು. ಹೆಣ್ಣನ್ನು ಭೋಗದ ವಸ್ತುವನ್ನಾಗಿ ನೋಡುವ ಕಾಮುಕರು. ಇವರಿಗೆ ಪ್ರತಿಯಾಗಿ ತೀರದ ಆಸೆ ಕೃತಿಯ ಜಯರಾಮನ ವ್ಯಕ್ತಿತ್ವವನ್ನು ನಮ್ಮೆದುರು ನಿಲ್ಲಿಸುವರು. ಹೆಣ್ಣಿನ ಬದುಕಿನ ಬಗೆಗೆ ಅನುಕಂಪ ಮತ್ತು ಸಹಾನುಭೂತಿಯನ್ನು ಬಳ್ಳಿಗೊಂದು ಆಸರೆ ಕಥೆಯ ಚಂದ್ರಶೇಖರ ಮತ್ತು ನಿರಂಜನರಲ್ಲಿ ನೋಡಲು ಸಾಧ್ಯ. ಆದರೆ ಇವರಲ್ಲಿ ಸಾಂಪ್ರದಾಯಿಕ ಸಮಾಜದ ಪರಂಪರಾಗತ ಮೌಲ್ಯಗಳನ್ನು ಮುರಿದು ಕಟ್ಟುವ ಹಂಬಲವಿದೆ. ಮೂಢನಂಬಿಕೆ, ಮೌಢ್ಯಗಳನ್ನು ನಿರಾಕರಿಸಿ ಹೊಸ ಸಮಾಜವನ್ನು ನಿರ್ಮಿಸುವ ಅಪೇಕ್ಷೆಯಿದೆ. ಇದಕ್ಕನುಗುಣವಾಗಿ ವಿಧವೆ–ವಿಧುರ ಇವರ ನಡುವೆ ವಿವಾಹವೂ ನಡೆಯುತ್ತದೆ. ಶಿಕ್ಷಣ ಕ್ಷೇತ್ರದಲ್ಲಿನ ಭ್ರಷ್ಟಾಚಾರದ ವಿರುದ್ಧ ಮೋಹನ್‌ರಾವ್ ತೆರೆಯ ಮರೆಯಲ್ಲಿ ಕಥೆಯೊಳಗೆ ಧ್ವನಿ ಎತ್ತಿದರೂ ಅದಕ್ಕೆ ಬಲಬರುವುದಿಲ್ಲ. ಆತನೇ ಆ ವ್ಯವಸ್ಥೆಯ ಬಲಿಪಶುವಾಗಿ ಬೇರೆ ಊರಿಗೆ ವರ್ಗಾವಣೆಯಾಗಿ ಹೋಗುತ್ತಾನೆ.

ಯಮುನಾ ಅವರ ಕೃತಿಗಳಲ್ಲಿ ಬರುವ ಬಹುತೇಕ ಮಹಿಳಾ ಪಾತ್ರಗಳು ಸುಶಿಕ್ಷಿತರು. ಆಧುನಿಕ ಶಿಕ್ಷಣವನ್ನು ಪಡೆದವರು. ಹೀಗಾಗಿ ಇಲ್ಲಿನ ಪಾತ್ರಗಳಲ್ಲಿ ಆತ್ಮವಿಶ್ವಾಸ, ಸಮಾಜವನ್ನು ಎದುರಿಸುವ ಧೈರ್ಯವಿದೆ. ಯಾವುದೇ ಅಳುಕಿಲ್ಲದೆ ರಾಜಾರೋಷವಾಗಿ ಭ್ರಷ್ಟಾಚಾರವನ್ನು ನಡೆಸುವ ಶಂಶದುನ್ನೀಸಬೇಗಂ ಅವರಿಗೂ ಕಾಳನಿಗೆ ವಂಚಿಸಲು ಧೈರ್ಯ ಬಂದಿರುವುದು, ಮೋಹನ್‌ರಾವ್ ಅವರ ಮೇಲೆ ದಬ್ಬಾಳಿಕೆ ನಡೆಸಲು ಸಾಧ್ಯವಾಗಿರುವುದು ಅವರು ಪಡೆದ ಶಿಕ್ಷಣದಿಂದಲೇ ಆಗಿದೆ.

ಸಾಮಾಜಿಕರಚನೆ ಇಲ್ಲವೇ ಪರಿವರ್ತನೆಯ ಸಂದರ್ಭದಲ್ಲಿ ತಮ್ಮನ್ನು ಕ್ರಿಯಾಶೀಲವಾಗಿ

ತೊಡಗಿಸಿಕೊಂಡಿರುವ, ಬದುಕಿನಲ್ಲಿ ಒದಗಿಬಂದ ಸಂಕಟಗಳನ್ನು ಧೈರ್ಯವಾಗಿ ಎದುರಿಸುವ, ಆಧುನಿಕ ಮನೋಧರ್ಮವನ್ನು ಅರ್ಥಮಾಡಿಕೊಂಡು ಅನುಸರಿಸುವ ಪಾತ್ರಗಳು ಇಲ್ಲಿವೆ. ಆಧುನಿಕ ಶಿಕ್ಷಣವನ್ನು ಪಡೆದ ಒಂದು ಸಮಾಜದ ಸಂಕ್ರಮಣಾವಸ್ಥೆಯ ಚಿತ್ರಣವನ್ನು ಇಲ್ಲಿ ಗುರುತಿಸಲು ಸಾಧ್ಯ. ಈ ಹಿನ್ನೆಲೆಯಲ್ಲಿ ತೀರದ ಆಸೆ ಕೃತಿಯ ಸುಮನಾ ಮತ್ತು ನಿರ್ಮಲ, ಪತಂಗದ ಕುಸುಮ, ತಾಳಿಭಾಗ್ಯದ ಮೀನಾಕ್ಷಿ, ಸಂಸಾರ ಸುಖ ಕಥೆಯ ಮಾಲತಿ, ಬಳ್ಳಿಗೊಂದು ಆಸರೆ ಕಥೆಯ ಶೈಲಜಾ ಪಾತ್ರಗಳನ್ನು ಗಮನಿಸಲು ಸಾಧ್ಯ.

ಸುಮನಾ ಮತ್ತು ನಿರ್ಮಲ ಒಡನಾಡಿಗಳಾಗಿ ಬೆಳೆದವರು. ಒಟ್ಟಿಗೆ ಶಿಕ್ಷಣವನ್ನು ಪಡೆದವರು. ಆದರೆ ನಿರ್ಮಲ ಸಾಂಸಾರಿಕ ಬದುಕನ್ನು ಹಿರಿಯರ ಒತ್ತಡಕ್ಕೆ ಮಣಿದು ಒಪ್ಪಿಕೊಂಡರೆ ಸುಮನಾ ಮೆಡಿಕಲ್ ಪಡೆಯಲು ಸಾಧ್ಯವಾಗದೆ ನಿರಾಸೆಯನ್ನು ಅನುಭವಿಸಿದರೂ ಪದವಿ ಶಿಕ್ಷಣಕ್ಕೆ ಸೇರಿದಳು. ಕಾಲೇಜಿನಲ್ಲಿ ಹುಡುಗರಿಂದ ಎದುರಾದ ಆತಂಕಗಳನ್ನು ಧೈರ್ಯವಾಗಿ ಎದುರಿಸುವ ಸುಮನಾ ಆರಂಭದಲ್ಲಿ ರಾಮನಾಥನ ಕಪಟ ಸ್ನೇಹಕ್ಕೆ ಮೋಸಹೋದರೂ ಅನಂತರ ನಿಜದ ಅರಿವಾಗಿ ಆತನಿಂದ ದೂರ ಸರಿಯುವಳು. ಜಯರಾಮ ವಿಧವೆಯ ಮಗನೆಂದು ಗೊತ್ತಿದ್ದರೂ ಆತನನ್ನು ಮದುವೆಯಾಗುವ ಮೂಲಕ ಸಮಾಜಕ್ಕೆ ಹೊಸ ಸಂದೇಶವನ್ನು ರವಾನಿಸುವಳು. ಜಾತಿ, ವರ್ಗ, ಅಂತಸ್ತನ್ನು ಮೀರಿ, ವ್ಯಕ್ತಿಯ ಗುಣಕ್ಕೆ ಗೌರವ ಕೊಡುವ ಅರಿವು ಆಕೆಗೆ ಬಂದಿದ್ದು ಶಿಕ್ಷಣದಿಂದ ಎಂಬುದು ಸತ್ಯ.

ಪತಂಗದ ಕುಸುಮ ಮತ್ತು ತಾಳಿಭಾಗ್ಯದ ಮೀನಾಕ್ಷಿಯರಲ್ಲಿ ಮುಗ್ಧತೆಯಿದೆ. ಕುಸುಮಳಿಗೆ ತನಗೆ ಮೋಸವಾಗಿದೆ ಎಂದು ಗೊತ್ತಾಗುವಷ್ಟರಲ್ಲಿ ತಡವಾಗಿತ್ತು. ಆವಳ ಅಸಹಾಯಕತೆಯೇ ಇಲ್ಲಿ ಮುಖ್ಯವಾಗುತ್ತದೆ. ಆದರೆ ಸಂಸಾರ ಸುಖದ ಮಾಲತಿಯಲ್ಲಿ ಅಸಹಾಯಕತೆಯಿಲ್ಲ. ತನ್ನನ್ನು ಅಥವಾ ಓದಿ ನೌಕರಿಗೆ ಸೇರಿದ ಮಹಿಳೆಯರನ್ನು ಟೀಕಿಸುವ ಸಮಾಜಕ್ಕೆ ಖಚಿತ ಉತ್ತರವನ್ನು ನೀಡಬಲ್ಲಳು. ಸಮಾಜದ ಒಳಗಿರುವ ಹುಳುಕುಗಳನ್ನು ಎತ್ತಿ ತೋರಿಸುವುದರ ಮೂಲಕ ತನ್ನನ್ನು ಟೀಕಿಸುವವರ ಬಾಯಿಮುಚ್ಚಿಸ ಬಲ್ಲಷ್ಟು ಧೈರ್ಯ ಆಕೆಯಲ್ಲಿದೆ. ಹೀಗಾಗಿ ವಿದ್ಯೆ ಮತ್ತು ಆರ್ಥಿಕ ಸ್ವಾವಲಂಬನೆ ಮಹಿಳೆಗೆ ಆತ್ಮವಿಶ್ವಾಸವನ್ನು ನೀಡಬಲ್ಲದು ಎಂಬುದು ಇಲ್ಲಿ ಸ್ಪಷ್ಟವಾಗಿದೆ.

ಬಳ್ಳಿಗೊಂದು ಆಸರೆ ಕಥೆಯ ಶೈಲಜ ಆರಂಭದಲ್ಲಿ ತಂದೆಯ ಮಾತಿಗೆ ಕಟ್ಟುಬಿದ್ದು ಅವರು ತೋರಿಸಿದ ಹುಡುಗನನ್ನು ಮದುವೆಯಾಗಿ ವಿಧವೆಯಾಗುವಳು. ಅನಂತರ ಆಕೆ ವಿಧುರನಾದ ನಿರಂಜನನನ್ನು ಮರುಮದುವೆಯಾಗುವುದರ ಮೂಲಕ ಜಡ್ಡುಗಟ್ಟಿದ ಸಮಾಜಕ್ಕೆ ಶಾಕ್ ನೀಡುವಲ್ಲಿ ಯಶಸ್ವಿಯಾಗುತ್ತಾಳೆ. ಇಲ್ಲಿ ಸಮಾಜದ ಒಳಗಿನಿಂದಲೇ ಸುಧಾರಣೆಯ ಪ್ರಕ್ರಿಯೆ ಆರಂಭವಾಗಿದೆ. ಬದುಕಿನಲ್ಲಿ ನೊಂದ ಶೈಲಜಾಳಿಂದ ಈ ಪ್ರಕ್ರಿಯೆ ಆರಂಭವಾಗಿರುವುದು ಗಮನಾರ್ಹವಾಗಿದೆ. ಒಟ್ಟಿನಲ್ಲಿ ಡಾ. ಯಮುನಾ ಲಿಂಗಪ್ಪ ಅವರು ಚಿತ್ರಿಸಿದ ಸುಮನಾ ಮತ್ತು ಮಾಲತಿ ಆಧುನಿಕ ಚಿಂತನೆಗಳನ್ನು ಮೈಗೂಡಿಸಿಕೊಂಡ ಹೊಸತನದ ಹರಿಕಾರರಾಗಿ ನಮ್ಮೆದುರು ನಿಲ್ಲುತ್ತಾರೆ. ಈ ದೃಷ್ಟಿಯಿಂದ ಡಾ. ಯಮುನಾ ಲಿಂಗಪ್ಪ ಅವರ ಕೊಡುಗೆ ಸಾಹಿತ್ಯಕ್ಕೆ ಕಿರಿದಲ್ಲ. ಇದಕ್ಕಿಂತ ಮಿಗಿಲಾಗಿ ಅವರು ವೈಜ್ಞಾನಿಕ ಸಂಶೋಧನೆಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಗಣನೀಯವಾಗಿದೆ.

ಬಾಗಿಲನು ತೆರೆದು

ಡಾ. ಮಾಧವ ಪೆರಾಜೆ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಬಳ್ಳಾರಿ ಜಿಲ್ಲೆ

'ದೇವಾಲಯ ಪ್ರವೇಶ' ಎನ್ನುವ ಸಂಗತಿಯು ಈಗ ಒಂದು ಜ್ವಲಂತ ಸಮಸ್ಯೆ ಎನ್ನುವ ಹಾಗೆ ಪ್ರತಿಬಿಂಬಿತವಾಗುತ್ತಿದೆ. ಕನ್ನಡದ ಜನಪ್ರಿಯ ದಿನಪತ್ರಿಕೆಯಾದ ಪ್ರಜಾವಾಣಿಯಲ್ಲಿ 'ದೇಗುಲ ಪ್ರವೇಶವೂ ಶುದ್ಧೀಕರಣವೂ' ಎನ್ನುವ ಲೇಖನ(ಲೇ:ಹೊಸಕೆರೆ ನಂಜುಂಡೇಗೌಡ, ದಿ.6.10.14) ಪ್ರಕಟವಾಗಿದೆ. ಈ ಹಿನ್ನೆಲೆಯಲ್ಲಿ ಇದು ಅತ್ಯಂತ ಸಮಕಾಲೀನ ಸಂಗತಿಯಾಗಿದೆ ಎನ್ನುವುದರಲ್ಲಿ ಅನುಮಾನವಲ್ಲ. ಈ ಲೇಖನಕ್ಕೆ ಸಂಬಂಧಿಸಿದ ಹಾಗೆ ಶೀರ್ಷಿಕೆಯ ಹಾಗಿರುವ 'ಬಾಗಿಲನು ತೆರೆದು' ಎನ್ನುವ ಕೀರ್ತನೆಯ ಸಾಲೊಂದು ಈ ಲೇಖನಕ್ಕೆ ಬಾಗಿಲೇ ಆಗುತ್ತದೆ ಎನ್ನುವ ಹಿನ್ನೆಲೆಯಲ್ಲಿ ಆ ಕೀರ್ತನೆಯನ್ನು ಪೂರ್ಣವಾಗಿ ಇಲ್ಲಿ ಉದ್ಧರಿಸಲಾಗಿದೆ.

ಬಾಗಿಲನು ತೆರೆದು ಸೇವೆಯನು ಕೊಡು ಹರಿಯೆಂ ।
ಕೂಗಿದರು ದನಿ ಕೇಳದೇ ನರಹರಿಯೇ ॥ಪ॥
ಪರಮ ಪದದೊಳಗೆ ವಿಷಧರನ ತಲ್ಪದಲಿ ನೀ ।
ಸಿರಿ ಸಹಿತ ಕ್ಷೀರವಾರಿಧಿಯೊಳಿರಲು ॥
ಕರಿರಾಜ ಕಷ್ಟದಲಿ ಆದಿಮೂಲ ಎಂದು ।
ಕರೆಯಲಾಕ್ಷಣ ಬಂದು ಒದಗಿದೆಯೋ ನರಹರಿಯೇ ॥

ಖಡು ಕೋಪದಿಂ ಖಳನು ಖಡುಗವನೆ ಪಿಡಿದು ನಿ
ನ್ನೊಡೆಯನೆಲ್ಲಿಹನೆಂದು ನುಡಿಯೆ ॥
ದೃಢಭಕುತಿಯಲಿ ಶಿಶುವು ಬಿಡದೆ ನಿನ್ನನು ಭಜಿಸೆ
ಸಡಗರದಿ ಕಂಭದಿಂದೊಡೆದೆ ನರಹರಿಯೇ ॥2॥

ಯಮಸುತನ ರಾಣಿಗೆ ಅಕ್ಷಯ ವಚನವನ್ನಿತ್ತೆ
ಸಮಯದಲಿ ಅಜಮಿಳನ ತೊರೆದೆ ॥
ಸಮಯಾಸಮಯವುಂಟೆ ಭಕ್ತವತ್ಸಲ ನಿನಗೆ
ಕಮಲಾಕ್ಷ ಕಾಗಿನೆಲೆಯಾದಿಕೇಶವನೆ ॥3॥

ಕನಕದಾಸರಿಗೆ – ಅವರು ಕುರುಬರಾಗಿದ್ದ ಕಾರಣಕ್ಕೆ – ಉಡುಪಿಯ ಕೃಷ್ಣ ದೇವಾಲಯದಲ್ಲಿ ಪ್ರವೇಶ ನಿರಾಕರಿಸಲಾಯಿತೆನ್ನುವ ಒಂದು ಐತಿಹ್ಯವಿದೆಯಷ್ಟೇ. ಆ ಸಂದರ್ಭಕ್ಕೆ ಸಂಬಂಧಿಸಿದ್ದು ಎಂದು ಪಾರಂಪರಿಕವಾಗಿ ಹೇಳುವ ಕೀರ್ತನೆ ಮಾತ್ರ ಇದಲ್ಲ ಎನ್ನುವುದನ್ನು ನಾವಿಲ್ಲಿ ತಪ್ಪದೇ ಗಮನಿಸಬೇಕು. ಪಾರಂಪರಿಕವಾಗಿ ನಮಗೆ ತಿಳಿದು ಬರುವಂತೆ ಬ್ರಾಹ್ಮಣರು ಕುರುಬರಾದ ಕನಕದಾಸರಿಗೆ ಪ್ರವೇಶ ನಿರಾಕರಿಸಿದಾಗ ಕನಕದಾಸರು ಅಲ್ಲಿಯೇ ಹಾಡಿದ ಕೀರ್ತನೆ ಇದು :

ಪೂರ್ವ ಜನ್ಮದಲಿ ನಾ ಮಾಡಿದಾ ಭವದಿಂದ
ಊರ್ವಿಯೊಳು ಜನಿಸಿದೆನೋ ಕೃಷ್ಣಾ
ಕಾರುಣ್ಯನಿಧಿಯೆನ್ನ ಕಾಯಬೇಕಯ್ಯಾ ಹರಿ ॥ಪ॥
ವಾರಿಜನಾಭನೇ ಮುದ್ದು ಕೃಷ್ಣ ॥ಅ.ಪ॥

ಹುಟ್ಟಿದಂದಿಂದಿಗೂ ಸುಖವ ನಾ ಕಾಣದಲೆ
ಕಷ್ಟನಾದೆನು ಕೇಳೋ ಕೃಷ್ಣಾ ॥
ತೊಟ್ಟಲಿನ ಶಿಶು ತಾಯ ಬಿಟ್ಟತೆರನಂತೆ ಕಂ।
ಗೆಟ್ಟು ಸೊರಗಿದೆನಯ್ಯ ಕೃಷ್ಣಾ ॥
ಮುಟ್ಟಲಮ್ಮರು ಎನ್ನ ಸತಿಸುತರು ಬಾಂಧವರು
ಅಟ್ಟಿ ಎಳೆಯುತ್ತಿಹರೊ ಕೃಷ್ಣಾ ॥
ಕಷ್ಟ ದಾರಿದ್ರ್ಯವನು ಪರಿಹರಿಸಿದರೆ ದೂರು
ಮುಟ್ಟುವುದು ನಿನಗಯ್ಯ ಕೃಷ್ಣ ॥1॥
ಕಾಶಿಯಾ ವಾಸವನು ಬಯಸಿ ಬಹುದಿನದಿಂದ
ಆಸೆಯೊಳಗಿದ್ದೆನಯ್ಯಾ ಕೃಷ್ಣಾ
ಗಾಸಿಯನು ಮಾಡದಲೆ ದೋಷವನು ಪರಿಹರಿಸೊ
ಸಾಸಿರದ ನಾಮದಾ ಕೃಷ್ಣ ॥
ಹೇಸಿಕೆಯೊಳಿರ್ದ ಸಂಸಾರವೆಂಬುದು ಮಾಯ
ಪಾಶದಿಂದಲಿ ಬಿಗಿವರೆ ಕೃಷ್ಣಾ
ಕಂಸಮರ್ಧನ ನೀ ಕಾಯಬೇಕಯ್ಯ ಹರಿ
ವಾಸುದೇವನೆ ಮುದ್ದು ಕೃಷ್ಣಾ ॥ಪ॥

ಲೋಕದೊಳಗೆನ್ನನು ಪೋಲ್ವ ಪಾಪಿಗಳನ್ನು
ನೀ ಕಂಡುಬಲ್ಲೆಯಾ ಕೃಷ್ಣಾ ॥
ಸಾಕಿನ್ನು ಎನಗೊಂದು ಗತಿಯ ತೋರಿಸು ಸದ್ವಿ
ವೇಕಿಯನೆ ಮಾಡಯ್ಯ ಕೃಷ್ಣಾ ॥
ರಾಕೇಂದುಮುಖಿಯ ದ್ರೌಪದಿಯ ಮಾನವ ಕಾಯ್ದೆ
ಆಕೆಗಕ್ಷಯವಿತ್ತೆ ಕೃಷ್ಣಾ ॥
ನಾಕಿಸಖನಾದಿಕೇಶವನೆ ಉಡುಪಿಯ ವಾಸ
ಸಾಕಿ ಸಲಹೈ ಎನ್ನ ಕೃಷ್ಣಾ ॥3॥

ಶ್ರೀ ಕೃಷ್ಣ ಶರ್ಮ ಬೆಟಗೇರಿ ಅವರ 'ಕನಕದಾಸರ ಹಾಡುಗಳು' (ಸಮಾಜ ಪುಸ್ತಕಾಲಯ ಧಾರವಾಡ, 1998), ಎಂ.ಜೆ.ಪ್ರಶಾಂತ ಅವರ 'ಭಕ್ತ ಕನಕದಾಸರ ಪದಗಳು' (ಪಿ.ಸಿ.ಶಾಬಾರಿ ಮಠ ಬುಕ್ ಡಿಪೋ, ಗದಗ) ಮೊದಲಾದ ಪುಸ್ತಕಗಳಲ್ಲಿ ಈ ಕೀರ್ತನೆಯನ್ನು ಅಂತಹ ಮಹತ್ವದ ಸಂದರ್ಭಕ್ಕೆ ಸಂಬಂಧಿಸಿದುದೆಂದು ಉಲ್ಲೇಖಿಸಿದ್ದಾರೆ. ಅಷ್ಟು ಮಾತ್ರವಲ್ಲದೇ, 'ಭಕ್ತಿವಿಜಯ' ಎಂಬ ಸಾಧುಸಂತರ ಕಥೆಗಳು ಎನ್ನುವ ಇನ್ನೊಂದು ಪುಸ್ತಕದಲ್ಲಿ (ಲೇ:ಗಿರಿಜಾ–ಶಂಕರ, ಸಂಕೇಶ್ವರ ಪ್ರಿಂಟರ್ಸ್,ಗದಗ–1996) ಈ ಸಂದರ್ಭವನ್ನು ಉಲ್ಲೇಖಿಸುತ್ತಾ 'ತೊರೆದು

ಜೀವಿಸುವುದೆ ಹರಿ ನಿನ್ನ ಚರಣವನು' ಎನ್ನುವ ಕೀರ್ತನವನ್ನು ಕನಕದಾಸರು ಹಾಡಿದರು ಎಂದು ಉಲ್ಲೇಖೀಸಿದ್ದಾರೆ.

ಅದೇನಿದ್ದರೂ ಬಾಗಿಲನು ತೆರೆದು ಸೇವೆಯನು ಕೊಡು ಹರಿಯೆ ಎನ್ನುವ ಕೀರ್ತನೆಯು ಕನಕದಾಸರ ದೇವಾಲಯ ಪ್ರವೇಶಕ್ಕೆ ಸಂಬಂಧಿಸಿದ ಘಟನೆಗೆ ಹೊಂದಿಕೆಯಾಗುವ ಕೀರ್ತನೆ ಎನ್ನುವುದಕ್ಕೆ ನಮಗೆ ಆಧಾರಗಳಿಲ್ಲ. ಅಂದರೆ ಪಾರಂಪರಿಕವಾಗಿ ಈಗ ಉಲ್ಲೇಖಿಸಿದ ಎರಡು ಕೀರ್ತನೆಗಳನ್ನು ಹಾಗೆಂದು ನಂಬಲಾಗುತ್ತಿದೆ ಎಂದು ಹೇಳಬಹುದೆನಿಸುತ್ತದೆ. ಹಾಗೆಂದರೆ ಈ ಕೀರ್ತನೆಯನ್ನು ಹಾಗೆಂದು ಈಗ ಭಾವಿಸುತ್ತಿರುವುದು ಏಕೆ?

ಉತ್ತರ ಸುಲಭ; ದೇವಾಲಯಕ್ಕೆ ಪ್ರವೇಶ ಮಾಡಬೇಕಾದರೆ ಬಾಗಿಲು ತೆರೆದಿರಬೇಕು ಎಂದು ನಾವು ಭಾವಿಸುತ್ತೇವೆ, ಅಷ್ಟೇ! ಎರಡನೆಯದು ಕನಕದಾಸರ ಕುರಿತು ತೆಗೆದಿರುವ ಸಿನಿಮಾವೊಂದರಲ್ಲಿ ಕನಕದಾಸರಿಗೆ ಉಡುಪಿಯ ಬ್ರಾಹ್ಮಣರು ದೇವಾಲಯ ಪ್ರವೇಶವನ್ನು ನಿರಾಕರಿಸಿದ ಸನ್ನಿವೇಶ ಬಂದಾಗ ಈ ಗೀತೆಯನ್ನು–ಕನಕದಾಸರ ಪಾತ್ರವನ್ನು ಅಭಿನಯಿಸಿದ–ನಟನು ಹಾಡುತ್ತಾನೆ! ಅಲ್ಲಿಂದ ಮೇಲೆ ಕನಕದಾಸರು ಇದೇ ಹಾಡನ್ನು ಉಡುಪಿಯಲ್ಲಿ ಹಾಡಿದರು ಎಂದು ನಾವು ನಂಬುತ್ತಿದ್ದೇವೆ!

ಹೀಗೆ ದೇವಾಲಯ ಪ್ರವೇಶ ಎನ್ನುವ ವಿಷಯವನ್ನು ಸಾಮಾನ್ಯಜ್ಞಾನದ ಹಿನ್ನೆಲೆಯಲ್ಲಿ (Commen sense) ನೋಡಿದಾಗ ದೊರಕುವ ವಿವರಗಳಿಗಿಂತ ಭಿನ್ನವಾಗಿ ಸಂಶೋಧನೆಯ ಹಿನ್ನೆಲೆಯಲ್ಲಿ ನೋಡಿದಾಗ ಮೇಲ್ನೋಟಕ್ಕೆ ನಮಗೆ ಒಂದಕ್ಕೊಂದು ಸಂಬಂಧವಿಲ್ಲದ ಅನೇಕ ಸಂಗತಿಗಳು ಗಮನಸೆಳೆಯುತ್ತವೆ. ಹಾಗಾದುದರಿಂದ ಈ ವಿಷಯವನ್ನು ಪಾರಂಪರಿಕ, ಐತಿಹಾಸಿಕ, ಸಾಮಾಜಿಕ ಮತ್ತು ನನ್ನ ವೈಯಕ್ತಿಕ ಹಿನ್ನೆಲೆಯಲ್ಲಿ ವಿವರಿಸುವ ಪ್ರಯತ್ನವನ್ನು ನಾನು ಮಾಡುತ್ತೇನೆ. ಆದುದರಿಂದ ಆರಂಭದಲ್ಲಿ ನೇರವಾಗಿ ಉಡುಪಿಯ ಮಠಕ್ಕೆ ಸಂಬಂಧಿಸಿದ ಒಂದು ಚಾರಿತ್ರಿಕ ಸಂಗತಿಯನ್ನು ಇಲ್ಲಿ ಉಲ್ಲೇಖಿಸಬಯಸುತ್ತೇನೆ:

ಉಡುಪಿಯ ಕೃಷ್ಣಮಠದ ಗೋಡೆಯಲ್ಲಿರುವ ಪ್ರೌಢದೇವರಾಯನ ಕಾಲದ ಒಂದು ಶಾಸನ ಹೀಗಿದೆ:

ಸ್ವಸ್ತಿ ಶ್ರೀ। ಗಣಾಧಿಪತೆಯೇ ನಮಃ ॥ ಪಾಂತು ವೋ ಜಲದಶ್ಯಾ
ಮಶಾರ್ಙ್ಗ ಜಾನತಕರ್ಕಶಃ ॥ ತ್ರಯಿಲೋಕ್ಯಮಂಟಪಸ್ತಂ
ಭಚತ್ವಾರೋ ಹರಿಬಾಹವಃ ॥ ಸ್ವಸ್ತಿ ॥ ಜಯಾಭ್ಯುದಯ ಸಖ
ವರುಷ 1359 ನೆಯ ವರ್ತಮಾನ॥ ನಳ ಸಂವಚ್ಛರದ ಚಯಿ
ತ್ರ ಶುಭ ಶುಕ್ರವಾರದಲ್ಲು ಶ್ರೀಮನ್ಮಹಾರಾಜಾಧಿರಾಜ ರಾಜಪರ
ಮೇಶ್ವರ ಶ್ರೀವೀರಪ್ರತಾಪ ದೇವರಾಯ ಮಹಾರಾಯರು ವಿಜಯಾ
ನಗರದಲ್ಲು ಸಕಲವರ್ಣಾಶ್ರಮಧರ್ಮಂಗಳನು ಸುಖಸಂಕಥಾ
ವಿನೋದದಿಂ ಸಮಸ್ತ ರಾಜ್ಯವನು ಪರಿಪಾಲಿಸುತ್ತಿಹ ಕಾಲದ
ಲ್ಲು ಆ ದೇವರಾಯ ಮಹಾರಾಯರ ನಿರೂಪದಿಂದ ಸಿಂಗಣ
ದಣಯಕರು ಸಮಸ್ತರಾಜ್ಯವ ಪಾರಿಪತ್ಯದಿಂದ ಪಾಲಿ
ಸುವಲ್ಲಿ ಆ ದೇವರಾಯಮಹಾರಾಯರು ಸಿಂಗಣದಣನಾ
ಯಕರು ನಿರೂಪದಿಂದ ಬಾಕೂರ್ರರಾಜ್ಯವನು ಅಂಣಪ
ನಿರೂಪದಿಂದ ಬಾಕೂರ್ರ ರಾಜ್ಯವನು ಅಂಣಪವೊ

ಡೆಯರು ಪಾಲಿಸುತ್ತಹಾ ಕಾಲದಲ್ಲಿ ಸಿಂಗರಸರು ಬರೆಸಿಕೊ
ಟ್ಟ ಸಿಲಶಾಸನದ ಕ್ರಮವೆಂತೆಂದರೆ॥ ಪ್ರಕು ಆನಂದ
ಸಂವತ್ಸರದಲ್ಲು ಅಂಣಪವೊಡೆಯರು ಶಿವಳಿಯ ಗ್ರಾ
ಮಕ್ಕೆ ದಾಳಿಯ ಮಾಡಿ ನಾಡವಿರಿಂತವಾದಲ್ಲಿ ಬಾರ್ಕೂರ ಹ
ತ್ತು ಕೇರಿಮೊದಲಾದ ಕಟ್ಟಳೆಯವರು ಕೂಡಿ ಶಿವಳ್ಳಿಯ ಗ್ರಾ
ಮ ಸಂತೈಸುವಲ್ಲಿ ಅಲ್ಲಿಯ ದೇವಸ್ತನದ ಆನ್ಯಮನ್ಯಂಗಳು
ತಪ್ಪಿದಲ್ಲಿ ಉಡುಪಿನ ಶ್ರೀಕ್ರುಷ್ಣದೇವರ ಪ್ರತಿಮಾಭಲನವಾದ
ಲ್ಲಿ ಶ್ರೀಕ್ರುಷ್ಣದೇವರ ಕಟ್ಟಳೆಯವರು ಅರಸಿಗೆ ಬಿಂನಾ
ಹ ಮಾಡಿದಲ್ಲಿ ಅಂಣಪ್ಪವೊಡೆಯರ ನಿರೂಪದಿಂ ಸಿಂಗರಸ
ವೊಡೆಯರು ಕೊಟದು ಸಗುರಿಯ ಅಧಿವಾಸದೊಳಗೆ
ಕೊಡುವ ಶಗುರಿಯ ವೈಕದಿಂಬಂಞ ನೋಡಿಯರಾಮ
ಕುಂಜತನನು ಮೂಲವಾಗಿ ದೇವರಿಗೆ ಮೂಲವಾಗಿ ಕೊಟ ಬಾ
ಳು ಕಂಬಳ ಗದೆ ಕೊಯಿಲ್ಲು ಹದಿನಾರು ಅಲ್ಲಿಂದ ತೆಂಕ
ಪಡುವಗಾಳಿ ಗದೆವೊಂದಕೆ ಹತ್ತು ತೆಂಕ
ಮೇಲೆ ಬಾಗಿಲಗದೆವೊಂದಕೆ ಅದ್ದೆ ಯೆರಡಕೆ ಕೊಯಿಲು ಹ
ದಿನಾರು ಆ ತೆಂಕಮೇಲೆ ಹಳಿಗಳು ಯೆರಡು ಆಮೇಲೆ ಮನೆ ಅಲ್ಲಿಂ
ತೆಂಕ ಕಾಡು ಸಹವಾಗಿ ಯೀ ಬಾಳ ಸಿದೆಯರ ವೈಕದಿಂ ಮೊ
ದಲಕುಳದ ಸಿದ್ಧಯದ ಮೊದಲ ತಾರಕೊರಕೆ ವೊಂಬತ್ತು
ಹಣವಿಗೆ ಬಹ ಸಿದ್ಧಯದ ಸರ್ವಮಾನ್ಯವಾಗಿ ಅಕರಂ
ನ್ಯಾಯ ಆನಯಕವಿಲ್ಲದೆ ನಡದು ಬಹುದು ಕಾಟಿ ಹತ್ತು ಹೊ
ಂನ್ನು ಅಕ್ಷರದಲ್ಲು ಹತ್ತು ಹೊಂಣು ಮೇಲಾದ ಹೊಂನ್ನಿಗೆ
ಶಗುರಿಯ ಮಧ್ಯಸ್ತನು ದೇವರಿಗೆ ಆ ರೊಕ್ಕಲಲ್ಲಿ ಯೆರಡು
ಹೊನ್ನನು ಕಾಲಕಾಲಕ್ಕೆ ಅಪ್ಪಿಸಿಕೊಟು ಬಹನು ಉಭ
ಯಂ ಹಂನೆರಡು ಹೊಂನು ಅಕ್ಷರದಲು ಕಾಟೆ ಗದ್ಯಣ ಹಂ
ನೆರಡು ಹೊಂನು ಸಹಿರಂಣ್ಯೋದಕ ದಾನಧಾರಾಪುರ್ವ
ಕವಾಗಿ ಆಚಂದ್ರಾರ್ಕಸ್ತಯಿಯಾಗಿ ಶ್ರೀಕೃಷ್ಣದೇವರ ಅ
ಮ್ರುತಪಡಿ ನಂದಾದೀಪ್ತಿಗೆ ಆಗಿ ನಡದು ಬಹಂತಾಗಿ ಸಿಂ
ಹರಸರು ಧಾರೆಯನೆರೆದು ಕೊಟದು। ಯೀ ಬಾಳ ಜನನಿಗ
ಳು ಮದ್ಯ್ಸಸ್ತನು ಕಾಲಕಾಲಕೆ ನಡೆಸಿ ಬಾಹಿರಿ ಎಂದು ಸಿಂ
ಗರಸರು ತಂಮ ಸ್ವರೂಪನುಡಬಟು ಮೊಡವಟು ಕೊ
ಟ ಧರ್ಮಶಾಸನ ಪಟೆ। ಯೀ ಧರ್ಮವನು ಅಳಿಸಿದವರಿಗೆ
ವಾರಣಾಶಿಯಲು ಸಹಸ್ರ ಕಪಿಲೆ ಸಾವಿರ ಬ್ರಂಹಣರ ತ
ನು ವಧಿಸ್ತ ದೋಷದಲಿ ಹೋಹರು। ಅಂಣಪವೊಡೆಯರ
ವೊಪ್ಪಕರುಣಿಕ ಪುರುಷೋತಮ ಬರಹ ಮುಡಿಲ ನಿಡುಂ
ಬೂರವರ ಗ್ರಾಮದವರ ವೊಪ್ಪು॥ ಸ್ವದತ್ತಂ ಪರದತ್ತಂ ವಾ

ಯೋ ಹರೇತ ವಸುಂಧರ। ಶಷ್ಟರ್ವರುಷಸಹಸ್ರಾಣಿ ವಿಷ್ಟ
ಯಾಂ ಜಾಯತೇ ಕ್ರಿಮಿಃ। ದಾನಪಾಲನಯೋರ್ಮಧ್ಯೇಪಾ
ಲನಂ ಶ್ರಯ ಉಚ್ಯತೇ। ದಾನಾದಾಯ ಸ್ವರ್ಗ್ಗಮಾಪ್ನೋ
ತಿ ಪಾಲನಾದಚ್ಚತಂ ಪದಂ ॥ ಶ್ರೀಶ್ರೀಶ್ರೀ

ಅಂದರೆ ಕ್ರಿ.ಶ.1436 ಮಾರ್ಚ್ 30 ಶುಕ್ರವಾರದಂದು ಈ ಶಾಸನವನ್ನು ಬರೆಯಲಾಯಿತು. ಬಾರಕೂರು ರಾಜ್ಯವನ್ನು ಅಣ್ಣಪ್ಪ ಒಡೆಯರು ಆಳುತ್ತಿರುವಾಗ, ಆನಂದ ಸಂವತ್ಸರದಲ್ಲಿ ಅವರು ಶಿವಳ್ಳಿ ಗ್ರಾಮಕ್ಕೆ ಧಾಳಿಯನ್ನು ಮಾಡಿದ್ದರು. ಆಗ ಅಲ್ಲಿ ಬಹಳ ಅಸ್ತವ್ಯಸ್ತತೆಯುಂಟಾಯಿತು. ಆಗ ಬಾರಕೂರಿನ ಹತ್ತುಕೇರಿ ಮೊದಲಾದವರು ಸೇರಿ, ಶಿವಳ್ಳಿ ಗ್ರಾಮದವರನ್ನು ಸಂತೈಸುತ್ತಾರೆ. ಅಲ್ಲಿನ ಅಸ್ತವ್ಯಸ್ತವನ್ನು ಸರಿಪಡಿಸಿ ಅಲ್ಲಿನ ದೇವಾಲಯಗಳಿಗೆ ದಾನ–ಧರ್ಮಗಳನ್ನು ನೀಡಿದರು. ಈ ಧಾಳಿಯ ಅವಧಿಯಲ್ಲಿ ಉಡುಪಿಯ ದೇವಾಲಯದ ಶ್ರೀಕೃಷ್ಣ ಮೂರ್ತಿಯು 'ಛಲನ'ವಾಯಿತೆಂದು ಶಾಸನದಲ್ಲಿ ತಿಳಿಸಲಾಯಿತು. ಅಂದರೆ ಆಗ ಈ ಮೂರ್ತಿಯನ್ನು ಗರ್ಭಗುಡಿಯಿಂದ ಬೇರೆ ಕಡೆಗೆ ಸ್ಥಳಾಂತರಿಸಲಾಯಿತೆಂದು ನಾವು ತಿಳಿಯಬಹುದು. ಇದನ್ನು ಅರಸರಿಗೆ ತಿಳಿಸಿ ಸರಿಪಡಿಸಲು ಕೋರಿದಾಗ, ಅರಸನು ಹಾಳಾಗಿದ್ದ ಗುಡಿಯನ್ನು ಸರಿಪಡಿಸಿ, ಮತ್ತೆ ಎಂದಿನಂತೆ ಪೂಜಾದಿ ಕಾರ್ಯಗಳು ನೆರವೇರುವಂತೆ ಮಾಡಿದನು ಎಂದರ್ಥ.(ಎಪಿಗ್ರಫಿಯಾ ಇಂಡಿಕಾ,ಸಂ.7. ಶಿಕಾರಿಪುರ ಶಾ.ಸಂ. 36.)

ಬೇರೆ ಏನನ್ನು ನಾವು ಈಗ ಖಚಿತವಾಗಿ ಹೇಳಲಾರೆವಾದರೂ ಕನಕದಾಸನ ಭಕ್ತಿಗೆ ಒಲಿದು ತಿರುಗಿತೆಂದು ಹೇಳಲಾಗುವ ಐತಿಹ್ಯವು ಕ್ರಿ.ಶ.1436ರಲ್ಲಿ ಪುನರ್ ಪ್ರತಿಷ್ಠಾಪಿಸಿದ ಮೂರ್ತಿಗೆ ಸಂಬಂಧಿಸಿದುದು ಎನ್ನುವುದನ್ನು ಮಾತ್ರ ಅಲ್ಲಗಳೆಯಲಾಗುವುದಿಲ್ಲ. ಏಕೆಂದರೆ ಕನಕದಾಸರು ಉಡುಪಿಗೆ ಬರುವುದು ಈ ಘಟನೆಯ ಅನಂತರವಷ್ಟೇ. ಹಾಗೆಯೇ ಈ ಐತಿಹ್ಯಕ್ಕೂ ಈ ಐತಿಹಾಸಿಕ ಘಟನೆಗೂ ಒಂದಲ್ಲ ಒಂದು ಸಂಬಂಧವಿರುವುದನ್ನು ಅಲ್ಲಗಳೆಯಲಾಗದು. ಏಕೆಂದರೆ ಕನಕದಾಸರ ಕಾಲ ಕ್ರಿ.ಶ.1491–1580 ಎಂದು ತಿಳಿದುಬಂದಿದೆ.

ಅದೇನೇ ಇರಲಿ, ಮೇಲಿನ ಎರಡು ನಿದರ್ಶನಗಳಲ್ಲಿ ನಮಗೆ ಮೇಲ್ನೋಟಕ್ಕೆ ಕೇಳಿಬರುವ ಸಂಗತಿಗಳಿಗಿಂತಲೂ ಆಚೆಗಿನ–ಅಂದರೆ ದೇವಾಲಯಕ್ಕೆ ಪ್ರವೇಶ ಬೇಕೇ ಬೇಡವೇ ಎನ್ನುವುದಕ್ಕಿಂತಲೂ–ವಿಶಿಷ್ಟವಾದ ಕೆಲವು ತಥ್ಯಗಳಿವೆ. ಆದರೆ ನನ್ನ ಈ ಪ್ರಬಂಧವು ಕನಕದಾಸರ ಈ ಕೀರ್ತನೆಯ ಬಗೆಗಾಗಲೀ, ಇಂತಹ ಐತಿಹಾಸಿಕ ವಿಚಾರಗಳ ಪರಿಶೀಲನೆಗಾಗಲೀ ಸೀಮಿತವಾದುದಲ್ಲ. ಈ ಹಾಡು ಕನಕದಾಸರ ರಚನೆಯಾಗಿರುವುದರಿಂದ ಇದನ್ನು ಪೀಠಿಕೆಯಾಗಿ ಮಾತ್ರ ಇಲ್ಲಿಯವರೆಗೆ ಹೇಳಿದ್ದೇನೆ. ಈಗ ದೇವಾಲಯ ಪ್ರವೇಶ ಎನ್ನುವ ವಿಷಯಕ್ಕೆ ನೇರವಾಗಿ ಪ್ರವೇಶ ಮಾಡಬಹುದು.

ದೇವಾಲಯ : ಒಂದು ಐತಿಹಾಸಿಕ ಹಿನ್ನೆಲೆ

ಪುರಾತನ ಕಾಲದಲ್ಲಿ ಮನುಷ್ಯನು ಸತ್ತಾಗ ಹೆಣವನ್ನು ಹೂತು, ಅದರ ಮೇಲೆ ದೊಡ್ಡದೊಂದು ಕಲ್ಲನ್ನು ಹಾಸುತ್ತಿದ್ದದ್ದರು. ಇಲ್ಲವೇ ಅಲ್ಲೊಂದು ಹರಳು ಕಲ್ಲುಗಳ ರಾಶಿಯನ್ನು ಸೇರಿಸಿ, ಅದರ ಸುತ್ತ ವೃತ್ತಾಕಾರದಲ್ಲಿ ಕಲ್ಲುಗಳನ್ನು ಇರಿಸುತ್ತಿಸುತ್ತಿದ್ದರು. ಕೆಲವು ಜನರು ಹೆಣವನ್ನು ಮಲಗಿಸಿ ಹೂತು, ಅದರ ಹೃದಯದ ಭಾಗದಲ್ಲಿ ದೊಡ್ಡ

ಕಲ್ಲೊಂದನ್ನು ಇಡುತ್ತಿದ್ದರು. ಅನಂತರ ತಲೆಯ ಕಡೆ ಮತ್ತು ಕಾಲಿನ ಕಡೆ ಇನ್ನೆರಡು ಕಲ್ಲನ್ನು ಇಡುತ್ತಿದ್ದರು. ಹೀಗೆ ಇಡುವ ಮೂರು ಕಲ್ಲುಗಳಲ್ಲಿ ನಡುವಣ ಕಲ್ಲು ಪ್ರಧಾನವಾಯಿತು. ಆಮೇಲೆ ನಿಧಾನವಾಗಿ ಇದುವೇ ಲಿಂಗದ ಆಕಾರವನ್ನು ಪಡೆಯಿತು. ಅಕ್ಕಪಕ್ಕದ ಕಲ್ಲುಗಳು ಕಂಬಗಳ ರೂಪವನ್ನು ಪಡೆದವು. ಈ ಕಂಬಗಳ ಮೇಲೆ ಸೂರನ್ನು ಮಾಡಿದಾಗ ಅವು ಸಮಾಧಿಗಳಾದವು. ನಮ್ಮ ಹಳೆಯ ಗುಡಿಸಲುಗಳು ಈ ಸಮಾಧಿಗಳ ರೂಪದಲ್ಲಿಯೇ ಇವೆ. ಇಂತಹ ಸಮಾಧಿಗಳ ತಳಾಕೃತಿಯು ಚೌಕಾಕಾರವಾಗಿರಬಹುದು ಅಥವ ವೃತ್ತಾಕಾರವಾಗಿಯೂ ಇರಬಹುದು. ಮೇಲ್ಭಾಗವು ಮಾತ್ರ ಚೂಪಾಗಿರುತ್ತಿತ್ತು. ತುಂಬ ಪ್ರಾಚೀನ ಗುಡಿಗಳು ಇದೇ ಮಾದರಿಯಲ್ಲಿವೆ. ಸಮಾಧಿಯಲ್ಲಿನ ಸುತ್ತಲೂ ಕಟ್ಟುವ ಕಲ್ಲಿನ ವೃತ್ತಗಳಿಗೆ ಬದಲಾಗಿ, ಕಲ್ಲುಬೆರೆತ ಮಣ್ಣಿನ ರಚನೆಯನ್ನು ಮಾಡಿದಾಗ ಅದು ಸ್ತೂಪವಾಗುತ್ತದೆ. ಇದನ್ನು ನಾವು ಬೌದ್ಧರ ರಚನೆಗಳೆಂದು ಕರೆಯುತ್ತೇವೆ. ಈ ಸ್ತೂಪಗಳೇ ದೇವಾಲಯಗಳ ಮೇಲೆ ಇರುವ ವಿಮಾನಗಳು. ಹೀಗೆ ದೇವಾಲಯದ ರಚನೆಯಲ್ಲಿ ಸ್ತೂಪಗಳ ಪ್ರಭಾವವಿರುವುದಾದರೂ, ಸ್ತೂಪಗಳಿಗೆ ವೈದಿಕಯುಗದ ಅಗ್ನಿದ್ರಿಯಗಳೇ ಹಿನ್ನೆಲೆಯಾಗಿವೆ. ಅಗ್ನಿದ್ರಿಯವು ಗುಂಭಾಕಾರವಾದ ಒಂದು ರಚನೆಯಾಗಿದ್ದು, ಅದು ಒಳಭಾಗದಲ್ಲಿ ಟೊಳ್ಳಾಗಿರುತ್ತಿತ್ತು. ಅದರ ನಡುವೆ ಎರಡು ನಾಳವಿರುವ ಕುಂಭವಿರುತ್ತಿತ್ತು. ಅದರ ಎರಡೂ ಪಕ್ಕದಲ್ಲಿ ಕಲ್ಲು ಮತ್ತು ಕಟ್ಟೆಗಳಿದ್ದು, ಇವುಗಳ ಮೇಲೆ ಅಗ್ನಿ ಮತ್ತು ಸೋಮ ಎನ್ನುವ ಎರಡು ಹೋಮಗಳನ್ನು ನಡೆಸುತ್ತಿದ್ದರು. ಗುಂಭವನ್ನು ಮರದ ಹಲಗೆಗಳಿಂದ ಮಾಡಿ, ಮೇಲ್ಭಾಗವನ್ನು ಮಣ್ಣಿನಿಂದ ಮುಚ್ಚಿದಾಗ, ಇಡೀ ರಚನೆ ಪ್ರಾಚೀನ ಗುಡಿಸಲನ್ನು ಹೋಲುತ್ತಿತ್ತು. ಇದುವೇ ವೈದಿಕ ಸ್ಥೂಪದ ಕಲ್ಪನೆ. ಆದರೆ ಸ್ತೂಪದ ರಚನೆಯ ಖ್ಯಾತಿಗೆ ಬೌದ್ಧಧರ್ಮ ಪ್ರೇರಣೆಯಾಯಿತು. ಏಕೆಂದರೆ ಬೌದ್ಧಧರ್ಮೀಯನಾದ ಅಶೋಕನು 84000 ಸ್ತೂಪಗಳನ್ನು ರಚಿಸಿದನು. ಇದರಲ್ಲಿ ಬುದ್ಧನ ಅಥವ ಅವನ ಶಿಷ್ಯರ ಪಾರ್ಥಿವ ಶರೀರದ ಅವಶೇಷಗಳನ್ನು ಇಡುವ ಮತ್ತು ಅದನ್ನು ಆರಾಧನೆ ಮಾಡುವ ಪದ್ಧತಿ ಬೆಳೆಯಿತು. ಹೀಗೆ ದೇವಾಲಯದ ರಚನೆಯ ಹಿನ್ನೆಲೆಯಲ್ಲಿ ಸ್ತೂಪಗಳ ಅದರಲ್ಲೂ ಬೌದ್ಧಸ್ತೂಪಗಳ ರಚನೆಯ ಪ್ರೇರಣೆಯಿದೆ. ಸತ್ತವರನ್ನು ಹುಗಿದ ಸ್ಥಳಗಳಲ್ಲಿ ಕಟ್ಟೆ ಕಟ್ಟುವುದು, ಲಿಂಗವನ್ನು ಕೂರಿಸುವುದು, ಮಂಟಪಗಳನ್ನು ರಚಿಸುವುದು ಮೊದಲಾದವು ಇಂದಿಗೂ ಉಳಿದಿರುವ ಪದ್ಧತಿಗಳು. ಹಿರಿಯರ, ಯತಿಗಳ ಸಮಾಧಿ ಸ್ಥಳದಲ್ಲಿ ಬೃಂದಾವನಗಳನ್ನು ನಿರ್ಮಿಸಿ ಪೂಜಿಸುವ ಪದ್ಧತಿಯೂ ನಮಗೆ ಹೊಸದಲ್ಲ. ಹೀಗೆ ಸಮಾಧಿಗಳ ಕಲ್ಪನೆಗೂ ದೇವಾಲಯದ ನಿರ್ಮಾಣಕ್ಕೂ ನೇರ ಸಂಬಂಧವಿದೆ. ಬೇರೆ ಮಾತಿನಲ್ಲಿ ಹೇಳುವುದಾದರೆ ಸಮಾಧಿಗಳೇ ಅತ್ಯಂತ ಪ್ರಾಚೀನ ದೇವಾಲಯಗಳು.

ಬಳ್ಳಾರಿ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಚಿಕ್ಕಬೆಣಗಲ್ ಗ್ರಾಮದ ಬೆಟ್ಟಗಳ ಮೇಲೆ 'ಮರ್ಯರ ಓಣಿ' ಎಂದು ಕರೆಯಲಾಗುವ ಕೆಲವು ಬೃಹತ್ ಶಿಲಾಯುಗದ ರಚನೆಗಳಿವೆ. ಅವುಗಳನ್ನು ಮೌರ್ಯರ ಓಣಿ ಎಂದು ಗ್ರಾಂಥಿಕ ಭಾಷೆಯಲ್ಲಿ ಹೇಳಿ ಅದರ ಪ್ರಾಚೀನತೆಯನ್ನು ವಿರೂಪಗೊಳಿಸುತ್ತಾರೆ. ನಿಜವಾಗಿಯೂ ಅವು ಮರ್ಯರ ಎಂದರೆ ಮರ್ತ್ಯರ ಅಂದರೆ ಸತ್ತವರ ಸಮಾಧಿಗಳು. ಇಡೀ ದಕ್ಷಿಣಭಾರತದಲ್ಲೇ ಅಪರೂಪವಾದ ಈ ಸ್ಥಳವು ಪ್ರಾಚೀನ ಸಮಾಧಿಗೊಂದು ಸ್ಪಷ್ಟ ನಿದರ್ಶನವಾಗಿದೆ. ಈಗ ಅವುಗಳನ್ನು ನೋಡಿದಾಗ ಹಾಳಾದ ಗುಡಿಗಳ ಹಾಗೆಯೇ ಕಂಡುಬರುತ್ತವೆ.

ಪ್ರಾಚೀನ ಗುಡಿಗಳು

ನಮ್ಮಲ್ಲಿ ತುಂಬ ಪ್ರಾಚೀನ ದೇವಾಲಯಗಳು ಗುಹೆಗಳೇ ಆಗಿವೆ. ಹಂಪಿಯಲ್ಲಿ ಸುಗ್ರೀವ ಗುಹೆ ಎಂಬ ಗುಹೆಯಿದೆ. ಅದರಲ್ಲಿ ಕಲ್ಲಿನಿಂದ ಕೆತ್ತಿದ ದೇವರಮೂರ್ತಿಗಳಿವೆ. ಅದರಲ್ಲಿ ಈಗಲೂ ಪೂಜೆ ನಡೆಯುತ್ತಿದೆ. ಇದು ಪ್ರಾಚೀನ ಗುಹಾಂತರ್ದೇವಾಲಯಗಳಿಗೆ ನಮ್ಮಲ್ಲಿಯೇ ಇರುವ ತೀರಾ ಪ್ರಾಚೀನ ನಿದರ್ಶನವಾಗಿದೆ. ಇಂದು ಕರಾವಳಿಯಲ್ಲಿರುವ ಪ್ರಾಚೀನ ದೇವಾಲಯಗಳು ಈ ಗುಹೆಯ ಮಾದರಿಗಳೇ ಆಗಿರುವುದರೊಂದಿಗೆ ಗುಹೆಗಳೇ ಪ್ರಾಚೀನ ದೇವಾಲಯಗಳು ಎನ್ನುವುದನ್ನೂ ಸಾರುತ್ತಿವೆ. ಜುನ್ನಾರ್, ಕನ್ಹೆರಿ(ಕೃಷ್ಣಗಿರಿ), ಅಜಂತ, ಎಲ್ಲೋರ ಇವೆಲ್ಲ ಕ್ರಿಸ್ತಶಕದ ಆರಂಭದ ದೇವಾಲಯಗಳಾಗಿವೆ. ಮುಂಬಾಯಿಗೆ ಸಮೀಪದ ಕನ್ಹೇರಿಯಲ್ಲಿ ಕ್ರಿ.ಶ. 150–159ರ ಕಾಲದ ಎಂಟು ಗುಹೆಗಳಿವೆ. ಅಜಂತಾದ 27 ಗುಹೆಗಳು ಪ್ರಸಿದ್ಧವಾಗಿಯೇ ಇವೆ. ಎಲ್ಲೋರದ ಗುಹಾಂತರ್ದೇವಾಲಯಗಳು ಕ್ರಿ.ಶ.580–750ರಲ್ಲಿ ನಿರ್ಮಾಣವಾಗಿವೆ.

ನಮಗೆ ಗೊತ್ತಿರುವ ಹಾಗೆ ಕ್ರಿ.ಶ.600–630ರಲ್ಲಿ ಪಲ್ಲವರ ರಾಜ ಮಹೇಂದ್ರವರ್ಮನು ಕಲ್ಲುಗಳನ್ನು ಕಡೆದು ಗುಹಾಂತರ್ದೇವಾಲಯಗಳನ್ನು ನಿರ್ಮಿಸಿದವರಲ್ಲಿ ಮೊದಲಿಗನಾಗಿದ್ದಾನೆ. ದಕ್ಷಿಣ ಅರ್ಕಾಡು ಪ್ರದೇಶದಲ್ಲಿ ಇವನಿಗೆ ಸಂಬಂಧಿಸಿದ ಶಾಸನವೊಂದು ದೊರೆಯುತ್ತದೆ. ಅದರಲ್ಲಿ ಹೀಗೆ ಹೇಳಲಾಗಿದೆ.:

ಏತದನಿಷ್ಟಕಮದ್ರುಮತಲೋ
ಹಮಸುಭಂ ವಿಚಿತ್ರಚಿತ್ತೇನ
ನಿರ್ಮಾಪಿತನೃಪೇಣ ಬ್ರಹ್ಮೇ
ಶ್ವರವಿಷ್ಣುಲಕ್ಷ್ಮಿತಾಯತನಂ॥

ಅಂದರೆ ವಿಚಿತ್ರಚಿತ್ತನಾದ ಈ ರಾಜನು ಇಟ್ಟಿಗೆ,ಮರ, ಗಾರೆ, ಲೋಹ ಯಾವುದನ್ನೂ ಬಳಸದೆ ಬ್ರಹ್ಮ, ವಿಷ್ಣು ಮತ್ತು ಶಿವರಿಗೆ ದೇವಾಲಯಗಳನ್ನು ಕಟ್ಟಿದ ಎಂದರ್ಥ.

ರಥಗಳು

ದೇವಾಲಯಗಳನ್ನು ರಥಗಳೆಂದು ಕರೆಯುವ ಕ್ರಮವೂ ಇದೆ. ಮಾವುಲ್ಲಪುರಂ (ಅಥವ ಮಹಾಬಲಿಪುರಂ) ಶಿಲಾರಥಗಳೂ ಈ ಮಾದರಿಯ ಪ್ರಸಿದ್ಧ ದೇವಾಲಯಗಳು. ಇದನ್ನು ದೇವಮಯರಥ ಅಂದರೆ ದೇವರು ವಾಸಿಸುವ ಕಟ್ಟಡ ಎಂದು ಕರೆಯಲಾಗುತ್ತದೆ. ಇಲ್ಲಿರುವ ಕಟ್ಟಡಗಳೂ ಸುಂದರವಾಗಿದ್ದು ಒಂದೇ ಕೋಣೆಯನ್ನೊಳಗೊಂಡಿದೆ. ಗರ್ಭ ಗೃಹದಲ್ಲಿರುವ ಶಿಲ್ಪಿಯು ಕಡೆದ ಮೂರ್ತಿ ಮಾತ್ರವೇ ಇದೆ. ಪ್ರತಿಮೆ ಇರುವ ಕೋಣೆಗೆ ದ್ವಾರವಿದ್ದು, ಅದನ್ನು ಮುಚ್ಚುವ ವ್ಯವಸ್ಥೆ ಇಲ್ಲ. ಭಕ್ತರು ನೇರವಾಗಿ ಕೊಣೆಗೆ ಹೋಗಿ ಬರಬಹುದು. ಚೌಕಾಕಾರದ ತಳವಿನ್ಯಾಸ, ನಾಲ್ಕು ಮೂಲೆಗೂ ಇಳಿಬಿಟ್ಟಿರುವ ಸೂರು, ಇದು ಸ್ತೂಪದ ಮುಂದುವರೆದ ರೂಪವಾಗಿದೆ. ಸ್ತೂಪದ ನಾಲ್ಕೂ ತೋರಣಗಳು ಇಲ್ಲಿ ನಾಲ್ಕು ದ್ವಾರಗಳಾಗಿವೆ. ದೇವಾಲಯದ ಕಲ್ಪನೆಯಲ್ಲಿ ಈ ರಥಗಳು ಒಂದು ಹೆಜ್ಜೆ ಮುಂದುವರೆದಿವೆ. ಈ ದೇವಾಲಯಗಳು ಸಣ್ಣವಿದ್ದು ಒಂದು ಸಲಕ್ಕೆ ಒಬ್ಬನು ಮಾತ್ರ ಅರ್ಚನೆಗೆ ಹೋಗಬಹುದಾಗಿದೆ. ಅಂದರೆ ದೇವಾಲಯಗಳ ಮುಂದೆ ಜನ ಸಾಲುಗಟ್ಟಿ ನಿಲ್ಲುವ ಕ್ರಮ ಇನ್ನೂ ಬೆಳೆದಿರಲಿಲ್ಲವೆಂದು ಇದರರ್ಥವಾಗಿದೆ. ಹಾಗೆ ನೋಡಿದರೆ

ಶಾಸ್ತ್ರಗಳ ಪ್ರಕಾರ ಗರ್ಭಗುಡಿಯೇ ನಿಜವಾದ ದೇವಾಲಯವಾಗಿದೆ.

ಪ್ರಾಚೀನ ದೇವಾಲಯಗಳು

ದೇವಾಲಯಗಳೆಂದಾಕ್ಷಣ ನಮ್ಮ ಮುಂದೆ ಈಗ ಬರುವ ಕಲ್ಪನೆಗಳೇ ಬೇರೆ. ಆದರೆ ಪ್ರಾಚೀನರ ಕಲ್ಪನೆಗಳು ಹಾಗಿರಲಿಲ್ಲ. ಪ್ರಾಚೀನರಿಗೆ ದೇವಾಲಯಗಳೆಂದರೆ ಪ್ರಾರ್ಥನೆಗೆ ಬೇಕಾದ ತಾತ್ಕಾಲಿಕ ತಾಣಗಳೆಂದು ಮಾತ್ರವೇ ಅರ್ಥ. ಸಂದರ್ಭಕ್ಕೆ ಬೇಕಾದಾಗ ಗುಡಿಯೊಂದನ್ನು ಕಟ್ಟುವುದು, ಬೇಡವೆಂದಾಗ ಕೆಡಹುವುದೇ ಆಗಿನ ಪದ್ಧತಿಯಾಗಿತ್ತು. 'ಮಂಟಪ' ಎಂದು ಶಾಸ್ತ್ರಗಳು ಇದನ್ನೇ ಹೇಳುತ್ತವೆ. ಅದರಂತೆ ಪೂಜೆಗಾಗಿ ನೆರೆಯುವ ಭಕ್ತರಿಗಾಗಿ ಕಟ್ಟುವುದೇ ಮಂಟಪವಾಗಿದೆ.

ದೇವಾಲಗಳಲ್ಲಿ ಆತ್ಮಾರ್ಥ ಮತ್ತು ಪರಾರ್ಥವೆಂದು ಎರಡು ವಿಧ. ತನಗಾಗಿ ಮತ್ತು ತನ್ನ ಮನೆಯವರಿಗಾಗಿ ಕಟ್ಟುವ ದೇವಾಲಯಗಳು ಆತ್ಮಾರ್ಥವಾದವು. ಸಾರ್ವಜನಿಕರಿಗಾಗಿ ಕಟ್ಟಿದ ದೇವಾಲಯಗಳು ಪರಾರ್ಥ ದೇವಾಲಯಗಳು. ಆತ್ಮಾರ್ಥ ದೇವಾಲಯಗಳಲ್ಲಿ ಪೂಜೆ ನಡೆಸುವವರು ಮತ್ತು ಪಾಲ್ಗೊಳ್ಳುವವರು ಮನೆಯವರೇ. ಪರಾರ್ಥ ದೇವಾಲಯಗಳಲ್ಲಿ ಪೂಜಾರಿಗಳು ಪೂಜೆ ನಡೆಸುವವರಾದರೆ, ಪಾಲ್ಗೊಳ್ಳುವವರು ಸಾರ್ವಜನಿಕರಾಗಿರುತ್ತಾರೆ. ಪರಾರ್ಥದ ಗರ್ಭಗುಡಿಯಲ್ಲಿ ಪೂಜೆ ನಡೆಸುವವರಿಗೆ ಮಾತ್ರವೇ ಪ್ರವೇಶ. ಮಂಟಪದಲ್ಲಿ ಸಾರ್ವಜನಿಕರು ಪಾಲ್ಗೊಳ್ಳುತ್ತಾರೆ. ಇಲ್ಲಿ ನೆರೆಯುವವರ ಸಂಖ್ಯೆ ಹೆಚ್ಚಾದಂತೆ ಮಂಟಪವೂ ದೊಡ್ಡದಾಗುತ್ತಾ ಬಂತು. ಆದರೆ ದೇವಾಲಯಗಳೂ ಸ್ಥಿರವಾದುವಲ್ಲ, ಮಂಟಪಗಳೂ ಸ್ಥಿರವಾದವುಗಳಲ್ಲ–ಎಲ್ಲವೂ ತಾತ್ಕಾಲಿಕವಾದವೇ.

ಆಶ್ಚರ್ಯವಾದ ಸಂಗತಿಯೊಂದಿದೆ; ಅದೆಂದರೆ ಹೀಗೆ ತಾತ್ಕಾಲಿಕವಾದ ದೇವಾಲಯಗಳ ಮಂಟಪಗಳನ್ನು ಸ್ಥಿರವಾದ ಕಟ್ಟಡಗಳಾಗಿ, ಮಂಟಪಗಳಾಗಿ ಪರಿವರ್ತನೆ ಮಾಡಿದವರು ಮೂಲತಃ ಭಾರತೀಯರೇ ಅಲ್ಲ!. ಹಾಗೆ ಸ್ಥಿರವಾದ ದೇವಾಲಯದ ಕಲ್ಪನೆಯನ್ನು ತಂದವರು ಗ್ರೀಕರು. ಕ್ರಿ.ಪೂ ಎರಡನೆಯ ಶತಮಾನದಲ್ಲಿ ತಕ್ಷಶಿಲೆಯಲ್ಲಿ ವಾಸಿಸುತ್ತಿದ್ದ ಇಂಡೋಗ್ರೀಕ್ ರಾಯಭಾರಿಯಾಗಿದ್ದ ಹೆಲಿಯೋಡೋರಸ್ ಎನ್ನುವವನು ಮಹಾ ವಿಷ್ಣಭಕ್ತನಾಗಿದ್ದು, ಅವನು 'ದೇವದೇವನಾದ ವಾಸುದೇವನಿಗೆ' ಶಿಲಾಸ್ಥಂಭವನ್ನು ನೆಟ್ಟ. ಮಧ್ಯಪ್ರದೇಶದ ಗ್ವಾಲಿಯರ್‌ನ ಭಿಲ್ವಾ ಬಳಿ ಗರುಡಧ್ವಜವೊಂದು ದೊರೆತಿದ್ದು ಅದರಲ್ಲಿ ಶಾಸನವೂ ಇದೆ. ಇದು ಇಲ್ಲಿ ದೇವಾಲಯವಿದ್ದುದರ ಕುರುಹಾಗಿದೆ.ಇದೇ ಕಾಲಕ್ಕೆ ಸೇರಿದ ಶಾಸನವೊಂದರಲ್ಲಿ ಭಗವಾನನಿಗಾಗಿ ಪ್ರಸಾದವೊಂದನ್ನು ಕಟ್ಟಿದ ಉಲ್ಲೇಖವಿದೆ. ರಾಜೂವಲನೆಂಬ ಶಕಕ್ಷತ್ರಪನು ಐವರು ವೃಷ್ಣಿವಂಶದ ವೀರರ ವಿಗ್ರಹಗಳನ್ನೊಳಗೊಂಡ ಗುಡಿಯೊಂದನ್ನು ಕಟ್ಟಿಸಿರುವುದಾಗಿ ಹೇಳುತ್ತಾನೆ. ವಾಸುದೇವ, ಸಂಕರ್ಷಣ, ಅನಿರುದ್ಧ, ಪ್ರದ್ಯುಮ್ನ ಮತ್ತು ಸಾಂಬರೇ ಈ ವೃಷ್ಣಿಗಳಾಗಿದ್ದಾರೆ. ರಾಜಸ್ಥಾನದ ಚಿತ್ತೂರಿನ ಗೋಸುಂದಿಯಲ್ಲಿ(ಕ್ರಿ.ಶ. ಎರಡನೆಯ) ದೊರೆತ ಶಾಸನದಲ್ಲಿ ಶಿಲಾ–ಪ್ರಾಕಾರ–ನಾರಾಯಣವಾಟಕೆಯ ಉಲ್ಲೇಖವಿದ್ದು, ಅದು ಅನಿಹತಾಭ್ಯಾಂ ವಾಸುದೇವ ಸಂಕರ್ಷಣಾಭ್ಯಾಂ ಇವರಿಗೆ ಸಂಬಂಧಿಸಿದುದು ಎಂದು ಹೇಳಲಾಗಿದೆ. ಅಂದರೆ ಈಗಿನ ಸಾರ್ವಜನಿಕ ದೇವಾಲಯಗಳ, ಸ್ಥಿರವಾದ ವೈಭವಯುತವಾದ ದೇವಾಲಯಗಳ ಕಲ್ಪನೆಯೇ ಮೂಲತಃ ಭಾರತೀಯರದಲ್ಲ ಎಂದಾಯಿತಲ್ಲ?

ಮಧ್ಯಕಾಲದಲ್ಲಿ ಗುಡಿಗಳು

ದೇವಾಲಯಗಳಿಗೆ ಇದ್ದಕ್ಕಿದ್ದಂತೆ ಪ್ರಸಿದ್ಧಿ ಬಂದಿರುವುದೇ ಮಧ್ಯಯುಗದಲ್ಲಿ ಎನ್ನುವುದು ಇನ್ನೊಂದು ಗಮನಾರ್ಹ ಅಂಶವಾಗಿದೆ. ಪುರಾಣಗಳು ಕಾವ್ಯಗಳು ದೇವಾಲಯಗಳ ಕುರಿತು ಹಾಡಿಹೊಗಳುವುದಕ್ಕೆ ಈ ಕಾಲದಲ್ಲಿ ಪ್ರಾರಂಭ ಮಾಡುತ್ತವೆ. ಅಗ್ನಿಪುರಾಣದ ಪ್ರಕಾರ ದೇವಾಲಯಗಳನ್ನು ಕಟ್ಟಿಸುವ ಬಯಕೆ ಬಂತೆಂದರೆ ಸಾಕು–ಅವರ ಪಾಪ ಪರಿಹಾರವಾಗುತ್ತದೆಯಂತೆ. ದೇವಾಲಯಕ್ಕೆ ಒಂದು ಇಟ್ಟಿಗೆಯನ್ನು ಇಟ್ಟರೆ ಅದು ಅವನಿಗೆ ಸಾಯುವಾಗ ಒಂದು ಯಜ್ಞವನ್ನು ಮಾಡಿದ ಪುಣ್ಯವನ್ನು ಕೊಡುತ್ತದೆಯಂತೆ –ಹಾಗೆಂದು ಹಯಶೀರ್ಷ ಸಂಹಿತೆ ಹೇಳುತ್ತದೆ. ಯಾವುದಾದರೊಂದು ಮಗು ಆಟದ ನೆಪದಲ್ಲಿ ಮರಳಿನಲ್ಲಿ ಗುಡಿ ಕಟ್ಟಿದರೂ ಆ ಮಗುವಿಗೆ ಸ್ವರ್ಗ ಲಭಿಸುತ್ತದೆ ಎಂದು ವಿಷ್ಣು ರಹಸ್ಯವು ತಿಳಿಸುತ್ತದೆ. ಹೀಗೆ ಇಲ್ಲಿಂದ ದೇವಾಲಯಗಳಿಗೆ ಮಹತ್ವವೂ ಪ್ರಸಿದ್ಧಿಯೂ ದೊರೆಯುತ್ತದೆ. ಶ್ರೀಮಂತರು, ಚಕ್ರವರ್ತಿಗಳು, ದಂಡನಾಯಕರು ದೇವಾಲಯಗಳನ್ನು ಕಟ್ಟಿಸುತ್ತಾರೆ. ದೇವಾಲಯುಗಳನ್ನು ಕಟ್ಟಿಸುವುದು, ಅಂತಹ ದೇವಾಲಯುಗಳಿಗೆ ಪೂಜಾರಿಗಳನ್ನು ನೇಮಕ ಮಾಡುವುದು, ದೇವಾಲಯಗಳ ಸಂದರ್ಶನಕ್ಕಾಗಿ ಹೋಗುವುದು, ಅಲ್ಲಿ ಪ್ರಾರ್ಥನೆ ಮಾಡುವುದು, ಯಾರು ಪೂಜೆ ಮಾಡಬಹುದು, ಮಾಡಬಾರದು ಎನ್ನುವುದು ಮೊದಲಾದವುಗಳೆಲ್ಲ ಈ ಕಾಲದಿಂದಲೇ ಆರಂಭವಾಗುತ್ತವೆ. ನಮ್ಮ ಕನಕದಾಸರು ಈ ಕಾಲದವರೆಂಬುದನ್ನು ಇಲ್ಲಿ ನೆನಪಿಸಿಕೊಳ್ಳೋಣ. ಹೀಗಾಗಿ ಮಧ್ಯಕಾಲೀನ ವಿಷಯುಗಳಿಗೆ ಸಂಬಂಧಿಸಿ ಈಗ ನಾವು ನಿರ್ದಿಷ್ಟವಾಗಿ ಕರ್ನಾಟಕಕ್ಕೆ ಮಾತ್ರ ಸೀಮಿತಗೊಳಿಸಿರುವುದರಿಂದ, ಈ ವಿವರಗಳು ಇನ್ನಷ್ಟು ಸ್ಪಷ್ಟವಾಗಬಲ್ಲವು. ಹಾಗಾದುದರಿಂದ ನಿರ್ದಿಷ್ಟವಾಗಿ ದೇವಾಲಯಕ್ಕೆ ಸಂಬಂಧಿಸಿದಂತೆ ಕರ್ನಾಟಕವನ್ನೇ ಲಕ್ಷಿಸಿ ಇನ್ನು ಮುಂದೆ ಈ ವಿಷಯವನ್ನು ಇನ್ನಷ್ಟು ವಿಸ್ತರಿಸೋಣ.

ದೇವಾಲಯಗಳು – ಕರ್ನಾಟಕದ ಸಂದರ್ಭ

ದೇವಾಲಯಗಳ ಚರಿತ್ರೆ ಏನೇ ಇರಲಿ ಕರ್ನಾಟಕದಲ್ಲಿ ತಾಳಗುಂದದ ಪ್ರಣವೇಶ್ವರ ದೇವಾಲಯಕ್ಕಿಂತ ಹಿಂದಿನ ದೇವಾಲಯಗಳು ಇದ್ದ ಕುರಿತು ದಾಖಲೆಗಳಿಲ್ಲ. ಅದರ ಕಾಲ ಕ್ರಿ.ಶ.450 ಎಂದು ತಿಳಿಯಲಾಗಿದೆ. ಇದು ಶಾತಕರ್ಣಿಗಳ ಕಾಲದ್ದು. ಅನಂತರ ಧರ್ಮವೊಳಲಿನ ಅಜ್ಜಮಯ್ಯ ಕಟ್ಟಿಸಿದ ಅಜ್ಜಮೇಶ್ವರ ಶಿವದೇವಾಲಯ (ಕ್ರಿ.ಶ.1124), ಆಯಿಕಜೀಯ ಕಟ್ಟಿಸಿದ ದೇವಾಲಯ (ಕ್ರಿ.ಶ.1141), ಬಸವಾಚಾರಿ ಕಟ್ಟಿಸಿದ ದೇವಾಲಯ (ಕ್ರಿ.ಶ.1138), ಹೆಬ್ಬೆಯ ನಾಯಕ ಕಟ್ಟಿಸಿದ ಹೆಬ್ಬೇಶ್ವರ ದೇವಾಲಯ (ಕ್ರಿ.ಶ.1186) ಮೊದಲಾದವು ಪ್ರಾಚೀನ ದೇವಾಲಯಗಳು. ಇವುಗಳ ಉಲ್ಲೇಖ ಶಾಸನಗಳಲ್ಲಿದೆ. ಅಷ್ಟು ಮಾತ್ರವಲ್ಲದೇ, ವಿಜಯಾದಿತ್ಯ ಸತ್ಯಾಶ್ರಯನು ಕಟ್ಟಿಸಿದ ವಿಜಯಾದಿತ್ಯ ಭಟ್ಟಾರಕ (ಕ್ರಿ.ಶ.754) ದೇವಾಲಯ, ಲೋಕ ಮಹಾದೇವಿಯು ಕಟ್ಟಿಸಿದ ಲೋಕೇಶ್ವರ ಭಟ್ಟಾರ ದೇವಸ್ಥಾನ (ಕ್ರಿ.ಶ.754), ಕೋಟೆ ಗಾವುಂಡ ಮಾಡಿಸಿದ ಕೋಟೇಶ್ವರ ದೇವಸ್ಥಾನ (ಕ್ರಿ.ಶ.1073), ಸಿಡಿಲಂಕರಾಮ ಸ್ಥಾಪಿಸಿದ ಸಿಡಿಲೇಶ್ವರ ದೇವಾಲಯ (ಕ್ರಿ.ಶ.967), ಒದ್ದಿರಾಜನು ಕಟ್ಟಿಸಿದ ಒದ್ದೇಶ್ವರ ದೇವಾಲಯ (ಕ್ರಿ.ಶ.1136) ಮೊದಲಾದವು ಪ್ರಮುಖ ದೇವಾಲಯಗಳು. ಇಲ್ಲಿ ವ್ಯಕ್ತಿಗಳು ತಮ್ಮ ಹೆಸರಿನೊಂದಿಗೆ ಈಶ್ವರನನ್ನು ಸೇರಿಸಿ ಒಂದು ದೇವಾಲಯವನ್ನು

ಕಟ್ಟಿಸಿರುವುದು ಗಮನಾರ್ಹವಾದುದು. ದೇವರ ಹೆಸರು ತನ್ನ ಹೆಸರಿನೊಂದಿಗೆ ಸೇರಿ ತಾನೂ ದೇವರಾಗುತ್ತಿದ್ದೇನೆ ಎನ್ನುವ ನಂಬಿಕೆಯೇ ಇದಕ್ಕೆ ಕಾರಣವಾಗಿತ್ತು. ಇದರೊಂದಿಗೆ ಧನವಂತರು ದೇವಾಲಯ ಕಟ್ಟುವುದಕ್ಕೆ ಯಾವ ನಿರ್ಬಂಧಗಳೂ ಇರಲಿಲ್ಲ ಎನ್ನುವುದನ್ನು ಗಮನಿಸಬೇಕು. ಕುಂಭಾರ ಜಾತಿಯವನಾದ ಬೊಮ್ಮಣ್ಣನು ತಲೆಯನ್ನು ತೊಳೆಯದ, ಅನ್ನವನ್ನು ಉಣ್ಣದ ಪ್ರತಿಜ್ಞೆಯನ್ನು ಮಾಡಿ ಕುಂಭೇಶ್ವರ ದೇವಾಲಯವನ್ನು(ಕ್ರಿ.ಶ.1073) ಕಟ್ಟಿಸುತ್ತಾನೆ. ಲಿಂಗಶಿವಜೀಯ ಎಂಬುವನು ಭಿಕ್ಷಾಟನೆ ಮಾಡಿ, ಇಟ್ಟಿಗೆಯ ಜಟಿಂಗ ರಾಮೇಶ್ವರ ದೇವಾಲಯವನ್ನು ಶಿಲೆಯ ದೇವಾಲಯವಾಗಿ ಪರಿವರ್ತಿಸಿದನು(ಕ್ರಿ.ಶ.962). ಅದೇ ರೀತಿ ಶ್ರೀಮಂತರ ಮನೆಗಳಲ್ಲಿ ಅಡಿಗೆ ಮಾಡುತ್ತಿದ್ದವರು (ಕ್ರಿ.ಶ.1095), ದೇವಾಲಯದ ಪೂಜಾರಿಗಳು (ಕ್ರಿ.ಶ.1095) ಮೊದಲಾದವರು ದೇವಾಲಯ ಕಟ್ಟಿಸಿದರು. ಇದರಿಂದ ಕೆಳಜಾತಿಯವರು, ಬಡವರು ಮೊದಲಾದವರು ಕೂಡ ಮಧ್ಯಕಾಲದಲ್ಲಿ ದೇವಾಲಯಗಳನ್ನು ಕಟ್ಟುತ್ತಿದ್ದರೆಂಬುದು ಸ್ಪಷ್ಟ. ಕೆಳಜಾತಿಯವರು, ಬಡವರು ದೇವಾಲಯಗಳನ್ನು ಕಟ್ಟುತ್ತಿದ್ದರೆಂದ ಮೇಲೆ ಅಂತಹ ದೇವಲಯಗಳಿಗೆ ಮುಕ್ತ ಪ್ರವೇಶವೂ ಇರುತ್ತಿತ್ತು ಎಂದು ಅರ್ಥ ತಾನೆ?

ದೇವಾಲಯಗಳಲ್ಲಿ ಯಾರಾರಿಗೆ? ಎಲ್ಲೆಲ್ಲಿಗೆ ಪ್ರವೇಶ?

ಈಗ ನಾವು ದೇವಾಲಯ ಪ್ರವೇಶ ಎನ್ನುವ ವಿಷಯವನ್ನು ಚಾರಿತ್ರಿಕವಾಗಿ ಅಧ್ಯಯನ ಮಾಡುವ ಸಂದರ್ಭದಲ್ಲಿ ಬಂದು ನಿಂತಿದ್ದೇವೆ. ಈ ವಿಷಯವನ್ನು ನೇರವಾಗಿ ಎತ್ತಿಕೊಳ್ಳುವ ಮೊದಲು ಅದಕ್ಕೆ ಹಿನ್ನೆಲೆಯಾಗಿ ಕೆಲವು ವಿವರಗಳನ್ನು ಗಮನಿಸಬೇಕು. ಮೊದಲನೆಯದಾಗಿ ಕ್ರಿ.ಶ.10ನೆಯ ಶತಮಾನಕ್ಕಿಂತ ಮೊದಲು ದೇವಲಯಗಳಲ್ಲಿ 'ಅಂಗಭೋಗ' ಮಾತ್ರವೇ ನಡೆಯುತ್ತಿತ್ತು. ಅಂದರೆ ದೇವಾಲಯದ ಗರ್ಭಗುಡಿಯಲ್ಲಿ ದೇವರ ಮೂರ್ತಿಯ ಅಲಂಕಾರ, ಪೂಜೆ, ಮಂತ್ರಪಠಣ ಇತ್ಯಾದಿ ಮಾತ್ರವೇ ಆಗ ಪ್ರಚಲಿತದಲ್ಲಿತ್ತು. ಏಕೆಂದರೆ ಆಗ ದೇವಾಲಯಗಳ ರಚನೆಗಳು (ಆಗಲೇ ಹೇಳಿದಂತೆ) ತುಂಬ ಸರಳವಾಗಿದ್ದವು. ಕೇವಲ ಗರ್ಭಗುಡಿಗಳಷ್ಟೇ ಇರುತ್ತಿತ್ತು. ಹಾಗೂ ಅದನ್ನೇ ದೇವಾಲಯ ಎಂದು ತಿಳಿಯಲಾಗುತ್ತಿತ್ತು. ಗರ್ಭಗುಡಿಯಲ್ಲಿ ಪೂಜಾರಿಗಷ್ಟೇ ಕೆಲಸವಿರುತ್ತಿದ್ದರಿಂದ – ಬೇರೆಯವರಿಗೆ ಅಲ್ಲಿ ಪ್ರವೇಶ ಮಾಡುವ ಸಾಧ್ಯತೆಯಾಗಲೀ, ಅವಶ್ಯಕತೆಯಾಗಲೀ ಇರುತ್ತಿರಲಿಲ್ಲ. ಸಾರ್ವಜನಿಕರು ಹೊರಗಿನಿಂದಲೇ ದೇವರ ದರ್ಶನ ಮಾಡುತ್ತಿದ್ದರು. ಆದುದರಿಂದ ಅಂಗಭೋಗ ಮಾತ್ರವೇ ಇರುತ್ತಿದ್ದ ಕಾಲದಲ್ಲಿ ಸಾರ್ವಜನಿಕರು ದೇವಾಲಯವನ್ನು ಪ್ರವೇಶ ಮಾಡುವ ಬಿಡುವ ಪ್ರಶ್ನೆಯೇ ಇರುತ್ತಿರಲಿಲ್ಲ. ಪೂಜಾರಿಯ ಹೊರತು ಸಾರ್ವಜನಿಕರಾರೂ ದೇವಾಲಯಗಳಿಗೆ ಪ್ರವೇಶಿಸುವಂತಿಲ್ಲ. ಅದು ಈಗಲೂ ಹಳ್ಳಿಗಳಲ್ಲಿರುವ ಸಣ್ಣ ಗುಡಿಗಳಲ್ಲಿರುವ ಪದ್ಧತಿಯಾಗಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ನೆನಪು ಮಾಡಬಹುದು.

ಅಂಗಭೋಗಕ್ಕಿಂತ ಭಿನ್ನವಾದ, ರಂಗಭೋಗ ಎನ್ನುವ ಸಂಪ್ರದಾಯವು ಕ್ರಿ.ಶ. 10ನೆಯ ಶತಮಾನದ ಅನಂತರ ವಿಶೇಷವಾಗಿ ಬೆಳೆದು ಬಂದಿರುವುದನ್ನು ನಾವು ಗಮನಿಸಬಹುದು. ದೇವಾಲಯಗಳು ಗರ್ಭಗುಡಿಯಿಂದ ವಿಸ್ತರಿಸಿ ಸುಖನಾಸಿ, ನವರಂಗ, ಈ ನವರಂಗಗಳಿಗೆ ಮತ್ತೆ ಏಕದ್ವಾರ, ದ್ವಿದ್ವಾರ, ತ್ರಿದ್ವಾರ, ಗೋಪುರ, ಪ್ರಾಕಾರ, ಗರುಡಗಂಭ, ಧ್ವಜಸ್ಥಂಭ ಹೀಗೆ ಬೆಳೆಯುತ್ತಾ ಬಂದಂತೆ ರಂಗಭೋಗ ಎನ್ನುವ ಪದ್ಧತಿ ಬೆಳೆಯುತ್ತಾ ಬಂದಿತು.

ರಂಗಭೋಗವೆಂದರೆ ದೇವತಾ ಮೂರ್ತಿಯ ಮುಂದೆ ಸೇವಾರ್ಥವಾಗಿ ನಡೆಯುವ ಗೀತ ಮತ್ತು ನರ್ತನಗಳಾಗಿವೆ. ದೇವಾಲಯಗಳು ಹೀಗೆ ಬೆಳೆಯುತ್ತಾ ಹೋದಂತೆ ಬೃಹದಾಕಾರವಾಗಿ ಗರ್ಭಗುಡಿಯು ಸಾರ್ವಜನಿಕರಿಂದ ದೂರವಾಗತೊಡಗಿತು. ಈ ಲೇಖನದ ವಿಷಯಕ್ಕೆ ಸಂಬಂಧಿಸಿದಂತೆ ರಂಗಭೋಗ–ಅಂದರೆ ದೇವಾಲಯಕ್ಕೆ ಸಂಬಂಧಿಸಿದ–ನವರಂಗದಿಂದ ಸಮಸ್ಯೆ ಬಿಗಡಾಯಿಸುತ್ತದೆ ಎಂದೆನಿಸುತ್ತದೆ. ಆ ವಿಷಯವನ್ನು ನಾನು ಇನ್ನಷ್ಟು ವಿಸ್ತರಿಸುವುದರಿಂದ ನವರಂಗದ ಕಲ್ಪನೆ ಬಂದ ಬಳಿಕ ದೇವಾಲಯುದೊಂದಿಗೆ ಕೆಳಜಾತಿಯುವರ ಹಾಗೂ ಸಾರ್ವಜನಿಕರ ಸಂಬಂಧ ಹೇಗಿತ್ತೆಂಬುದನ್ನು ಈಗ ನಿರ್ದಿಷ್ಟವಾಗಿ ಚರ್ಚೆಗೆ ಎತ್ತಿಕೊಳ್ಳೋಣ:

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ಶಾಸನವೊಂದು ಹೀಗೆ ಸಾರುತ್ತದೆ

ಸ್ವಸ್ತಿಶ್ರೀ ಶ್ರೀಮದ್ರಾಜಗುರು ವಾಮಶಕ್ತಿ ದೇವರುಂ ತಚ್ಛಿಶ್ಯ ಜ್ಞಾನಶಕ್ತಿ ದೇವರುಂ ಪ್ಲವ ಸಂವತ್ಸರ ಮಾರ್ಗಶಿರ ಬಂ ಸೋ। ಪಾತ್ರದ... ಮಲ್ಲವೆಗವಾ ಮದ್ದಳೆ ಮಾದಿಗಂ ದೇವುತ ವೃತ್ತಿಯಾಗಿ ಸ್ಥಳ ವೃತ್ತಿ ಹಕ್ಕಳೆಯೊಲ್ಕೊಟ್ಟ ಗದ್ದೆ ಮತ್ತೆರಡು ರೊಕ್ಕ ಪುರದೊಳ್ಮನೆ ಮೂರಕವಾ ಚಂದ್ರಾರ್ಕನ್ನಡವರ್

ಈ ಶಾಸನದ ಕಾಲ ಕ್ರಿ.ಶ.12ನೇ ಶತಮಾನ. ದೇವಾಲಯದಲ್ಲಿ ರಂಗಭೋಗದ ಕಲ್ಪನೆ ಸದೃಢವಾಗಿದ್ದ ಕಾಲವಿದು. ದೇವಾಲಯದಲ್ಲಿ ರಂಗಭೋಗ ನಡೆಯುವಾಗ ಮದ್ದಳೆ ಬಾರಿಸುತ್ತದ್ದ ಮಾದಿಗ ಜಾತಿಯ ವೃತ್ತಿಯೊಬ್ಬನಿಗೆ ದಾನವಾಗಿ ಗದ್ದೆಯನ್ನು ದಾನ ಮಾಡಿರುವುದನ್ನು ಈ ಶಾಸನವು ಉಲ್ಲೇಖಿಸುತ್ತದೆ. ಉತ್ತರ ಕರ್ನಾಟಕದ ದೇವಾಲಯಗಳಲ್ಲಿ ವಾದ್ಯ–ಮದ್ದಳೆ ನುಡಿಸುವವರು ಇಂದಿಗೂ ಮಾದಿಗ, ಕೊರವ, ಹೊಲೆಯ ಮೊದಲಾದ ದಲಿತರೇ ಆಗಿದ್ದಾರೆ. ಈ ಸಂಪ್ರದಾಯ ಹಿಂದಿನಿಂದಲೂ ನಡೆದು ಬಂದಿದೆ ಎನ್ನುವುದನ್ನು ಈಗ ಉಲ್ಲೇಖಿಸಿದ ಶಾಸನ ತಿಳಿಯಪಡಿಸುತ್ತದೆ. ಹಾಗೆಯೇ ದೇವಾಲಯದ ಪ್ರಮುಖ ಭಾಗವಾದ ನವರಂಗಕ್ಕೆ ಅವರಿಗೆ ಅವಕಾಶವಿತ್ತೆಂದು ಇದರಿಂದ ಸ್ಪಷ್ಟವಾಗುತ್ತದೆ. ಅದೂ ಅಲ್ಲದೇ ಸೂಂಡಿಯ (ಈಗಿನ ಸೂಡಿ, ಗದುಗ ಜಿಲ್ಲೆ) ಪ್ರಸಿದ್ಧ ಶಾಸನವೊಂದು (ಕ್ರಿ.ಶ.1054) ಹೀಗೆ ಹೇಳುತ್ತದೆ.(ಎಪಿಗ್ರಫಿಯಾ ಇಂಡಿಕಾ, ಸಂ.16 .ಶಾ.ಸಂ.6.)

...ಎಡವಕ್ಕದ ಕೇರಿಯ ಮೊದಲ ದೆಸೆಯ ಬಿಟ್ಟಿಯ ಚಾಮರದ ಸೂಳೆಬ್ಬೆಗೆ ಮತ್ತರು 11 ಪೆರ್ಗಡೆ ಬಳ ಮುಖ್ಯಂಗೆ ಮತ್ತರು 15 ಬಲದ ದೆಸೆಯ ಮೊದಲ ಕಂಭದ ಸೂಳೆ ರೇವಕಬ್ಬೆಗೆ ಮತ್ತರು 15 ಅಲ್ಲಿಯ ಸೂಳೆ ಗುಬ್ಬಿಯ ಚಾವುಂಡಬ್ಬೆಗೆ ಮತ್ತರ್ 15 ಬಲದ ದೆಸೆಯ ಬಿಟ್ಟಿಯ ಚಾಮರದ ಸೂಳೆ...ಬ್ಬೆಗೆ ಮತ್ತರ್ 12 ಎಡ ದೆಸೆಯ ಕೇರಿಯ ಚಾಮರದ ಸೂಳೆ ಗುಬ್ಬಿಯ ಕೇತಬ್ಬೆಗೆ ಮತ್ತರ್ 12 ಬಲ ದೆಸೆಯ ಪಾತ್ರಂ ಸೂಳೆ...ಬ್ಬೆಗೆ ಮತ್ತರ್ 13 ಎಡದ ದಸೆಯ ಪಾತ್ರಂ ಸೂಳೆ ಮತ್ತರ್ 12 ಎಡ ಪಕ್ಕದ ಕೇರಿಯ ಸೂಳೆ ಮೈಲಬ್ಬೆಗೆ ಮತ್ತರ್ 1(2) ಬಲಪಕ್ಕದ ಕೇರಿಯ ಸೂಳೆ ಜಾಕಬ್ಬೆಗೆ ಮತ್ತರ್ 12... ಇಂತೀ ಮರ್ಯಾದೆಯಂ ತಪ್ಪದೇ ಪ್ರತಿಪಾಳಿ...

ಇಲ್ಲಿ ಕಂಭ ಎನ್ನುವ ಪದವನ್ನು ಗಮನಿಸಬೇಕು. ಅದು ಗರ್ಭಗುಡಿಯ ಮುಂದಿನ ಮಂಟಪವನ್ನು ಅಂದರೆ ನವರಂಗವನ್ನು ಸೂಚಿಸುತ್ತದೆ. ಸೂಳೆಯರಿಗೆ ಈಗಿನ ಹಾಗೆ

ಕಡಿಮೆ ಸ್ಥಾನಮಾನ ಇರದ, ಗೌರವಯುತವಾದ ಸ್ಥಾನಮಾನಗಳಿದ್ದ ಕಾಲದ ಶಾಸನವಿದು. ಬಹುಮಟ್ಟಿಗೆ ಸೂಳೆಯರಾಗಿ ಕೆಳಜಾತಿಯವರು ಮತ್ತು ದಲಿತರೇ ಇರುತ್ತಿದ್ದರು ಎನ್ನುವುದು ಒಂದು ಒಪ್ಪಿತವಾದ ವಿಷಯವಾದುದರಿಂದ ಮೇಲೆ ಹೇಳಿದ ಕಂಭದ ಸೂಳೆಯರು ಆ ಆ ಸ್ಥಳಗಳಲ್ಲಿ ನಿಲ್ಲುತ್ತಿದ್ದವರಾಗಿರುತ್ತಿದ್ದರು. ಅವರು ಕೆಳಜಾತಿಯವರಾಗಿದ್ದರುಎನ್ನುವುದರೊಂದಿಗೆ, ಅವರಿಗೆ ಅಲ್ಲಿಗೆ ಎಂದರೆ ನವರಂಗಕ್ಕೆ ಪ್ರವೇಶ ಇರುತ್ತಿತ್ತು ಎನ್ನುವುದನ್ನು ಗಮನಿಸಬಹುದು. ಹಾಗೆಯೇ ಆಗಿನ ಕಾಲದಲ್ಲಿ ಸಾರ್ವಜನಿಕರಿಗೆ ನವರಂಗಕ್ಕೆ ಮಾತ್ರವೇ ಪ್ರವೇಶವಿರುತ್ತಿತ್ತು ಎನ್ನುವುದನ್ನು ಇಲ್ಲಿ ವಿಶೇಷವಾಗಿ ನೆನಪಿಸುತ್ತೇನೆ.

ಹೀಗೆ ನವರಂಗದಲ್ಲಿ ಬಡಗಿಗಳು, ಅಬಜಿಗಳು, ಮಾಕರಿಗಳು, ಮೊದಲಾದ ಕೆಳಜಾತಿ ಯವರು, ಮಧ್ಯಮ ಜಾತಿಯವರು ಮೊದಲಾದವರು ಇರುತ್ತಿದ್ದ ಅನೇಕ ಉಲ್ಲೇಖಗಳು ಶಾಸನಗಳಲ್ಲಿವೆ. ನವರಂಗದಲ್ಲಿ ನೃತ್ಯವೇ ಮೊದಲಾದ ಕಲೆಗಳ ಪ್ರದರ್ಶನವಿರುತ್ತದ್ದರಿಂದ ಅನಿವಾರ್ಯವಾಗಿ ಇವರು ಅಲ್ಲಿಗೆ ಬರಲೇಬೇಕಾಗಿತ್ತು. ಆಗಲೂ ದೇವಾಲಯ ಪ್ರವೇಶ ಎನ್ನುವುದು ಒಂದು ಸಮಸ್ಯೆಯಾಗಿರಲಿಲ್ಲ.

ಕೋಡಿಮಠದ ಶಾಸನ (ಕ್ರಿ.ಶ.1162)

ಈ ಪರಂಪರೆಯಲ್ಲಿ ಕೋಡಿಮಠದ ಶಾಸನಕ್ಕೆ ಮತ್ತು ಕೋಡಿಮಠಕ್ಕೆ ವಿಶಿಷ್ಟ ಸ್ಥಾನವಿದೆ. ಅದು ಸಮಸ್ತ ಮಾನವವರ್ಗವೆಲ್ಲವನ್ನೂ ಸಮಾನವೆಂದು ಪರಿಗಣಿಸುವ ಮಠವಾಗಿತ್ತು. ದೀರ್ಘವಾದ ಆ ಶಾಸನ ಹಾಗೆಯೇ ಉಲ್ಲೇಖಿಸದೇ ಉಚಿತಕ್ಕೆ ತಕ್ಕಷ್ಟು ಮಾತ್ರವೇ ಉದ್ಧರಿಸುತ್ತೇನೆ.

...ವೈಷ್ಠಿಕ ಬ್ರಹ್ಮಚರ್ಯ ಶಿವಮುನಿ ಜನಾನುಷ್ಠಾನನಿಷ್ಠಿತ ಸ್ಥಾನಮುಂಸಾಂಗಮಗ್ಋಜ ಸ್ಸಾಮಾಥರ್ವ ಚತುರ್ವೇದ ಸ್ವಾಧ್ಯಾಯ ಸ್ಥಾನಮುಂ ಕೌಮಾರ ಪಾಣನೀಯ ಶಾಕಟಾಯನ ಶಬ್ದಾನುಶಾಸನಾದಿ ವ್ಯಾಕರಣ ಷಡುದರ್ಶನಬ್ಯಾಖ್ಯಾನ ಸ್ಥಾನಮುಂ ನ್ಯಾಯ ವೈಶೇಷಿಕ ಮೀಮಾಂಸಾಂಖ್ಯ ಬೌದ್ಧಾದಿ ಷಡುದರ್ಶನವ್ಯಾಖ್ಯಾನ ಸ್ಥಾನಮುಂ ಅಷ್ಟಾದಶ ಪುರಾಣ ಧರ್ಮ ಶಾಸ್ತ್ರ ಸಕಳ ಕಾವ್ಯ ನಾಟಕಾದಿ ವಿವಿಧ ವಿದ್ಯುಸ್ಥಾನಮುಂ ದೀನಾನಾಥಸಂಗ್ವಂಧ ಬಧಿರ ಕಥಕ ನಾಯಕ ವಾದಕವಾಂಶಿಕನರ್ತಕ ವೈಕಾಳಿಕ ನಗ್ನ ಭಗ್ನ ಕ್ಷಪಣ ಕೈಕ ದಂಡಿ ತ್ರಿದಂಡಿ ಹಂಸ ಪರಮ ಹಂಸಾದಿ ನಾನಾ ದೇಶ ಭಿಕ್ಷುಕ ಜನಾನಿನಾರ್ಯಂನದಾನ ಸ್ಥಾನಮುಂ ನಾಥಾನಾಥ ರೋಗಿ ಜನರೋಗ ಭೈಷಜ್ಯಸ್ಥಾನಮುಂ ಸಕಲ ಭೂತಾಭಯ ಪ್ರಧಾನ ಸ್ಥಾನಮುಮಾಗಿ ಕೋಡಿಯ ಮಠವಿರ್ಪುದಾ... (ಎಪಿಗ್ರಫಿಯಾ ಇಂಡಿಕಾ, ಸಂ.8. ಶಿಕಾರಿಪುರ, ಶಾ.ಸಂ.98.)

ಇದು ಕೋಡಿಮಠದ ಹೆಗ್ಗಳಿಕೆ! ಇದು ಎಪ್ಪತ್ತುಮೂರು ಕುಲಗಳನ್ನು ಪವಿತ್ರವೆಂದು ಬಗೆಯುತ್ತಿತ್ತು. ಹಾಗೆಯೇ ಇಲ್ಲಿ ಮುಖ್ಯವಾಗಿ ದೇವಾಲಯಗಳಿಗೂ ಮಠಗಳಿಗೂ ವ್ಯತ್ಯಾಸಗಳೂ ಇರಲಿಲ್ಲ ಎನ್ನುವುದನ್ನು ಗಮನಿಸಬೇಕು. ಈ ಮಠಕ್ಕೆ ಎಲ್ಲರಿಗೂ ಮುಕ್ತ ಪ್ರವೇಶ ಇತ್ತು ಎನ್ನುವುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ ತಾನೇ?

ಎರಡು ಭಿನ್ನ ಶಾಸನಗಳು

ಆದರೆ ಈ ಮಾತಿಗೆ ಅಪವಾದಗಳಾಗಿ ಭಿನ್ನ ರಾಗವನ್ನು ಹಾಡುವ ಶಾಸಗಳೂ

ಇಲ್ಲದಿಲ್ಲ. ಸದ್ಯಕ್ಕೆ ಅಂತಹ ಎರಡು ಶಾಸನಗಳು ನನ್ನ ಗಮನಕ್ಕೆ ಬಂದಿದೆ. ಮೊದಲನೆಯದು ಸಿರಗುಪ್ಪದ ಶಾಸನ, ಎರಡನೆಯದು ಹರಪನಹಳ್ಳಿಯ ಶಾಸನ.

ಸಿರಗುಪ್ಪದ ಶಾಸನವು ಶಂಭುಲಿಂಗೇಶ್ವರ ದೇವಾಲಯದಲ್ಲಿರುವುದಾಗಿ ಅದರ ಕಾಲವು ಕ್ರಿ.ಶ.1199 ಎಂದು ತಿಳಿದು ಬರುತ್ತದೆ. ಈಶಾಸನದ ಕೊನೆಯಲ್ಲಿ...

... ಬಾಹ್ಮಣರಿಗಲ್ಲದೆ ಗೊರವುಗಳಿಗೆ ಸಲ್ಲದು ಬ್ರಾಹ್ಮಣ ಪೂಜೆ ಎಂದು ಸಾರುತ್ತದೆ. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್ ಸಂ.9.ಶಾ.ಸಂ.159) ಹಾಗೆಯೇ ಹರಪನಹಳ್ಳೀಯ ಕಲ್ಲೇಶ್ವರ ದೇವಾಲಯದ ಬಳಿ ಬಿದ್ದಿರುವ ಶಾಸನವೊಂದಿದೆ. ಅದರ ಕಾಲವು 1173 ಆಗಿದೆ. ಆ ಶಾಸನದ ಕೊನೆಯ ಭಾಗದಲ್ಲಿ...

'ಇವರ ದೇವಸ್ಥಾನಮುಂ ಬ್ರಾಹ್ಮಣರು ಪೂಜಿಸುವರು' ಈ ಎರಡು ಶಾಸನಗಳು ದೇವಾಲಯಗಳಲ್ಲಿ ಬ್ರಾಹ್ಮಣರೇ ಪೂಜೆ ಮಾಡಬೇಕೆನ್ನುವುದನ್ನು ಸಾರುತ್ತವೆ.

ನಮ್ಮ ತಿಳುವಳಿಕೆಗಳು ಇಂತಹ ವಿಷಯಗಳಿಂದಲೇ ನಿಯಂತ್ರಣವಾಗಿರುತ್ತವೆ. ಅಂದರೆ ದೇವಾಲಯಗಳಿಗೂ, ಬ್ರಾಹ್ಮಣರಿಗೂ ನೇರಸಂಬಂಧವಿದೆ ಎನ್ನುವುದರಿಂದಲೇ ಬಹುಮಟ್ಟಿಗೆ ದೇವಾಲಯದಲ್ಲಿ ಬ್ರಾಹ್ಮಣರು ಪೂಜಾರಿಗಳಾಗಿರುತ್ತಾರೆ; ಹಾಗೂ ಅವರಿಂದಾಗಿಯೇ ದೇವಾಲಯಗಳಿಗೆ, ಮಧ್ಯಮ ಜಾತಿಗಳಿಗೆ(ಶೂದ್ರರಿಗೆ), ಕೆಳಜಾತಿಯವರಿಗೆ ಹಾಗೂ ದಲಿತರಿಗೆ ದೇವಾಲಯ ಪ್ರವೇಶ ನಿರಾಕರಿಸಲಾಗುತ್ತದೆ ಎನ್ನುವ ವಿಷಯವನ್ನು ಪ್ರತಿಪಾದಿಸಲಾಗುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ನಾನು ಸುಮಾರು ಒಂದು ಸಾವಿರದಷ್ಟು ಶಾಸನಗಳನ್ನು ಓದಿದ್ದೇನೆ. ಆದರೆ ಮೇಲಿನ ಎರಡು ಶಾಸನಗಳ ಹಾಗೆ ಬ್ರಾಹ್ಮಣರೇ ಪೂಜೆ ಮಾಡಬೇಕು ಎಂದು ವಿಧಿಸುವ ಶಾಸನಗಳು ನನ್ನ ಗಮನಕ್ಕೆ ಬಂದಿಲ್ಲ. ಹಾಗೆಯೇ ಯಾವ ಜಾತಿಯವರೂ ದೇವಾಲಯಕ್ಕೆ ಬರಬಹುದು ಅಥವ ಬರಬಾರದು ಎಂದು ಹೇಳುವ ಯಾವ ಶಾಸನವೂ ನನ್ನ ಗಮನಕ್ಕೆ ಬಂದಿಲ್ಲ. ಆದರೆ ಕೆಲವು ಶಾಸನಗಳಲ್ಲಿ ನೀತಿ ನಿಯಮಗಳನ್ನು ಮೀರಿದವರಿಗೆ ಶಿಕ್ಷೆಯನ್ನು ಹೇಳಲಾಗಿದೆ. ಹಗರಿಬೊಮ್ಮನಹಳ್ಳಿಯ ಬಸದಿಯ ಮುಂದಿನ ಮಂಟಪದ ಪೂರ್ವಕ್ಕೆ ಇರುವ ಶಾಸನವೊಂದರಲ್ಲಿ (ಕ್ರಿ.ಶ.992) ಕೆಲವು ತಪ್ಪುಗಳಿಗೆ ಹೀಗೆ ಶಿಕ್ಷೆಯನ್ನು ಹೇಳಲಾಗಿದೆ:–

... ಪೂರ್ವ ಮರ್ಯಾದೆಯೊಳಪ್ರತಿಪಾಳಿಪುದು। ಮೂರು ಬರುವುವಿಲ್ಲ. ಮೂರ್ಮನೆ ವಾರ್ತೆಗರ ಮನೆ ಪೊಕ್ಕಡೆ ಪನ್ನೆರಡು ಗದ್ಯಾಣ ದಂಡ। ಹರದರಕ್ಕನಂಗದೊಳ್ಪಾರದಂಗೆಯ ಪಚ್ಚಮಂಕೊಂಡುಪಾದರಿಗೆಯ ಮೂಗನರಿದು ಪಾದರಿಗನಂ ಕೊಲ್ವರುತೊಯ್ದಂಗೆಂದು ಪಣಂ ಆಣೆಯಂ ಮಿಕ್ಕಂಗೆ ಪನ್ನೆರಡು ಪಣಂ ಮೀಟಿದಂಗೆ ಪನ್ನೆರಡು ಗದ್ಯಾಣದಣ್ಡಂ ಪರದ ನಾರ್ಬರ್ನ್ನಡವಂಗಡಿಯ ಪಾಜಿಕದಿಂದಿಳಿಯನನ್ಯಾಯದೊಳ್ಪರಧನರ ತೊಯ್ದೊಡೆ ಸಾವು ಸಾಲ್ವರ್। ನಕರಕ್ಕಂ ಮಹಾಜನಂಕ್ಕಂಗಾವುಡಗಳ್ಗಂ। ಪಂಚಮಹಾಸ್ಥಾನಕ್ಕಂ ಬಿಟ್ಟಿಯಲ್ಲ। ಬಟ್ಟಲ ತಂಬುಲಂ ಬಡೆವನ್ತೀ ಮರ್ಯಾದೆ... (ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂ.1. ಹಗರಿಬೊಮ್ಮನ ಹಳ್ಳಿ ಶಾ.ಸಂ.17.)

ಹೀಗೆ ಬೇರೆಬೇರೆ ತಪ್ಪುಗಳಿಗೆ ದಂಡನೆಗಳನ್ನೂ, ಶಿಕ್ಷೆಯನ್ನೂ ವಿಧಿಸಲಾಗಿದೆ. ಆದರೆ ದೇವಾಲಯ ಪ್ರವೇಶ ಮಾಡಿದರೆ ಶಿಕ್ಷೆಯನ್ನು ಯಾವ ಶಾಸನದಲ್ಲಿಯೂ ಹೇಳಲಾಗಿಲ್ಲ. ಹಾಗಾದರೆ ದೇವಾಲಯ ಪ್ರವೇಶವನ್ನು ಮುಕ್ತವಾಗಿರಿಸಲಾಗಿತ್ತು ಎಂದು ಇದರಿಂದ ತಿಳಿದು ಬರುವುದಿಲ್ಲವೇ?

ಕುಮಾರರಾಮನ ಸಾಂಗತ್ಯ

ಮತ್ತೊಂದು ವಿಶಿಷ್ಟ ಉದಾಹರಣೆ : ಕುಮಾರರಾಮನು ಕರ್ನಾಟಕದ ಪ್ರಸಿದ್ಧ ವೀರನಾಗಿದ್ದಾನೆ. ಈತನ ಕಾಲವು ಕ್ರಿ.ಶ.1213–1327 ಎಂದು ತಿಳಿದು ಬಂದಿದೆ. ಆತನ ಕುರಿತ ಒಂದು ಕಾವ್ಯವೇ ಹೊಸಕುಮಾರರಾಮನ ಸಾಂಗತ್ಯವಾಗಿದೆ. ಅದರಲ್ಲಿ ರಾಮನು ಕುಮ್ಮಟ ದುರ್ಗವನ್ನು ನಿರ್ಮಾಣ ಮಾಡುವ ಸಂದರ್ಭವೊಂದರ ವಿವರಗಳು ಬರುತ್ತವೆ:

ರಾಮನು ಬೇಟೆಯಾಡುತ್ತಾ ಕುಮ್ಮಟ ದುರ್ಗದ ಮೇಲಕ್ಕೆ ಬರುತ್ತಾನೆ. ಆಗ ಜೈನರು ಅಲ್ಲಿದ್ದರು. ರಾಮನನ್ನು ಕಂಡು ಸತ್ಕರಿಸಿದ ಅವರು ಊಟ ಮಾಡುವಂತೆಯೂ ಕೇಳಿಕೊಳ್ಳುತ್ತಾರೆ. ಸಂತೋಷಗೊಂಡ ರಾಮನು ಭೋಜನವನ್ನು ಮಾಡುತ್ತಾನೆ. ಆದರೆ ಹೋಗುವ ಮುನ್ನ ತನ್ನ ಕಠಾರಿಯನ್ನು ಮರೆತದ್ದರಿಂದ ಅದನ್ನು ತರುವುದಕ್ಕೆಂದು ರಾಮನ ಬಂಟನೊಬ್ಬ ಮತ್ತೆ ರಾಮನು ಊಟ ಮಾಡಿದ ಜಾಗಕ್ಕೆ ಬಂದನು. ಆಗ ರಾಮನು ಊಟ ಮಾಡಿದ ಜಾಗದಲ್ಲಿ ಜೈನರು ಸೆಗಣಿ ಸಾರಿಸುತ್ತಿದ್ದರು. ಇದನ್ನು ಕೇಳಿದ ರಾಮನು ಆ ಜೈನರನ್ನೆಲ್ಲ ಹೊಡೆದಟ್ಟಿದನಲ್ಲದೇ ಬಸದಿಗಳಲ್ಲಿ ಕುರಿಕೋಣಗಳನ್ನು ಕಡಿಯುತ್ತಾನೆ. ಆಮೇಲೆ ರಾಮನು ಕುಮ್ಮಟದುರ್ಗವನ್ನು ವಶಪಡಿಸಿಕೊಳ್ಳುತ್ತಾನೆ.

ಕಂಡಾಗ ಬಂದು ತನ್ನೊಡೆಯನಿಗೆ ಹೇಳಲು
ತೊಂಡ ಜೈನರು ನೋಡೆನಲು
ಉಂಡ ರಾಮನು ಎತ್ತಿ ಸಾರಣೆ ಮಾಡಿಯೆ
ಭಂಡರ ನೋಡಿಯೆಂದೆನಲು ॥ 29
ಕೇಳಿದ ಕೋಪವ ತಾಳೀದ ರಾಮಯ್ಯ
ಭಾಳಾಕ್ಷ ಕೊಟ್ಟನೆಂದೆನುತ
ಕೇಳಿ ಕುಮ್ಮಟದೊಳಗಿದ್ದ ಬಸ್ತಿಗಳಿಗೆ
ಸೀಳಿಸಿ ಕುರಿಕೋಣಗಳನು ॥30॥
ತಡೆಯದೆ ಕುರಿಕೋಣ ಕಡಿದು ಬಲಿಯನಿಕ್ಕಿ
ಸುಡಿಸಿದ ಕುರಿಕೋಳಿಗಳನು॥
ತಡೆಯದೆ ಜೈನ ಖೂಳರಿವರೆಂದು
ಬಿಡದಾಗ ಹೊರಡೆ ಕುಮ್ಮಟವ ॥31॥
ಬಿಟ್ಟರು ಕುಮ್ಮಟವನು ಕೊಪ್ಪಳಕಾಗ
ನೆಟ್ಟನೆ ಕಟ್ಟಿ ಪಟ್ಟಣವ
ಕೋಟೆ ಕುಮ್ಮಟದಲ್ಲಿ ಚೆನ್ನಿಗ ರಾಮಯ್ಯ
ದಿಟಾಮಾಟಿಗರ ಕರೆಸಿ ॥40॥ (ಹೊಸಕೊಮಾರರಾಮನ ಸಾಂಗತ್ಯ, ಪು.122)

ಕುಮಾರರಾಮನು ಬೇಡರವನಾಗಿದ್ದನು. ಬೇಡರನ್ನು ಕೆಳಜಾತಿಯವರೆಂದು ಆಗಲೂ ತಿಳಿಯುತ್ತಿದ್ದರೆಂದು ಇದರಿಂದ ತಿಳಿಯುತ್ತದೆ. ಹಾಗೆಯೇ ಜೈನರು ಕುಮಾರರಾಮನನ್ನು ಜಾತಿಯ ಕಾರಣಕ್ಕಾಗಿ ಹೀಗಳೆದುದು ಇದರಿಂದ ತಿಳಿಯುತ್ತಲ್ಲದೇ ಕೆಳಜಾತಿಯವನಾದ ಕುಮಾರರಾಮನು ಬಸದಿಗಳನ್ನು ನಾಶ ಮಾಡಿರುವುದೂ ಇದರಿಂದ ತಿಳಿದು ಬರುತ್ತದೆ. ಇಂದಿಗೂ ಕುಮ್ಮಟದುರ್ಗದಲ್ಲಿ ಜೈನ ಬಸದಿಗಳಿರುವ ಕುರುಹು ಕಂಡುಬರುತ್ತದೆ.

ದೇವಾಲಯದ ಪೂಜಾರಿಕೆ ಬ್ರಾಹ್ಮಣರದ್ದೇ?

ಕೆಲವು ಕಡೆಗಳಲ್ಲಿ ದೇವಾಲಯಗಳಿಗೆ ಪೂಜಾರಿಗಳಾಗಿ ಬ್ರಾಹ್ಮಣರು ಮಾತ್ರ ಇರುತ್ತಾರೆ ಎನ್ನುವ ತಪ್ಪು ಕಲ್ಪನೆ ಇದೆ. ಅದನ್ನು ಹೋಗಲಾಡಿಸುವ ಸಲುವಾಗಿ ಕೆಲವೊಂದು ನಿದರ್ಶನಗಳನ್ನು ಈಗ ನೀಡುತ್ತೇನೆ:

ಬಂಗಾರಪೇಟೆ ತಾಲ್ಲೂಕಿನ ರಾಮಸಾಗರದ ದುರ್ಗಮ್ಮ ಗುಡಿಯ ಪೂಜಾರಿ ಶೂದ್ರನಾಗಿದ್ದಾನೆ. ಶೆಟ್ಟಿಕೆರೆಯ ಕೆಂಪಮ್ಮ ದೇವಿಯ ಪೂಜಾರರು ಬೆಸ್ತರು, ಚಿತ್ರದುರ್ಗದ ನಾಯಕನಟ್ಟಿ ತಿಪ್ಪೇಸ್ವಾಮಿಗೆ ಬೇಡರು ಪೂಜಾರಿಗಳು, ಗೊಂಡನಹಳ್ಳಿ(ಚಿತ್ರದುರ್ಗ ಜಿಲ್ಲೆ) ಮುತ್ತಮ್ಮನಿಗೆ ಗೊಲ್ಲರು ಪೂಜಾರಿ, ಮಧುಗಿರಿಯ ದಂಡಿನ ಮಾರಮ್ಮನಿಗೆ ಬೇರೆ ಬೇರೆ ಜಾತಿಯವರು ಸೇವೆ ಮಾಡುತ್ತಾರೆ, ಕೋಲಾರ ತಾಲ್ಲೂಕಿನ ಮಾರೆಮ್ಮನ ಪೂಜಾರಿಯು ಒಕ್ಕಲಿಗರು, ಚಿತ್ರದುರ್ಗದ ಬೀರಾವರದ ಮಾರೆಮ್ಮನ ಪೂಜಾರಿಗಳು ಬೇಡರು, ವಿಜಾಪುರದ ರಾಜನಾಳದ ಮರಗಮ್ಮನ ಪೂಜಾರಿಗಳು ಕುರುಬರು, ಬಸೂರಿನ ಮಾರಮ್ಮನ ಅರ್ಚಕರು ನಾಥಪಂಥದ ಬಳೆಗಾರರು, ಮಂಡ್ಯ ಜಿಲ್ಲೆಯ ನಗುವನ ಹಳ್ಳಿಯ ಮಾರಿಯಮ್ಮನ ಪೂಜಾರಿಗಳು ಒಕ್ಕಲಿಗರು, ಅರಸೀಕೆರೆಯ ದುರುಗಮ್ಮನ ಪೂಜಾರಿ ಮಾದಾರರು, ಬೈಲಹೊಂಗಲದ ಸಾಣಿಕೇಶ್ವರ ದ್ಯಾಮವ್ವನಿಗೆ ಬಡಿಗೇರರು ಪೂಜಾರಿಗಳು, ಹಿಕ್ಕಿಮಗೇರಿಯ ಮಾರೆಮ್ಮನಿಗೆ ಕೊರಚರು ಪೂಜಾರಿಗಳು– ಹೀಗೆ ಕರ್ನಾಟಕದ ಬೇರೆ ಬೇರೆ ಕಡೆ ಬೇರೆ ಜಾತಿಯುವರು ದೇವಾಲಯುಗಳನ್ನು ಕಟ್ಟಿಕೊಂಡಿದ್ದಾರೆ. ಹಾಗೆಂಯೇ ಉತ್ತರ ಕರ್ನಾಟಕದಲ್ಲಿರುವ ಹನುಮಂತನ ಗುಡಿಗಳಲ್ಲಿ ಬ್ರಾಹ್ಮಣೇತರರೇ ಪೂಜಾರಿಗಳಾಗಿದಾರೆ. ಕೆಲವೊಮ್ಮೆ ಬೇರೆ ಬೇರೆ ಜಾತಿಯವರಿಂದ ಮೂರು ಸಲ ಒಂದೇ ಮೂರ್ತಿಗೆ ಪೂಜೆ ಮಾಡುವುದಿದೆ. ಅಷ್ಟೇಕೆ ಜಗತ್ಪ್ರಸಿದ್ಧವಾದ ತಿರುಪತಿ ದೇವಾಲಯದಲ್ಲಿ ಮೊದಲ ಪೂಜೆ ನಡೆಯುವುದು ಅಲ್ಲಿಯ ಬುಡಕಟ್ಟು ಸಮುದಾಯದವರಿಂದಲೇ ಎಂದು ತಿಳಿದುಬರುತ್ತದೆ. ಇದಕ್ಕೆ ಸಂಬಂಧಿಸಿದ ಕುತೂಹಲಕರವಾದ ವಿವರಣೆಯೊದನ್ನು ಕಟ್ಟಾವೈದಿಕ ವಿದ್ವಾಂಸರೊಬ್ಬರು ತಮ್ಮ ಕೊನೆಯ ಬ್ರಾಹ್ಮಣ ಕೃತಿಯಲ್ಲಿ ನೀಡಿದ್ದಾರೆ. ಈ ಗ್ರಂಥವನ್ನು ಬರೆದವರು ರಾಣಿಶಿವಶಂಕರಶರ್ಮ ಎನ್ನುವವರು. ತೆಲುಗಿನಿಂದ ಇದು ದಿ ಲಾಸ್ಟ್ ಬ್ರಾಹ್ಮಿನ್ ಎಂದು ಇಂಗ್ಲೀಷಿಗೆ ಅನುವಾದವಾಗಿದೆ. ಅಕ್ಷರ ಪ್ರಕಾಶನ ಸಾಗರ, ಹೆಗ್ಗೋಡು, ಇವರು ಇದನ್ನು ಕೊನೆಯ ಬ್ರಾಹ್ಮಣ ಎಂದು ಅನುವಾದಿಸಿದ್ದಾರೆ. ಅನುವಾದಕರು ಡಿ.ವೆಂಕಟರಾವ್ ಅವರು. ಅದರಲ್ಲಿ ಒಂದು ಕಡೆ ಹೀಗಿದೆ:

"ಸನಾತನ ಧರ್ಮದಲ್ಲಿ ಗುಡಿ ಅಥವ ದೇವಾಲಯ ಇಲ್ಲ.

ದೇವಾಲಯಗಳೆಂದರೆ ಸನಾತನ ಧರ್ಮಕ್ಕೆ ಸೇರಿದ ಬ್ರಾಹ್ಮಣರ ಸೃಷ್ಟಿಯಲ್ಲ. ಅದು ಕ್ಷತ್ರಿಯರ ಸೃಷ್ಟಿ. ದೇವಾಲಯಗಳ ನಿರ್ಮಾಣದಲ್ಲಾಗಲೀ, ನಿರ್ಮಾಣದಲ್ಲಾಗಲೀ, ಸನಾತನ ಧರ್ಮಕ್ಕೆ ಸಂಬಂಧವಿಲ್ಲ. ಬೌದ್ಧಧರ್ಮಾವಲಂಭಿಗಳಾದ ಮೊದಲ ರಾಜರುಗಳಿಗೆ ಬೌದ್ಧವಿಹಾರಗಳು ಸಂಪತ್ತಿ ಖಜಾನೆಗಳಾಗಿ ಸಹಕರಿಸಿದ್ದವು.......

ನಮ್ಮ ತಂದೆ ತಾಯಿಗಳಿಬ್ಬರೂ ಎಂದೂ ಗುಡಿಗೆ ಹೋಗಲಿಲ್ಲ. ನಮ್ಮ ತಂದೆಯವರು ನನಗೆ ಎಂದೂ ಗುಡಿಗೆ ಹೋಗೆಂದು ಹೇಳಲಿಲ್ಲ. ಕುಟುಂಬದ ಸದಸ್ಯರೆಲ್ಲಾ ಸೇರಿ ನಾವೆಂದೂ ಗುಡಿಗೆ ಹೋಗಲಿಲ್ಲ. ಏಕೆಂದರೆ ಅದು ಸನಾತನ ಸಂಪ್ರದಾಯದಲ್ಲಿ ಇಲ್ಲ. ಬ್ರಾಹ್ಮಣರ ಜೀವನದಲ್ಲಿ ಗುಡಿಯ ಪಾತ್ರ ಬಹಳ ಸೀಮಿತವಾದದ್ದು. ನಾವು ವೈದಿಕ

ಶಾಖೆಗೆ ಸೇರಿದವರು. ನಾವು ಗುಡಿಗಳಲ್ಲಿ ಅರ್ಚಕರಾಗುವುದಿಲ್ಲ. ನಾವು ಜಪ-ತಪ-ಪೂಜೆ ಪುನಸ್ಕಾರಗನ್ನು ಮನೆಯಲ್ಲಿಯೇ ಮಾಡುತ್ತೇವೆ; ಗುಡಿಗಳಿಗೆ ಹೋಗುವುದಿಲ್ಲ.

ಗುಡಿಗೆ ಹೋಗುವುದು, ಭಜನೆ ಮಾಡುವುದು ಮುಂತಾದವುಗಳಿಂದ ಕೂಡಿದ ಭಕ್ತಿ ಮಾರ್ಗವೆಂಬುದು ಅವೈದಿಕ. ಅದನ್ನು ಅಧಮ ಪದ್ಧತಿಯೆಂದು, ಸಾಮಾನ್ಯವಾದ್ದೆಂದು ಭಾವಿಸುತ್ತಾರೆ.......

ಬ್ರಾಹ್ಮಣರ ಆಧ್ಯಾತ್ಮಿಕ ಜೀವನವೆಲ್ಲ ಮನೆಯೊಂದಿಗೆ ಬೆಸೆದಿರುತ್ತದೆ(ಗೃಹ್ಯ, ಗಾರ್ಹಸ್ಥ್ಯ). ಗುಡಿಯೊಂದಿಗೆ ಅಲ್ಲ. ನಿಜಕ್ಕೂ ಉಪನಯನದಂತಹ ಪ್ರತ್ಯೇಕ ಸಂದರ್ಭದಲ್ಲೂ ಗುಡಿಗೆ ಹೋಗುವ ಪದ್ಧತಿ ಇಲ್ಲ....... ಬ್ರಾಹ್ಮಣರೆಲ್ಲರಿಗೂ ಸೇರಿ ಒಂದೇ ಒಂದು ಪ್ರಾರ್ಥನಾ ಸ್ಥಳವಿರುವುದು ಅಸಾಧ್ಯ. ಆದ್ದರಿಂದಲೇ ಗುಡಿ ಎಂಬುದು ಯಾವತ್ತೂ ಬ್ರಾಹ್ಮಣರ ಜೀವನದಲ್ಲಿ ಪ್ರಧಾನವಾಗಲಿಲ್ಲ. ಒಬ್ಬ ಸನಾತನ ಬ್ರಾಹ್ಮಣನು ಮನೆಯಲ್ಲಿ ಕುಳಿತು ನಿತ್ಯ ನೈಮಿತ್ತಿಕ ವೈದಿಕ ಅನುಷ್ಠಾನಗಳನ್ನು ಆಚರಿಸುತ್ತಾನೆ. ಆದ್ದರಿಂದ ಸನಾತನ ಬ್ರಾಹ್ಮಣನಿಗೆ ಅರ್ಚಕನೆಂಬುವನು ಆಧ್ಯಾತ್ಮಿಕ ಗುರುವಲ್ಲ. (ಕೊನೆಯ ಬ್ರಾಹ್ಮಣ ಪು. 31)

ಈಗ ನಮ್ಮ ಚರ್ಚೆಗಳು ಒಂದು ನಿರ್ದಿಷ್ಟ ಗುರಿಯೆಡೆಗೆ ಬರುತ್ತಿವೆ ಎಂದೆನಿಸುತ್ತಿದೆ. ಚರ್ಚೆಯ ಆರಂಭದಲ್ಲಿಯೇ ನಾನು ಇದಕ್ಕೆ ಒಂದು ಸೂಚನೆಯನ್ನು ನೀಡಿದೆ. ನಾವು ಸಾಮಾನ್ಯ ಜ್ಞಾನದಿಂದ ನಿಜವೆಂದು ತಿಳಿದಿರುವುದು ಅಧ್ಯಯನದಿಂದ ಬೇರೆಯೇ ಆಗುವ ಸಾಧ್ಯತೆಗಳಿವೆ ಎಂದು ಮೊದಲಿಗೇ ಹೇಳಿದೆ. ಅಲ್ಲಿಯೇ ಬಾಗಿಲನು ತೆರೆದು ಸೇವೆಯನು ಕೊಡು ಹರಿಯೇ ಎನ್ನುವ ಕನಕದಾಸರ ಹಾಡು ಪಾರಂಪರಿಕವಾಗಿ ದೇವಾಲಯ ಪ್ರವೇಶಕ್ಕೆ ಸಂಬಂಧಿಸಿರುವುದೆಂದು ಹೇಳಿದ್ದಲ್ಲ- ಅದು ಸಿನಿಮಾದವರ ಪ್ರಭಾವ ಎಂದೂ ಸಾರಿದ್ದೆ. ಅನಂತರ ಉಡುಪಿಯ ಮೂರ್ತಿ ಕನಕದಾಸರತ್ತ ತಿರುಗಿತ್ತೆಂದು ಹೇಳುವ ಐತಿಹ್ಯವು ಕ್ರಿ.ಶ.1436 ರಲ್ಲಿ ಮರುಸ್ಥಾಪನೆಯಾದ ಮೂರ್ತಿಯ ಸುತ್ತ ಇರುವ ಐತಿಹ್ಯವೆಂದಿದ್ದೆ. ಮುಂದುವರೆದು ಪ್ರಾಚೀನ ದೇವಾಲಯಗಳಲ್ಲಿ ಗರ್ಭಗುಡಿಯೇ ಮುಖ್ಯವಾದುದು; ಹಾಗಾದುದರಿಂದ ಅಲ್ಲಿ ಸಾರ್ವಜನಿಕರು ಯಾರಾರು ಪ್ರವೇಶ ಮಾಡಬಹುದು- ಮಾಡಬಾರದು ಎನ್ನುವ ಪ್ರಶ್ನೆ ಬರುವುದಿಲ್ಲ ಎಂದಿದ್ದೆ. ಅದಕ್ಕೆ ಮುಖ್ಯ ಕಾರಣವೆಂದರೆ ಪೂಜಾರಿಯೊಬ್ಬನಿಗಷ್ಟೇ ಹೋಗಬಹುದಾದಷ್ಟು ಸಣ್ಣ ದೇವಾಲಯಗಳವು. ಆ ವಾದ ಸರಣಿಯನ್ನು ಮುಂದುವರಿಸಿ ರಂಗಭೋಗವು ಜನಪ್ರಿಯವಾದುದರಿಂದ ಗರ್ಭಗುಡಿಯು ಸಾರ್ವಜನಿಕರಿಂದ ದೂರವಾಗತೊಡಗಿತು, ಏಕೆಂದರೆ ದೇವಾಲಯದ ವ್ಯಾಪ್ತಿ ಹೆಚ್ಚಾಗುತ್ತಾ ಹೋಯಿತು ಎಂದು ಪ್ರತಿಪಾದಿಸಿದೆ. ರಂಗಭೋಗ ಜನಪ್ರಿಯವಾಗಿ ನವರಂಗ ಬೆಳೆದಾಗಲೂ ಕೆಳಜಾತಿಯವರಿಗೆ, ಶೂದ್ರರಿಗೆ ಪ್ರವೇಶವನ್ನು ನಿರಾಕರಿಸಿರಲಿಲ್ಲ; ಏಕೆಂದರೆ ನವರಂಗದವರೆಗೆ ಅವರಿಗೆ ಪ್ರವೇಶವಿತ್ತೆಂದೂ ಅಲ್ಲಿ ನಾನು ಪ್ರತಿಪಾದಿಸಿದೆ. ಅದಕ್ಕೆ ಮದ್ದಳೆಯ ಮಾದಿಗ ಮತ್ತು ಕಂಬದ ಸೂಳೆಯರ ನಿದರ್ಶನವನ್ನು ಪೂರಕವಾಗಿ ಒದಗಿಸಿದ್ದೆ. ಆದರೆ ಬಳ್ಳಾರಿ ಜಿಲ್ಲೆಯ ಶಾಸನಗಳಲ್ಲಿ ದೇವಾಲಯಗಳಲ್ಲಿ ಪೂಜಾರಿಗಳಾಗಿ ಬ್ರಾಹ್ಮಣರೇ ಇರಬೇಕೆಂದು ಶಾಸನ ಬರೆಯುವುದರ ಬಗೆಗೂ ಗಮನ ಸೆಳೆದಿದ್ದೆ. ಆಮೇಲೆ ಕರ್ನಾಟಕದ ಬೇರೆ ಬೇರೆ ಕಡೆ ಯಾವ ಯಾವ ಜಾತಿಯವರು ದೇವರ- ದೇವತೆಗಳ ಪೂಜಾರಿಗಳಾಗಿದಾರೆ ಎನ್ನುವುದಕ್ಕೆ ನಿದರ್ಶನವನ್ನು ನೀಡಿದ್ದೆ. ಈಗ ಕೊನೆಯದಾಗಿ ದೇವಾಲಯಗಳಿಗೂ, ಅದರ ಪೂಜಾ ವಿಧಿಗಳಿಗೂ

ಶುದ್ಧ ವೈದಿಕ ಬ್ರಾಹ್ಮಣರೆನಿಸಿಕೊಂಡವರಿಗೆ ಸಂಬಂಧವಿಲ್ಲವೆಂದ ಕಟ್ಟಾ ವೈದಿಕ ಬ್ರಾಹ್ಮಣರೊಬ್ಬರ ಪ್ರತಿಪಾದನೆಯನ್ನು ಉಲ್ಲೇಖಿಸಿದೆ. ಈಗ ಮುಂದಿನ ಪ್ರಶ್ನೆ ಸ್ಪಷ್ಟವಾಗಿಯೇ ಇದೆ. ಹಾಗಾದರೆ ದೇವಾಲಯಗಳನ್ನು ನಿರ್ಮಿಸಿದವರು ಯಾರು?

ದೇವಾಲಯಗಳ ನಿರ್ಮಾಣ : ಮತ್ತೊಂದು ಸುತ್ತಿನ ಚರ್ಚೆ

ಈಗಿನ ಚರ್ಚೆಗಳಿಂದ ಒಂದು ಖಚಿತವಾದ ಉತ್ತರಕ್ಕೆ ನಾವು ಬರಬಹುದು. ಅಂದರೆ ದೇವಾಲಯಗಳು ಕ್ಷತ್ರಿಯರ, ಧನವಂತರ, ಬ್ರಾಹ್ಮಣೇತರರ ಸೃಷ್ಟಿಯೇ ಆಗಿವೆ. ಐತಿಹಾಸಿಕವಾಗಿ ಇದಕ್ಕೆ ಈಗಾಗಲೇ ವಿವರಗಳನ್ನು ನೀಡಲಾಗಿದೆ. ಕರಾವಳಿ ಕರ್ನಾಟಕದ ಇನ್ನೊಂದು ನಿದರ್ಶನದ ಮೂಲಕ ಹೇಳುವುದಾದರೆ, ತುಳುವರಿಗೆ ಭೂತಾರಾಧನೆ ಮುಖ್ಯವಾದುದು. ಪ್ರತಿಯೊಂದು ಮನೆಯಲ್ಲಿಯೂ ಇದು ನಡೆದೇ ನಡೆಯುತ್ತದೆ. ಮೊನ್ನೆ ಮೊನ್ನೆಯವರೆಗೂ ಬ್ರಾಹ್ಮಣರಿಗೂ ಅದಕ್ಕೂ ಸಂಬಂಧ ಇರಲಿಲ್ಲ. ಈಗಲೂ ಅಷ್ಟಕ್ಕಷ್ಟೇ ಸಂಬಂಧ ಇದೆ. ಕರ್ನಾಟಕದ ಇತರ ಭಾಗಗಳಲ್ಲಿ ಗ್ರಾಮದೇವತೆಗಳು ಎಲ್ಲೆಂದರಲ್ಲಿ ಕಾಣಿಸಿಕೊಳ್ಳುತ್ತವೆ. ಅವುಗಳಲ್ಲಿ ಬ್ರಾಹ್ಮಣರ ಪಾಲ್ಗೊಳ್ಳುವಿಕೆ ಇಲ್ಲವೆಂದಷ್ಟೂ ಕಡಿಮೆ. ಇದನ್ನು ಗ್ರಾಮದೇವತೆಗಳ ಕುರಿತು ಅಧ್ಯಯನ ಮಾಡಿದವರೆಲ್ಲರೂ ಹೇಳಿದ್ದಾರೆ. ಪ್ರೊ. ಎಸ್.ಎಸ್. ಹಿರೇಮಠರ 'ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ– ಜಾತ್ರೆಗಳು' ಪುಸ್ತಕದಲ್ಲಿ ಅದನ್ನು ವ್ಯವಸ್ಥಿತವಾಗಿ ಪ್ರತಿಪಾದಿಸಿದ್ದಾರೆ. ಹಾಗಾದರೆ ದೇವಾಲಯಗಳು ಕರ್ನಾಟಕಕ್ಕೆ ಮಧ್ಯಮ ಜಾತಿಗಳು ಮತ್ತು ದಲಿತರ ಕೊಡುಗೆ ಎಂದು ಸ್ಪಷ್ಟವಾಯಿತು.

ಹಾಗಾದರೆ ದೇವಾಲಯ ಪ್ರವೇಶದ ಸಮಸ್ಯೆ ಆರಂಭ ಎಲ್ಲಿ?

ಯಾರು ದೇವಾಲಯಗಳ ಸಂಸ್ಕೃತಿಯನ್ನು ಕಟ್ಟಿ ಬೆಳೆಸಿದರೋ ಅವರೇ ಈ ಸಮಸ್ಯೆಯ ನಿರ್ಮಾತೃಗಳು ಎಂದು ಈಗ ಹೇಳದೇ ಬೇರೆ ದಾರಿಯೇ ಇಲ್ಲ. ಇದರಿಂದ ಎಷ್ಟೇ ಆತಂಕ–ತಳಮಳವಾದರೂ ಅದರ ಹೊರತು ಬೇರೆ ಉತ್ತರವನ್ನು ನೀಡಲಾಗುವುದಿಲ್ಲ. ಈಗಾಗಲೇ ನಾನು ಐತಿಹಾಸಿಕ, ಪಾರಂಪರಿಕವಾದ ವಿವರಣೆಗಳನ್ನು ನೀಡಿರುವೆನಾದರೂ ನನ್ನ ವೈಯಕ್ತಿಕ ಅನುಭವವನ್ನು ಸೇರಿಸುವುದಕ್ಕೂ ಇದು ಸಕಾಲವಾಗುತ್ತದೆ.

ನನ್ನ ಹುಟ್ಟೂರಾದ ಪೆರಾಜೆ ಎನ್ನುವುದು ಒಂದು ಸಣ್ಣ ಹಳ್ಳಿ. ಅಲ್ಲಿ ಶಾಸ್ತಾವೇಶ್ವರ ಎನ್ನುವ ಸುಂದರವಾದ ದೇವಾಲಯವಿದೆ. ಅದು ಬಹಳ ಪ್ರಾಚೀನವಾದ ದೇವಾಲಯವೇನಲ್ಲ. ನಾನು ಸಣ್ಣವನಿರುವಾಗ ಅಂದರೆ ಈಗ ಸುಮಾರು 45 ವರ್ಷಗಳ ಹಿಂದೆ ಅದು ಸಣ್ಣ ದೇವಾಲಯವಾಗಿತ್ತು. ದೇವಾಲಯದ ಸುತ್ತ ವಿಶಾಲವಾದ ಜಾಗವಿತ್ತು. ನಮ್ಮ ಹಿರಿಯರು ಹೇಳುವ ಹಾಗೆ ಅಲ್ಲಿಯ ಬಹುಸಂಖ್ಯಾತರಾದ ಗೌಡರಿಗೂ ಕೂಡ ಆಗ ದೇವಾಲಯದ ಒಂದು ನಿರ್ದಿಷ್ಟ ಭಾಗಕ್ಕೆ ಮಾತ್ರ ಹೋಗುವ ಸಾಧ್ಯತೆ ಇತ್ತು. ದೇವಾಲಯದ ಸುತ್ತ ಎತ್ತರದ ಮಣ್ಣಿನ ಕಟ್ಟೆ ಇದ್ದುದರಿಂದ ದಲಿತರೆಲ್ಲರೂ ಅಲ್ಲೇ ಕುಳಿತು ಜಾತ್ರೆ ನೋಡುತ್ತಿದ್ದರು. ಆಗ ದೇವಾಲಯದ ಸುತ್ತ ವಿಶಾಲವಾದ ಜಾಗ ಇದ್ದುದರಿಂದ ದೇವಾಲಯ ಸಂಕೀರ್ಣ ಸಣ್ಣದಾದುದರಿಂದ ದೇವಾಲಯದ ಸಮೀಪ ಇದ್ದಂತೆಯೇ ದಲಿತರಿಗೆ ಭಾಸವಾಗುತ್ತಿತ್ತು. ದಲಿತರು ಮಾತ್ರವಲ್ಲ ಬೇರೆ ಜಾತಿಯವರೂ ಇಲ್ಲಿಂದಲೇ ದೇವರನ್ನು, ಜಾತ್ರೆಯನ್ನೂ ನೋಡುತ್ತಿದ್ದರು. ಬರಬರುತ್ತ ದೇವಾಲಯದ ಸಂಕೀರ್ಣ ವಿಸ್ತಾರವಾಗತೊಡಗಿತು. ಹಾಗೆಯೇ

ದೇವಾಲಯದ ಸುತ್ತ ಮುಳ್ಳುಬೇಲಿಯೂ ಬಂತು. ಊರಿನಲ್ಲಿ ಗೌಡರು ಸ್ಥಿತಿವಂತರೂ, ಪ್ರಬಲರೂ ಆದುದರಿಂದ ದೇವಾಲಯದ ಒಂದು ನಿರ್ದಿಷ್ಟ ಭಾಗಕ್ಕೆ ಮಾತ್ರ ಹೋಗುತ್ತಿದ್ದ ಅವರು ದೇವಾಲಯದ ತುಂಬ ಹತ್ತಿರಕ್ಕೆ ಹೋಗತೊಡಗಿದರು. ಇತ್ತ ದಲಿತರಿಗೆ ದೇವಾಲಯದ ಸಂಕೀರ್ಣಕ್ಕೆ ಮಾತ್ರವಲ್ಲ, ದೇವಾಲಯವನ್ನೇ ನೋಡುವ ಸ್ಥಿತಿ ಇರಲಿಲ್ಲ. ಆಗ ದೇವಾಲಯ ಪ್ರವೇಶದ ಸಮಸ್ಯೆ ಉಂಟಾಯಿತು. ತೀರಾ ಅಲ್ಪ ಸಂಖ್ಯಾತರಾಗಿದ್ದ ಬ್ರಾಹ್ಮಣರು ಆಗಲೂ ದಲಿತರ ದೇವಾಲಯ ಪ್ರವೇಶಕ್ಕೆ ಅಡ್ಡಿ ಮಾಡಲಿಲ್ಲ. ಭಕ್ತಿಯಿಂದ ಬಂದವರನ್ನು ಇಲ್ಲ ಎಂದು ನಾನು ಹೇಳುವುದಿಲ್ಲ ಎಂದರೂ ತಕರಾರು ತೆಗೆದವರು ಮಧ್ಯಮ ಜಾತಿಯವರೇ. ಅವರು ಹಾಗೆ ಹೇಳುವುದಕ್ಕೆ ಒಂದು ಸಕಾರಣವೂ ಇಲ್ಲದಿಲ್ಲ. ಏಕೆಂದರೆ ನಮ್ಮೂರಿನ ದೇವಾಲಯದ ಬೆಳವಣಿಗೆಯಲ್ಲಿ ಒಕ್ಕಲಿಗರ ಗೌಡರು ತುಂಬ ಶ್ರಮಿಸಿದ್ದಾರೆ. ದೇವಾಲಯವನ್ನು ಅಭಿವೃದ್ಧಿ ಮಾಡಿದ್ದಾರೆ. ಯಾರು ದೇವಾಲಯವನ್ನು ಬೆಳೆಸುತ್ತಾರೋ, ಅವರು ಸಹಜವಾಗಿಯೇ ದೇವಾಲಯದ ಬಗೆಗೆ ಹಕ್ಕುದಾರಿಕೆಯನ್ನು ತೋರಿಸುತ್ತಾರೆ. ಇಲ್ಲಿ ನೀತಿ–ಅನೀತಿಯ ಪ್ರಶ್ನೆಯಿಂದಾಚೆಗೆ ಹೇಳುವುದಿದ್ದರೆ, ದೇವಾಲಯವನ್ನು ಯಾರು ಪೋಷಿಸುತ್ತಾರೋ ಅವರೇ ನಿಯಮಗಳನ್ನೂ ರೂಪಿಸುತ್ತಾರೆ. ನಮ್ಮಲ್ಲಿ ದೇವಾಲಯಗಳೂ ಮಧ್ಯಮ ಜಾತಿಯವರು(ಶೂದ್ರರು), ದಲಿತರು ಪೋಷಿಸಿರುವುದರಿಂದ ಅದಕ್ಕೆ ಸಂಬಂಧಿಸಿದ ನಿಯಮಗಳನ್ನು ಅವರಲ್ಲದೇ ಇನ್ನಾರು ರೂಪಿಸುವುದಕ್ಕೆ ತಾನೇ ಸಾಧ್ಯ?

ಹಾಗೆಂದು ದೇವಾಲಯ ಸಂಸ್ಕೃತಿಯಲ್ಲಿ ಬ್ರಾಹ್ಮಣರ ಪಾತ್ರ ಕೊಂಚವೂ ಇಲ್ಲವೆಂದು ನಾನು ಹೇಳುವುದಿಲ್ಲ. ರಾಜರ ಕಾಲದಲ್ಲಿ ಜೀವನೋಪಾಯಕ್ಕಾಗಿ ಬ್ರಾಹ್ಮಣರು ದೇವಾಲಯದ ಪೂಜಾರಿಗಳಾಗಿರುವುದುಂಟು. ಹಾಗೆಯೇ ಈಗಲೂ ಅದನ್ನೊಂದು ವೃತ್ತಿಯಾಗಿ ಅವರು ನಡೆಸಿಕೊಂಡು ಬರುತ್ತಿದ್ದಾರೆ. ಆದರೆ ಬ್ರಾಹ್ಮಣರಿಗೆ ದೇವಾಲಯದ ಪೂಜೆಗಿಂತಲೂ ವೈದಿಕ ಕ್ರಿಯೆಗಳಾದ ಸಂಧ್ಯಾವಂದನೆ, ಯಾಗ ಹಾಗೂ ಮಂತ್ರಪಠಣ ಮೊದಲಾದವುಗಳೇ ಮುಖ್ಯವಾದುವು. ಆದರೆ ಮಧ್ಯಮ ಜಾತಿಗಳಿಗೆ ಇಂದಿಗೂ ದೇವಾಲಯಗಳೇ ಮುಖ್ಯವಾದವು. ಈ ದೃಷ್ಟಿಯಿಂದ ಕುದ್ರೋಳಿ ದೇವಾಲಯದಲ್ಲಿ ಸನ್ಮಾನ್ಯ ಜನಾರ್ದನ ಪೂಜಾರಿಯವರು ಕೈಗೊಂಡ ಕಾರ್ಯ ಮಹತ್ತರವಾದುದು. ಬಿಲ್ಲವ ಸಮಾಜದವರು ಸ್ಥಾಪಿಸಿದ ಆ ದೇವಾಲಯದಲ್ಲಿ ಅವರು ಏನನ್ನು ಮಾಡುತ್ತಾರೋ ಅದೇ ನಿಯಮ. ದಲಿತ ವಿಧವೆಯೊಬ್ಬರಿಂದ ಪೂಜೆ ಮಾಡಿಸಿರುವುದು ಅವರಿಗೆ ಒಪ್ಪಿತವಾದ ನಿಯಮ. ಅದನ್ನು ಪ್ರಶ್ನಿಸುವ ಅಧಿಕಾರ ಬೇರೆಯವರಿಗಿಲ್ಲ. ಏಕೆಂದರೆ ದೇವಾಲಯಗಳು ಈವರೆಗೆ ನಡೆದು ಬಂದಿರುವುದೇ ಹಾಗೆ.

ಇಷ್ಟಾಗಿಯೂ ದೇವಾಲಯಕ್ಕೆ ಪ್ರವೇಶಿಸಬೇಕೆನ್ನುವುದು ಅಧಿಕಾರದ ಪ್ರಶ್ನೆಯೋ ಅಥವ ನಂಬಿಕೆಯ ಪ್ರಶ್ನೆಯೋ? ಎನ್ನುವುದು ಬೇರೆಯದೇ ಆದ ಇನ್ನೊಂದು ಜಿಜ್ಞಾಸೆಯಾಗಿದೆ. ಕನಕದಾಸರನ್ನು ತಡೆಯಲಾಯಿತು ಎನ್ನುವವರು ಈ ದೃಷ್ಟಿಯಿಂದ ಅದನ್ನು ನೋಡುವುದೇ ಇಲ್ಲ. ಅಷ್ಟಾಗಿಯೂ ಆ ಐತಿಹ್ಯ ಸೂಚಿಸುವುದಾದರೂ ಏನು? ಆಗಲೇ ಹೇಳಿದಂತೆ ಭಕ್ತಿಯಿಂದ ಬಂದವರಿಗೆ ದೇವಾಲಯದ ಬಾಗಿಲು ತೆರೆದೇ ಇರುತ್ತದೆ ಎನ್ನುವುದನ್ನು ತಾನೇ? ಇದು ಪ್ರವೇಶಿಸುವವನಿಗೂ, ಪೂಜಾರಿಗೂ ದೇವರಿಗೂ ಏಕಕಾಲಕ್ಕೆ ಅನ್ವಯವಾಗುವ ನಿಯಮ. ಏಕೆಂದರೆ ದಾಸರೇ ಹೇಳುವ ಹಾಗೆ – ಹೂವ ತರುವರ

ಮನೆಗೆ ಹುಲ್ಲ ತರುವ। ಅವ್ವ ಲಕುಮೀರಮಣ ಇವಗಿಲ್ಲ ಗರುವ! ಇಲ್ಲಿ ಇನ್ನೂ ಒಂದು ಸಮಸ್ಯೆ ಇದೆ–ನಾವು ದೊಡ್ಡ ದೊಡ್ಡ ದೇವಾಲಯಕ್ಕೆ ಮಾತ್ರ ಪ್ರವೇಶಿಸಬೇಕೆನ್ನುವುದು ಏಕೆ? ಊರಿನ ಸಣ್ಣ ಸಣ್ಣ ಮಾರಮ್ಮನೋ ಎಲ್ಲಮ್ಮನೋ ಬಾ ಮಗನೇ ಎಂದು ಕರೆದಾಗಲೂ ಹೋಗುವುದಿಲ್ಲವೇಕೆ? ಏಕೆಂದರೆ ಶಿಲ್ಪಶಾಸ್ತ್ರಗ್ರಂಥಗಳಲ್ಲಿ ಈ ಮಾತು ಇದೆ–

"ಕಲ್ಪಗಳಿಗೆ ಒಲಿದವರು ದೇವರನ್ನು ಅಗ್ನಿಯಲ್ಲಿ ಕಾಣುತ್ತಾರೆ. ಆದರೆ ವಿವೇಕಿಗಳಾದವರು ದೇವರನ್ನು ತಮ್ಮ ಹೃದಯದಲ್ಲೇ ಕಂಡುಕೊಳ್ಳುತ್ತಾರೆ. ಮಂದಬುದ್ಧಿಯವರಿಗೆ ದೇವರು ಪ್ರತಿಮೆಯಲ್ಲಿದ್ದಾನೆ. ಉಳಿದವರಿಗೆ ಎಲ್ಲೆಲ್ಲೂ ಇದ್ದಾನೆ."

ದೇವಾಲಯಗಳನ್ನು, ಮೂರ್ತಿಗಳನ್ನು ಎಷ್ಟು ಪ್ರಮಾಣ ಹೇಗೆ ಕಟ್ಟಬೇಕೆನ್ನುವ ಶಾಸ್ತ್ರಗಾರರೇ ಈ ಮಾತನ್ನು ಹೇಳಿರುವುದು. ದೇವಾಲಯಗಳನ್ನು ಹೀಗೆ ಹೀಗೆ ಕಟ್ಟಿ ಎನ್ನುವವರೇ ಅದು ಅವಿವೇಕಿಗಳ ಕೆಲಸ ಎಂದಮೇಲೆ ಈ ದೇವಾಲಯ ಪ್ರವೇಶ ಎನ್ನುವುದನ್ನು ಏನೆನ್ನಬೇಕು?

ಹಾಗಾದರೆ ಈಗಿನ ಸಮಸ್ಯೆಯ ಮೂಲ ಎಲ್ಲಿ? : ದೇವಾಲಯ ಪ್ರವೇಶ ಎನ್ನುವುದು ಈಗ ಒಂದು ರಾಜಕೀಯ ಸಂಗತಿಯಲ್ಲದೇ ಬೇರೇನೂ ಅಲ್ಲ. ಮಹಾತ್ಮಾ ಗಾಂಧೀಜಿ, ನಾರಾಯಣಗುರು ಮೊದಲಾದ ಹಿರಿಯರಿಗೆ, ಧೀಮಂತರಿಗಿದ್ದ ಕಾಳಜಿ ಕೂಡ ಇದರ ಹಿನ್ನೆಲೆಯಲ್ಲಿ ಇಲ್ಲ. ದೇವಾಲಯಕ್ಕೆ ಪ್ರವೇಶ ಮಾಡಬೇಕೆನ್ನುವವರೂ ಈಗ ಅದನ್ನು ಪ್ರತಿಷ್ಠೆಯ ಪ್ರಶ್ನೆಯಾಗಿಯೇ ಸ್ವೀಕರಿಸಿದ್ದಾರೆ. ಇಲ್ಲದೆ ಹೋದರೆ ಅದು ಗಂಭೀರವಾದ ಪ್ರಶ್ನೆಯಾಗಬೇಕಾಗಿಲ್ಲ. ಏಕೆಂದರೆ ಈವರೆಗೆ ಸುದೀರ್ಘವಾಗಿ ಚರ್ಚಿಸಿರುವ ಹಾಗೆ ದೇವಾಲಯದ ಕಲ್ಪನೆ ನಮ್ಮಲ್ಲಿ ಸರಳವಾದುದು. ಯಾರು ಬೇಕಾದರೂ ದೇವಾಲಯವನ್ನು ಸ್ಥಾಪನೆಮಾಡಬಹುದು. ಶ್ರೀನಾರಾಯಣ ಗುರುಗಳು ನದಿಯಲ್ಲಿದ್ದ ಒಂದು ಕಲ್ಲನ್ನೇ ಎತ್ತಿ ತಂದು ಅದನ್ನು ದೇವರೆಂದು ಪೂಜಿಸಿ ಎಂದು ದಾರಿ ತೋರಿಸಿದರು. ದೇವಾಲಯದ ಕಲ್ಪನೆ ಅಷ್ಟು ಸರಳವಾದುದು. ಹಾಗಾದುದರಿಂದ ದೇವಾಲಯಕ್ಕೆ ಪ್ರವೇಶ ಮಾಡುವುದಕ್ಕಿಂತ ಸರಳವಾಗಿ ನಮ್ಮದೇ ಆದ ದೇವಾಲಯವನ್ನು ಕಟ್ಟಿಕೊಳ್ಳುವುದರತ್ತಲೂ ಯೋಚನೆ ಮಾಡಬಹುದು. ಅದನ್ನು ಯಾರೂ ನಿರಾಕರಿಸುವುದೂ ಇಲ್ಲ; ತಾತ್ಸಾರ ಮಾಡುವುದೂ ಇಲ್ಲ. ಅಲ್ಲಿ ಆಗಲೇ ಹೇಳಿರುವಂತೆ ಬೇಕಾಗಿರುವುದು ಭಕ್ತಿಯೇ ಹೊರತು ಹಕ್ಕೊತ್ತಾಯವಲ್ಲ. ಹಾಗೆಯೇ ಅನ್ಯರಿಗೆ ದೇವಾಲಯ ಪ್ರವೇಶವನ್ನು ನಿರಾಕರಿಸುವಲ್ಲಿಯೂ ಈಗ ಹೇಳಿರುವ ಅಂಶಗಳನ್ನೇ ಗಮನಿಸಬಹುದು. ದೇವಾಲಯವು ವೈದಿಕರ ಸಂಸ್ಕೃತಿಯೇ ಅಲ್ಲವೆಂದ ಮೇಲೆ(ಹಾಗೆಂದವರು ರಾಣೀಸತೀಶ ಶರ್ಮ ಎನ್ನುವ ಕಟ್ಟಾ ವೈದಿಕರು) ಬ್ರಾಹ್ಮಣರು ಇತರರನ್ನು ತಡೆಯುವುದಾದರೂ ಹೇಗೆ? ಇನ್ನೂ ಒಂದು ವಿಷಯ; ಒಂದು ಕಾಲದಲ್ಲಿ ದೇವಾಲಯದ ಒಂದು ನಿರ್ದಿಷ್ಟ ಜಾಗಕ್ಕೆ ಮಾತ್ರ ಪ್ರವೇಶಿಸುತ್ತಿದ್ದ ಮಧ್ಯಮ ಜಾತಿಯವರು ಇದ್ದಕ್ಕಿದ್ದಂತೆ ಪವಿತ್ರರಾದದ್ದು ಹೇಗೆ?

ಇದಕ್ಕೆಲ್ಲ ಒಂದೇ ಒಂದು ಉತ್ತರ ಸಾಧ್ಯವಿದೆ. ನಮ್ಮ ಪರಂಪರೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳದಿರುವುದೇ ಈ ಎಲ್ಲಾ ಸಮಸ್ಯೆಗಳಿಗೂ ಕಾರಣವಾಗಿದೆ.

ನಮೋಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ
ತ್ರೈಲೋಕ್ಯ ನಗರಾರಂಭ ಮೂಲ ಸ್ಥಂಭಾಯ ಶಂಭವೇ ॥

ಪರಾಮರ್ಶನ ಗ್ರಂಥಗಳು

1. ಎಪಿಗ್ರಫಿಯಾ ಇಂಡಿಕಾ, ಸಂ.15.ಶಾ.ಸಂ. 6.
2. ಎಪಿಗ್ರಫಿಯಾ ಕನಾಟಕ, ಸಂ.8. ಶಿಕಾರಿಪುರ, ಶಾ.ಸಂ. 98
3. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ, (ಹಗರಿಬೊಮ್ಮನ ಹಳ್ಳಿ) ಶಾ.ಸಂ.17.
4. ಕಲಬುರ್ಗಿ ಮತ್ತು ವೀರಣ್ಣ ರಾಜೂರ(ಸಂ.), ಹೊಸ ಕೊಮಾರರಾಮನಸಾಂಗತ್ಯ (2000). ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
5. ಗಿರಿಜಾ ಶಂಕರ್, ಭಕ್ತಿ ವಿಜಯ (1996). ಸಂಕೇಶ್ವರ ಪ್ರಿಂಟರ್ಸ್,ಗದಗ.
6. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (1978).ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ ಮೈಸೂರು.
7. ಪರಶಿವಮೂರ್ತಿ, ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ(2002). ಪ್ರಸಾರಾಂಗ,ಕನ್ನಡ ವಿಶ್ವವಿದ್ಯಾಲಯ, ಹಂಪಿ.
8. ಪ್ರಶಾಂತ ಎಂ.ಜೆ.,ಕನಕದಾಸರ ಹಾಡುಗಳು(1980). ಪಿ.ಸಿ.ಶಾಬಾದಿಮಠ ಬುಕ್ ಡಿಪೋ, ಗದಗ.
9. ವೆಂಕಟರಾವ್(ಅನು),ಕೊನೆಯ ಬ್ರಾಹ್ಮಣ(2006).ಅಕ್ಷರ ಪ್ರಕಾಶನ, ಸಾಗರ. ಹೆಗ್ಗೋಡು ಕರ್ನಾಟಕ.
10. ರಾಮಚಂದ್ರರಾವ್,ಸಾ.ಕೃ.ಭಾರತದ ದೇವಾಲಯ ನೆಲೆ_ಹಿನ್ನೆಲೆ(2005). ಸುರಮಾ ಪ್ರಕಾಶನ, ಪ್ರೊ.ಸಾ.ಕೃ.ರಾಮಚಂದ್ರರಾವ್ ಸ್ಮಾರಕ ನಿಧಿ, ಬೆಂಗಳೂರು.
11. ಹಿರೇಮಠ,ಎಸ್.ಎಸ್.ಕರ್ನಾಟಕ ದಲಿತ ಪರಂಪರೆ: ಜಾತ್ರೆಗಳು.(1996). ಸಮತಾ ಪ್ರಕಾಶನ ಹೊಸಪೇಟೆ.

(ದಿ.10.10.2014ರಂದು ವಾಣಿ ಸಕ್ಕರೆ ಸರಕಾರಿ ಪ್ರಥಮ ದರ್ಜೆ ಕಾಲೇಜು, ಹಿರಿಯೂರು, ಚಿತ್ರದುರ್ಗ ಇಲ್ಲಿ ಮಂಗಳೂರು ವಿಶ್ವವಿದ್ಯಾಲಯದ ಕನಕದಾಸ ಸಂಶೋಧನ ಕೇಂದ್ರದ ಆಶ್ರಯದಲ್ಲಿ ನೀಡಿದ ವಿಶೇಷ ಉಪನ್ಯಾಸದ ಬರಹ ರೂಪ.)

******

ಮರಳಿ ಬಂದ ದಾರಿಯೆಡೆಗೆ
ಹೊರಳಿಸು ನಿನ ಕಣ್ಣಾ
ಮರೆಯಬೇಡ ಹೆಜ್ಜೆಯಿಳಿದ
ಮರಳಿನ ಹುಡಿ ಮಣ್ಣಾ

ತಾತ್ತ್ವಿಕ ಪಠ್ಯವಾಗಿ ಕಾದಂಬರಿ : ಭೈರಪ್ಪನವರ ಧರ್ಮಶ್ರೀಯನ್ನು ಲಕ್ಷ್ಯದಲ್ಲಿ ಇರಿಸಿಕೊಂಡು ವಿಶ್ಲೇಷಣೆ

ಪಿ.ಬಿ. ಪ್ರಸನ್ನ
ಸಹ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಹಳೆಯಂಗಡಿ, ದ.ಕ.

ಸಾಹಿತ್ಯದ ಯಾವುದೇ ಪ್ರಕಾರದ ಬರವಣಿಗೆಯು ಒಂದು ಭಾಷಿಕ ಪಠ್ಯವಾಗಿದೆ. ಅಂತೆಯೇ ಕಾದಂಬರಿಯನ್ನೂ ಕೂಡ ಒಂದು ಭಾಷಿಕ ಪಠ್ಯವನ್ನಾಗಿಯೇ ಗ್ರಹಿಸಲಾಗುತ್ತದೆ. ಒಂದು ಸಾಹಿತ್ಯ ಪಠ್ಯ ಇದ್ದಕ್ಕಿದ್ದಂತೆ ರೂಪುಗೊಳ್ಳುವುದಿಲ್ಲ. ಅದು ತನ್ನ ಕಾಲದ ರಾಜಕೀಯ, ಸಾಂಸ್ಕೃತಿಕ, ಆರ್ಥಿಕವೇ ಮೊದಲಾದ ಕಾರಣಗಳಿಂದ ರಚಿತವಾಗುತ್ತದೆ. ಹಾಗಾಗಿ ಒಂದು ಕೃತಿಯನ್ನು ಅಧ್ಯಯನ ಮಾಡುವಾಗ ಅದರ ಮೇಲೆ ಆಗಿರುವ ಸಾಂಸ್ಕೃತಿಕ, ರಾಜಕೀಯ, ಆರ್ಥಿಕವೇ ಮೊದಲಾದ ಪ್ರೇರಣೆಗಳನ್ನು ಲಕ್ಷ್ಯದಲ್ಲಿ ಇರಿಸಿಕೊಂಡು ವಿಶ್ಲೇಷಿಸುವುದು ಮುಖ್ಯ.[1]

ನವ್ಯದ ವಿಮರ್ಶೆ ಪರಂಪರೆ, ವ್ಯಕ್ತಿ ಪ್ರತಿಭೆ, ವ್ಯಕ್ತಿಯ ಸ್ವೋಪಜ್ಞತೆ ಇತ್ಯಾದಿಗಳ ಬಗ್ಗೆ ಮಾತನಾಡುತ್ತಿತ್ತು. ಪಠ್ಯವನ್ನು ಮಾತ್ರ ಗ್ರಹಿಸಿ ಪಾತ್ರ ವಿಶ್ಲೇಷಣೆ, ವಾಕ್ಯಗಳ ಅರ್ಥ ವಿನ್ಯಾಸ ಇತ್ಯಾದಿಗಳನ್ನು ವಿಶ್ಲೇಷಿಸುವ ಪ್ರವೃತ್ತಿ ಕನ್ನಡದ ನವೋದಯ, ನವ್ಯದ ಪರಂಪರೆಯಲ್ಲಿ ಕಂಡುಬಂತು. ಆದರೆ ಭಾಷಿಕ ಪಠ್ಯವಾಗಿರುವ ಒಂದು ಕಲಾಕೃತಿ ತನ್ನ ಭಾಷಿಕ ಕಾಯಕದಿಂದಲೇ ಅರ್ಥಗಳನ್ನು ಒದಗಿಸುವುದಿಲ್ಲ. ಕಾಲಕಾಲಕ್ಕೆ ಅದರ ಜೊತೆಗೆ ನಡೆಸುವ ಸಂವಾದ, ಪ್ರತಿಕ್ರಿಯೆಗಳು ಸಾಮಾಜಿಕ ದೇಶ ಕಾಲಗಳ (Space and time) ಅರ್ಥಗಳನ್ನು ಒದಗಿಸುತ್ತವೆ ಎನ್ನುವ ಮಾತು ಮುಖ್ಯ ಎನಿಸುತ್ತದೆ.[2] ಈ ಮಾತನ್ನು ವಿಶ್ಲೇಷಿಸುವುದಾದರೆ ಒಂದು ಕಾದಂಬರಿ ಅಥವಾ ಒಂದು ಕತೆಯ ಪಠ್ಯ ತಾನು ರಚಿತವಾದ ಕಾಲಘಟ್ಟದ ಸಂದರ್ಭದಲ್ಲಿ ಯಾವ ವಾದಗಳನ್ನು ಹುಟ್ಟು ಹಾಕಿತು? ಎಂಥ ಸಂವಾದಗಳನ್ನು ಸೃಷ್ಟಿಸಿತು? ಕಾಲದ ನಂತರದ ಮರು ಓದಿನಲ್ಲಿ ಯಾವೆಲ್ಲ ಪ್ರಶ್ನೆಗಳನ್ನು ಹುಟ್ಟು ಹಾಕುತ್ತವೆ? ಎನ್ನುವ ಅಂಶಗಳು ಮುಖ್ಯ. ಈ ಹಿನ್ನೆಲೆಯೊಂದಿಗೆ ಎಸ್.ಎಲ್.ಭೈರಪ್ಪನವರ ಧರ್ಮಶ್ರೀ ಕಾದಂಬರಿಯನ್ನು ರಾಜಕೀಯ, ಸಾಂಸ್ಕೃತಿಕ ಪ್ರೇರಣೆಗಳ ಮೂಲಕ ವಿಶ್ಲೇಷಿಸಲು ಯತ್ನಿಸಲಾಗುವುದು.

1925ರಲ್ಲಿ ಸ್ಥಾಪಿತವಾಗಿದ್ದ ರಾಷ್ಟ್ರೀಯ ಸ್ವಯಂ ಸೇವಕ ಸಂಘವು ದೇಶದ ಗತಕಥನವನ್ನು ಆಧಾರವಾಗಿಟ್ಟುಕೊಂಡು 'ರಾಷ್ಟ್ರ' ಎನ್ನುವ ಒಂದು ಗ್ರಹಿಕೆಯನ್ನು ನಿರೂಪಿಸಿತು.[3] ಹಾಗೆ ನಿರೂಪಿಸುವಾಗ ಹಿಂದೂ ಎಂಬ ಸನಾತನ ಧರ್ಮದ ಮರು ನಿರೂಪಣೆ ಇತ್ಯಾದಿಗಳೆಲ್ಲವೂ ಲಕ್ಷ್ಯದಲ್ಲಿದ್ದವು ಎನ್ನುವುದು ಗಮನಾರ್ಹವಾಗುತ್ತದೆ.

ಆರ್.ಎಸ್.ಎಸ್.ನ ಮುಖ್ಯ ಗುರು ಗೋಳವಾಲ್ಕರ್ ಅವರಲ್ಲಿ ಕ್ರಿಶ್ಚಿಯನ್ ಧರ್ಮ ಉಪಾಯವಾಗಿ ಭಾರತೀಯರನ್ನು ಮತಾಂತರಕ್ಕೆ ಒಳಪಡಿಸುವಂಥದ್ದು ಎನ್ನುವ ಗ್ರಹಿಕೆ ಬಲವಾಗಿತ್ತು. ಇಂಥ ಪರಿಕಲ್ಪನೆಗಳು ಸ್ವಾತಂತ್ರ್ಯಪೂರ್ವದಲ್ಲಿಯೇ ಸ್ವ–ಮತ್ತು ಅನ್ಯ ಗ್ರಹಿಕೆಗಳ ರೂಪಕಗಳಾಗಿ ಒಡಮೂಡಿದ್ದವು. ಗೋಳವಾಲ್ಕರ್ ಅವರ Bunch of Thoughts

ಕೃತಿಯ ಹೆಚ್ಚಿನ ಲೇಖನಗಳು ಈ ಅಂಶವನ್ನು ಪುಷ್ಟೀಕರಿಸುತ್ತವೆ.

ಸ್ವಾತಂತ್ರ್ಯಾನಂತರದಲ್ಲಿ ನೆಹರೂ ಸರ್ಕಾರ ಎತ್ತಿಕೊಂಡ ಸೆಕ್ಯುಲರ್ ಸಿದ್ಧಾಂತಗಳು ಆರ್.ಎಸ್.ಎಸ್.ನ ಅನುಯಾಯಿಗಳಿಗೆ ಸರಿಕಂಡುಬರಲಿಲ್ಲ. ನೆಹರೂ ಸೇರಿದಂತೆ ಸೆಕ್ಯುಲರ್ ವಾದಗಳು ಒಂದು ರೀತಿಯ ಇಬ್ಬಂದಿತನದ ವ್ಯವಹಾರಕ್ಕೆ ಇಳಿದುದನ್ನು ಗೋಳವಾಲ್ಕರ್ ತರಹದವರು ಖಂಡಿಸಿದರು.[4] ಆರ್.ಎಸ್.ಎಸ್. ಅರುವತ್ತರ ದಶಕಕ್ಕೂ ಹಿಂದೆಯೇ ಸಮಾಜವಾದಿಗಳ, ಮಾರ್ಕ್ಸ್‌ವಾದಿಗಳ ಸೆಕ್ಯುಲರ್ ನೀತಿಯನ್ನು ಅನುಮಾನದಿಂದ ನೋಡಿತು ಮತ್ತು ಆ ರೀತಿಯಾಗಿ ಚಿಂತಿಸುವವರನ್ನು ಅನ್ಯದೇಶೀಯ ಚಿಂತನೆಗಳನ್ನು ಬೆಂಬಲಿಸುವವರು ಎಂದು ತಿರಸ್ಕಾರದ ದೃಷ್ಟಿಕೋನದಿಂದ ನೋಡತೊಡಗಿತು.

ವಸಾಹತು ಆಳ್ವಿಕೆಯಿಂದ ಬಿಡುಗಡೆ ಹೊಂದಿದ ತಕ್ಷಣ ರಾಷ್ಟ್ರೀಯ ನೀತಿ ಹೇಗಿರಬೇಕು? ಎಂಬುದರ ಕುರಿತಾಗಿ ದ್ವಂದ್ವದ ಸ್ಥಿತಿ ಆ ಕಾಲಘಟ್ಟದಲ್ಲಿ ಮೂಡಿದ್ದು ಸಹಜವೇ ಆಗಿದೆ. ಶಿಕ್ಷಣ ಮಾಧ್ಯಮವಾಗಿ ಆದಾಗಲೇ ತಳ ಊರಿದ್ದ ಇಂಗ್ಲಿಷ್ ಭಾಷೆಯು ದೇಶದ ಸಾಂಸ್ಕೃತಿಕ ಪಲ್ಲಟಗಳಿಗೆ ಕಾರಣವಾಗಿತ್ತು. ಇಂಗ್ಲಿಷ್ ಶಿಕ್ಷಣ ಪಡೆದ ಆಧುನಿಕರು ಅದರಲ್ಲೂ ಮೇಲ್ವರ್ಗ ದವರು ಸಂಪ್ರದಾಯವಾದಿಗಳಾಗಬೇಕೋ, ಸನಾತನವಾದಿಗಳಾಗ ಬೇಕೋ ಅಥವಾ ಆಧುನಿಕವಾದಿಗಳಾಗಬೇಕೋ ಎಂಬ ಗೊಂದಲಕ್ಕೆ ಒಳಗಾದರು. ಕೈಗಾರಿಕೀಕರಣ ಎನ್ನುವುದು ಆದಾಗಲೇ ಆಧುನಿಕತೆಯೊಂದಿಗೆ ತಳಕು ಹಾಕಿಕೊಂಡು ಜನರ ಮನಸ್ಸನ್ನು ಗೊಂದಲಕ್ಕೆ ತಳ್ಳಿತು. ಆಧುನಿಕತೆ ಪರಂಪರೆಯನ್ನು ನಾಶಗೊಳಿಸುತ್ತದೆ ಎನ್ನುವ ಪರಿಕಲ್ಪನೆ ಗಟ್ಟಿಗೊಂಡಿತು.

ಸ್ವಾತಂತ್ರ್ಯ ಪೂರ್ವದಲ್ಲಿ ರಾಷ್ಟ್ರವನ್ನು ಕಟ್ಟುವ ಸಂಸ್ಕೃತಿ ಚಿಂತನೆಯ ಬರಹಗಳನ್ನು ಬರೆದವರಲ್ಲಿ ಆನಂದ ಕುಮಾರಸ್ವಾಮಿ ಅವರು ಕೂಡ ಪ್ರಮುಖರು. ಧರ್ಮಶ್ರೀ ಕಾದಂಬರಿಯಲ್ಲಿ ಭೈರಪ್ಪನವರು ಆನಂದ ಕುಮಾರಸ್ವಾಮಿ ಅವರ ಚಿಂತನೆಯ ಮಾತುಗಳನ್ನು ಉಲ್ಲೇಖಿಸಿದ್ದಾರೆ. ಮುಖ್ಯವಾಗಿ ಅವರ Dance of Shiva ಕೃತಿಯಲ್ಲಿರುವ 'Status of Indian Women' ಲೇಖನದ ಪ್ರಸ್ತಾಪ ಬರುತ್ತದೆ. ಆ ಲೇಖನವನ್ನು ಓದಿ ಅದರಂತೆ ಬದುಕಬೇಕೆಂದು, ಸತ್ಯನಾರಾಯಣ ಲಿಲ್ಲಿಗೆ ತಿಳಿಸುತ್ತಾನೆ. ಭಾರತದಲ್ಲಿ ಹೆಣ್ಣಿನ ಬಗೆಗೆ ಇರುವ ಸಾಂಪ್ರದಾಯಿಕ ತಿಳುವಳಿಕೆಗಳನ್ನು ಗಮನಿಸಬೇಕೆಂದೂ ಆತ ತಿಳಿಸುತ್ತಾನೆ.[5]

ಆನಂದ ಕುಮಾರಸ್ವಾಮಿ ಅವರ ಈ ಲೇಖನವೂ ಸೇರಿದಂತೆ ಹಲವಾರು ಬರಹಗಳಲ್ಲಿ ಭಾರತದ ಸಾಮಾಜಿಕ ಜೀವನವನ್ನು ಗತದ ನೆಲೆಯಿಂದ ಕಟ್ಟುವ ಗ್ರಹಿಕೆಗಳು ವ್ಯಕ್ತವಾಗಿವೆ. 'Status of Indian Women' ಲೇಖನದಲ್ಲಿ ಭಾರತೀಯ ಹೆಣ್ಣುಗಳು ಮೂಲತಃ ಮಾತೃ ಸ್ವರೂಪವನ್ನು ಹೊಂದಿದವರು. ಹುಟ್ಟಾ ತಾಯ್ತನದ ಪ್ರವೃತ್ತಿ ಅವರಲ್ಲಿ ಇರುತ್ತದೆ ಎಂದು ವಿವರಿಸಿದ್ದಾರೆ. ಪೌರಾಣಿಕ, ಐತಿಹಾಸಿಕ ಆಕರಗಳಿಂದ ವಿವರಿಸುವ ಅವರು ಇಂಗ್ಲಿಷ್ ವಿದ್ಯಾಭ್ಯಾಸ ಎನ್ನುವುದು ಭಾರತೀಯ ಸಮಾಜದ ಕ್ಲೈಬ್ಯಕ್ಕೆ ಕಾರಣವಾಗಿದೆ. ಮಾತ್ರವಲ್ಲ ಕುಟುಂಬ ವ್ಯವಹಾರದ ಸೂಕ್ಷ್ಮ ಸಂಬಂಧಗಳನ್ನು ಹಾಳುಗೆಡವಿದೆ ಎಂಬ ನಿಲುವನ್ನು ವ್ಯಕ್ತಪಡಿಸಿದ್ದಾರೆ.[6]

ಕುಟುಂಬ, ಸಮಾಜ, ಬದುಕು ಇತ್ಯಾದಿಗಳೆಲ್ಲವೂ ಸೌಂದರ್ಯಾನುಭವದ ಹಿನ್ನೆಲೆಯಲ್ಲಿ ಆನಂದ ಕುಮಾರಸ್ವಾಮಿ ಅಂಥವರಿಂದ ವಿಶ್ಲೇಷಿಸಲ್ಪಡುತ್ತವೆ. ಸೌಂದರ್ಯತತ್ತ್ವದ ಪ್ರಕಟವು ಜೀವನದ ಎಲ್ಲ ವಿವರಗಳಲ್ಲೂ ನಿರಂತರವಾಗಿರಬೇಕು ಎಂದು ಪ್ರತಿಪಾದಿಸಿದ್ದಾರೆ.[7]

'ರಸಾನುಭವ ಎನ್ನುವುದು ಹಿಂದೂ ಕೃತಿಕಾರನಿಗೆ ಓದಿನಿಂದ ಸಿದ್ಧಿಯಾಗುವಂಥದಲ್ಲ. ಅದು ಪೂರ್ವಜನ್ಮದ ಸುಕೃತ ಫಲ'[8] ಎನ್ನುವ ನಿಲುವಿಗೆ ಬರುತ್ತಾರೆ. ಆನಂದ ಕುಮಾರಸ್ವಾಮಿ ಅವರ ಇಂಥ ಗ್ರಹಿಕೆಗಳು ಉದಾರ ಮಾನವತಾವಾದದ ಗ್ರಹಿಕೆಗಳ ರೂಪಗಳಾಗಿ ಕಂಡುಬರುತ್ತವೆ. ಇಂಥ ಗ್ರಹಿಕೆಗಳು ಧರ್ಮಶ್ರೀ ಕಾದಂಬರಿಯ ಹಿನ್ನೆಲೆಯಲ್ಲಿ ಮಹತ್ತ್ವದ ಕೆಲಸವನ್ನು ಮಾಡಿವೆ.

ಭಿತ್ತಿಯಲ್ಲಿ ಸ್ವತಃ ಲೇಖಕರಾದ ಎಸ್.ಎಲ್. ಭೈರಪ್ಪನವರೇ ಪಾದರಿಗಳಾದ ಉತ್ತಂಗಿ ಚನ್ನಪ್ಪನವರು ನಿರೂಪಿಸಿದ ಕ್ರೈಸ್ತ ಮತ ಪ್ರಚಾರದ ಮಾತುಗಳಿಗೆ ವಿರುದ್ಧವಾಗಿ ಆರ್ಯ ಸಮಾಜದವರ ಕೋರಿಕೆಯಂತೆ ತಾವು ಹಿಂದುತ್ವದ ಬಗೆಗೆ ಹೇಗೆ ಬರೆದುಕೊಡಬೇಕಾಯಿತು ಎಂಬುದನ್ನು ವಿವರಿಸಿದ್ದಾರೆ. ನಂತರ ತಾನು ಹುಬ್ಬಳ್ಳಿಯಲ್ಲಿ ಗಂಗೂಬಾಯಿ ಹಾನಗಲ್ ಅವರ ಬಳಿ ಸಂಗೀತ ಅಭ್ಯಾಸ ಮಾಡಿದ್ದು, ಆ ಮೂಲಕ ನಾದಜ್ಞಾನವನ್ನು ಪಡೆದುಕೊಂಡದ್ದು ಇತ್ಯಾದಿಗಳನ್ನು ವಿವರಿಸಿದ್ದಾರೆ. ಅದರ ಫಲವೇ ಧರ್ಮಶ್ರೀ ಕಾದಂಬರಿ[9] ಎಂದು ವಿವರಿಸಿದ್ದಾರೆ.

ಒಟ್ಟಾರೆಯಾಗಿ ಇಂಥ ಪ್ರೇರಣೆ ಪ್ರಭಾವಗಳಿಂದ ಮೂಡಿದ್ದ ಧರ್ಮಶ್ರೀ ಕಾದಂಬರಿ ಯನ್ನು ಅಂದಿನಿಂದ ಇಂದಿನವರೆಗೆ ಪಠ್ಯವನ್ನು ಮಾತ್ರ ನೋಡಿ ಅಭ್ಯಸಿಸಿ ವಿವರಿಸಿದ ವಿಶ್ಲೇಷಿಸಿದ ಪ್ರಯತ್ನಗಳು ಕಂಡು ಬರುತ್ತವೆ. ಲೀಲಾವತಿ ತೋರಣಗಟ್ಟಿ ಅವರ 'ಎಸ್.ಎಲ್. ಭೈರಪ್ಪನವರ ಕಾದಂಬರಿಗಳಲ್ಲಿ ಬೌದ್ಧಿಕ ಸಾಹಚರ್ಯ'(1972) ಕೃತಿಯಿಂದ ಪ್ರಾರಂಭಿಸಿ ಇತ್ತೀಚೆಗಿನ ಡಾ.ಕೆ.ಎಲ್.ಗೋಪಾಲಕೃಷ್ಣಯ್ಯನವರ 'ಎಸ್.ಎಲ್.ಭೈರಪ್ಪನವರ ಕಾದಂಬರಿ ಗಳೊಡನೆ ಧರ್ಮ ಕರ್ಮ ಜಿಜ್ಞಾಸೆ'(2011) ಕೃತಿಗಳವರೆಗೆ ಧರ್ಮಶ್ರೀ ಯನ್ನು ಕೃತಿನಿಷ್ಠ ರೀತಿಯಲ್ಲಿ ವಿಮರ್ಶಿಸಿರುವುದನ್ನು ನಾವು ಕಾಣಬಹುದು. ಸ್ವಲ್ಪಮಟ್ಟಿಗೆ ಡಾ.ಕೆ.ಎಲ್. ಗೋಪಾಲಕೃಷ್ಣಯ್ಯ ಅವರು ಧರ್ಮಶ್ರೀಯ ವಿಶ್ಲೇಷಣೆಯ ಪ್ರಾರಂಭದಲ್ಲಿ ಹಿಂದುತ್ವದ ಉಗಮದ ಕುರಿತು ಚರ್ಚಿಸಿದ್ದಾರೆ.[10] ಉಳಿದಂತೆ ಎಲ್ಲ ಅಧ್ಯಯನಗಳು ಪಠ್ಯನಿಷ್ಠ ಅಥವಾ ಆಕರನಿಷ್ಠ ಅಧ್ಯಯನಗಳಾಗಿವೆ.

ಮೇಲ್ನೋಟಕ್ಕೆ ಧರ್ಮಶ್ರೀ ಕಾದಂಬರಿ ಪ್ರಣಯದ ಬದುಕಿನ, ದಾಂಪತ್ಯದ ಆಗು ಹೋಗಿನ, ವಿಭಿನ್ನ ಸಂಸ್ಕೃತಿಗಳ ಸಂಘರ್ಷವನ್ನು ಬಿಂಬಿಸುವ ಕಾದಂಬರಿಯಾಗಿದೆ.[11] ಆದರೆ ಧರ್ಮಶ್ರೀಯಲ್ಲಿ ಸಿದ್ಧಗೊಂಡ ಪಾತ್ರಗಳ ಮಾದರಿ ಎಂಥದು? ಅವುಗಳು ಎತ್ತಿಕೊಳ್ಳುವ ಸಾಂಸ್ಕೃತಿಕ ಸಂಘರ್ಷಗಳನ್ನು ಗ್ರಹಿಸಬೇಕೆ? ಇವು ಕೇವಲ ಕಲಾಕೃತಿಯ ಮೂಲಕ ಕಾದಂಬರಿಕಾರ ಎತ್ತುವ ಸಾಂಸ್ಕೃತಿಕ ಸಂಘರ್ಷದ ಚಿತ್ರಣವೇ? ಅಥವಾ ಕುಟುಂಬ ವಾತ್ಸಲ್ಯದ ಚಿತ್ರಣವೆಂದು ಗ್ರಹಿಸಬೇಕೆ? ಎನ್ನುವುದು ಸಮಸ್ಯೆಯಾಗಿದೆ. ಪ್ರಬಂಧದ ಪ್ರಾರಂಭದಲ್ಲಿಯೇ ತಿಳಿಸಿದಂತೆ ಕಾದಂಬರಿಯ ಮೇಲೆ ಆದ ಪ್ರೇರಣೆಗಳನ್ನು ಲಕ್ಷ್ಯದಲ್ಲಿ ಇರಿಸಿ ವಿಶ್ಲೇಷಿಸಿದರೆ ಧರ್ಮಶ್ರೀಯು ಅಂದು ಹುಟ್ಟು ಹಾಕಿದ ವಾಗ್ವಾದ ಎಂಥದ್ದು? ಆ ಕೃತಿ ಪ್ರಕಟವಾಗಿ ಐವತ್ತನಾಲ್ಕು ವರ್ಷಗಳು ಸಂದ ಬಳಿಕವೂ ಹುಟ್ಟು ಹಾಕುವ ವಾಗ್ವಾದಗಳು ಎಂಥವು? ಎನ್ನುವುದು ತಿಳಿಯುತ್ತದೆ.

ಬ್ರಾಹ್ಮಣನಾದ ಸತ್ಯನಾರಾಯಣ ವಿದ್ಯಾಭ್ಯಾಸಕ್ಕೆ ಎಂದು ಮೈಸೂರಿಗೆ ಬಂದಾಗ ಶಂಕರ ಹಾಗೂ ಇತರರ ಮೂಲಕ ರಾಷ್ಟ್ರೀಯ ಸ್ವಯಂ ಸೇವಕ ಶಾಖೆಯ ಪ್ರಭಾವಕ್ಕೆ ಒಳಗಾಗುತ್ತಾನೆ. ಅವನಲ್ಲಿ ಹಿಂದೂ ಧರ್ಮದ ಕುರಿತಾದ ಆಲೋಚನೆಗಳು ಗಟ್ಟಿಗೊಳ್ಳುತ್ತವೆ. ಕಾಲಾನಂತರದಲ್ಲಿ ಆತ ಲಿಲ್ಲಿ ಎನ್ನುವಾಕೆಯನ್ನು ಪ್ರೀತಿಸಿ ಮದುವೆ ಆಗಬೇಕಾದ

ಸಂದರ್ಭ ಬಂದಾಗ ಆತ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದುವುದು ಅನಿವಾರ್ಯ ವಾಗುತ್ತದೆ. ನಂತರದಲ್ಲಿ ಆತ ಪಾಪ ಪ್ರಜ್ಞೆಯಿಂದ ಬಳಲುತ್ತಾನೆ. ಪರಿಣಾಮವಾಗಿ ಆತ ಮರಳಿ ಆರ್ಯ ಸಮಾಜದ ರೀತ್ಯಾ ಹಿಂದೂಧರ್ಮಕ್ಕೆ ಮರಳುತ್ತಾನೆ. ಹೆಂಡತಿ ಧರ್ಮಶ್ರೀ ಎಂದಾಗುತ್ತಾಳೆ. ಇದಿಷ್ಟು ಕಾದಂಬರಿಯ ಸ್ಥೂಲ ಚೌಕಟ್ಟು.

ಈಗಾಗಲೇ ಪ್ರಸ್ತಾಪಿಸಿದಂತೆ ಹಿಂದೂ ಎಂಬ ಒಂದು 'ಆದರ್ಶವಾದ ಜೀವನ ಪದ್ಧತಿಯನ್ನು' ಕ್ರಿಶ್ಚಿಯನ್ ಧರ್ಮದ ಎದುರು ಲೇಖಕರು ಮುಖಾಮುಖಿಯಾಗಿಸಿದ್ದಾರೆ. ಹಿಂದೂ ಹೆಣ್ಣು ಗಂಡನ್ನು, ಗಂಡು ಮಕ್ಕಳನ್ನು ತುಂಬ ಗೌರವದಿಂದ ಕಾಣುತ್ತಾಳೆ ಎನ್ನುವ ಮಾತುಗಳು ಬರುತ್ತವೆ. ಆದರೆ ನಿರೂಪಕನು ತನಗೆ ಸಾಮಾಜಿಕವಾಗಿ ಗಂಡಿಗೆ ಸಿಗಬೇಕಾದ ಸ್ಥಾನ ಸಿಗುತ್ತಿಲ್ಲ ಎನ್ನುವ ಭಾವನೆಯನ್ನು ವ್ಯಕ್ತಪಡಿಸುತ್ತಾನೆ.

'ಸತ್ಯ ಎಂಬ ಹೆಸರಿನಿಂದ ಆಕೆ ಕರೆದಿಲ್ಲ. ಲೋ ಎಂದೇ ಕೂಗುತ್ತಿದ್ದಳು. ಹಿಂದೂ ಸಂಪ್ರದಾಯದಲ್ಲಿ ಗಂಡು ಮಕ್ಕಳ ಕೈಲಿ ಮಾಡಿಸಬಾರದ ಕೆಲಸಗಳಾದ ಊಟದ ಎಲೆ ತೆಗೆಯುವುದು, ಬೀಸುವುದು, ಕುಟ್ಟುವುದು ಎಲ್ಲವನ್ನೂ ನನ್ನಿಂದ ಮಾಡಿಸುತ್ತಿದ್ದಳು.'[12] ಎನ್ನುವಂಥ ಮಾತುಗಳು ಹೆಣ್ಣು ಎಂದರೆ ಆದರ್ಶವಾಗಿರಬೇಕು ಎನ್ನುವುದನ್ನು ಮರಳಿ ಸ್ಥಾಪಿಸುವಂಥವಾಗಿವೆ. ಕಾದಂಬರಿಯ ಉದ್ದಕ್ಕೂ ಸತ್ಯನಾರಾಯಣನು, ರಾಚಮ್ಮ ಹಾಗೂ ಲಿಲ್ಲಿಯನ್ನು ಸಾಂಸ್ಕೃತಿಕ ನೆಲೆಯಿಂದ ವಿಮರ್ಶಿಸುತ್ತಾನೆ. ಮಾತ್ರವಲ್ಲ ಹಿಂದೂ ಹೆಣ್ಣು ಎಂದರೆ ಆದರ್ಶದ ಪ್ರತಿರೂಪ ಎಂದು ಸಿದ್ಧವಾದ ಮಾದರಿಯ ರೀತಿಯಲ್ಲೇ ಆಕೆಯನ್ನೂ ಕೂಡ ನೋಡಲು ಇಚ್ಛಿಸುತ್ತಾನೆ. ಹಾಗಾಗಿಯೇ

'ನೀನು ಯಾಕೆ ಹಣೆಗೆ ಕುಂಕುಮ ಇಡುಲ್ಲ?' ಎಂದು ಪ್ರಶ್ನಿಸುತ್ತಾನೆ.[13] ಇದು ಒಂದು ಉದಾಹರಣೆ ಮಾತ್ರ. ಕಾದಂಬರಿಯಲ್ಲಿ ಲಿಲ್ಲಿಯನ್ನು ಚಿತ್ರಿಸುವಾಗ ಆಕೆಯನ್ನು ಅನ್ಯಸಂಸ್ಕೃತಿಯನ್ನು ಪ್ರತಿನಿಧಿಸುವವಳು ಎಂದು ಚಿತ್ರಿಸಿರುವುದು ಕಂಡು ಬರುತ್ತದೆ. ಹಿಂದೂ ಜೀವನ ಪದ್ಧತಿ, ಅವರ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಆಕೆ ಆನಂದ ಕುಮಾರಸ್ವಾಮಿ ಅಂಥವರ ಪುಸ್ತಕಗಳನ್ನು ಓದಿ ಗ್ರಹಿಸಿಕೊಳ್ಳುತ್ತಾಳೆ. ಆಗ ಅವಳಲ್ಲಿರುವ ಅಸಹನೆಯ ಸ್ವಭಾವ ಕೂಡ ಕಡಮೆ ಆಗುತ್ತದೆ.

ಬ್ರಾಹ್ಮಣ ಅಥವಾ ಮೇಲ್ಜಾತಿ ವರ್ಗದವರು ಕ್ರಿಶ್ಚಿಯನ್ ಪಾದರಿಗಳ ಮತ ಪ್ರಚಾರದ ಕೆಲಸಗಳನ್ನು ಅನುಮಾನದಿಂದ ನೋಡಿದ ವಿವರಗಳು ಕತೆಗೆ ಪೂರಕವಾಗಿ ಬರುತ್ತವೆ. ಆ ಎಲ್ಲ ಮಾತುಗಳು ಹಿಂದೂಗಳನ್ನು ಕ್ರಿಶ್ಚಿಯನ್ನರು ಮತಾಂತರ ಮಾಡುತ್ತಾರೆ ಎಂಬ ಹಿನ್ನೆಲೆಯಿಂದ ಬಂದಂಥವಾಗಿವೆ.[14] ಕ್ರೈಸ್ತ ಮಿಷನರಿಗಳು ಮತಾಂತರ ಮಾಡುವ ಸಾಂಸ್ಕೃತಿಕ ಬಿಕ್ಕಟ್ಟನ್ನು ವಿವರಿಸುತ್ತ ಹಿಂದೂ ಧರ್ಮಕ್ಕೆ ಇದರಿಂದ ಧಕ್ಕೆ ಆಗಿದೆ ಎಂಬುದನ್ನು ನಿರೂಪಿಸುತ್ತದೆ.[15]

ಆಧುನಿಕತೆಯು ಇಂಗ್ಲಿಷ್ ವಿದ್ಯಾಭ್ಯಾಸದ ಮೂಲಕ ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಹೊಸ ಯುವಕರಲ್ಲಿ ವಿಸ್ಮೃತಿಯನ್ನು ಮೂಡಿಸುತ್ತಿದೆ ಎನ್ನುವ ಮಾತುಗಳು ಗಮನಾರ್ಹ.[16] ರಾಷ್ಟ್ರದ ಸಂಸ್ಕೃತಿಯ ಅರಿವು ಎನ್ನುವುದು ಶಿವಾಜಿ, ಗೋಳವಾಲ್ಕರ್, ಹೆಡಗೆವಾರ್, ರಾಣಾಪ್ರತಾಪ್, ಗುರುಗೋವಿಂದಸಿಂಹ ಮೊದಲಾದವರ ಜೀವನ ಚರಿತ್ರೆಯನ್ನು ತಿಳಿದು ಕೊಳ್ಳುವುದರಿಂದ ಸಾಧ್ಯ ಎನ್ನುವ ಅಂಶವನ್ನು ಕಾದಂಬರಿಯಲ್ಲಿ ಗಟ್ಟಿಗೊಳಿಸಲಾಗಿದೆ. ರಾಷ್ಟ್ರವೆಂದರೆ ಜನಾಂಗದೊಂದಿಗೆ ನಿರ್ಮಾಣಗೊಳ್ಳಬೇಕು ಎನ್ನುವ ಗ್ರಹಿಕೆಗಳ ಮಾದರಿಯೇ[17]

ಶಂಕರನ ಮಾತುಗಳಲ್ಲಿ ವ್ಯಕ್ತವಾಗಿದೆ. 'ನನ್ನ ರಾಷ್ಟ್ರವೆಂದರೆ ಕೇವಲ ಭೌಗೋಳಿಕ ವಿಸ್ತಾರವಲ್ಲ. ಅದು ಒಂದೆರಡು ದಿನದಲ್ಲಿ ಆದ ಸಿದ್ಧವಸ್ತುವಲ್ಲ. ಅದಕ್ಕೆ ಒಂದು ಇತಿಹಾಸಬೇಕು. ಉಜ್ವಲ ಪರಂಪರೆ ಬೇಕು. ಜೀವಂತ ಸಂಸ್ಕೃತಿ ಬೇಕು. ಮೇಲಾಗಿ ಜೀವನದ ಮೌಲ್ಯಗಳಲ್ಲಿ ತನ್ನತನವಿರಬೇಕು. ಇವೆಲ್ಲವನ್ನೂ ಒಳಗೊಂಡಿರುವುದೇ ರಾಷ್ಟ್ರ'[18] ಎನ್ನುವಂಥ ಮಾತುಗಳು ರಾಷ್ಟ್ರ ನಿರ್ಮಾಣಕ್ಕೆ ಗತದ ಮರುರೂಪಣೆ ಅಗತ್ಯ ಎಂಬುದನ್ನು ಗಟ್ಟಿಗೊಳಿಸುತ್ತವೆ.

ಹೀಗಾಗಿಯೇ ಸತ್ಯನಾರಾಯಣ ಲಿಲ್ಲಿಯನ್ನು ಮದುವೆಯಾದ ನಂತರದಲ್ಲಿ ತನ್ನ ಬದುಕಿನ ಗತದ ನೆನಪುಗಳೊಂದಿಗೆ ಸಂಘರ್ಷಕ್ಕೆ ಇಳಿಯುತ್ತಾನೆ. ತೀರಿಕೊಂಡ ತಂದೆಯ ವೈದಿಕ ಮಾಡಲಾಗದೇ ಇರುವ ಕಾರಣದಿಂದ ಮಾನಸಿಕ ತುಮುಲಕ್ಕೆ ಒಳಗಾಗುತ್ತಾನೆ. ಮರಳಿ ಹಿಂದು ಆಗಬೇಕು ಎನ್ನುವ ಹಂಬಲ ಹೊಂದಿದ ಆತನಲ್ಲಿ ಶಿಲುಬೆಗೇರಿದ ಕ್ರಿಸ್ತನನ್ನು ಕಂಡಾಗ ಜುಗುಪ್ಸೆ ಮೂಡುತ್ತದೆ.[19] ಈ ಮೂಲಕ ಹಿಂದೂ ಧರ್ಮದ ನಿಲುವುಗಳನ್ನು, ಆರ್.ಎಸ್.ಎಸ್. ನ ರಾಷ್ಟ್ರೀಯತೆಯ ಪರಿಕಲ್ಪನೆಗಳು ಗಟ್ಟಿಗೊಳಿಸುತ್ತವೆ. ಕಾದಂಬರಿಯ ಅಂತ್ಯದಲ್ಲಿ ಆರ್ಯಸಮಾಜ ರೀತ್ಯಾ ಹಿಂದೂ ಧರ್ಮವನ್ನು ನಾಯಕ ನಾಯಕಿಯರು ಸ್ವೀಕರಿಸುವುದರಲ್ಲಿಯೂ ಒಂದು ಅರ್ಥವಿದೆ. ವಿಗ್ರಹಾರಾಧನೆ ಇಲ್ಲದ ವೇದಗಳ ಕಾಲಘಟ್ಟವನ್ನು ಈ ಮೂಲಕ ಮತ್ತೆ ಕಟ್ಟುವ ಯತ್ನವಿದೆ.[20] ಹಿಂದೂ ಧರ್ಮದ ಜಾತಿ, ಧರ್ಮಗಳ ಕಟ್ಟುಪಾಡುಗಳ ಬಗ್ಗೆ ವಿಮರ್ಶೆಯು ಕಾದಂಬರಿಯಲ್ಲಿ ವ್ಯಕ್ತವಾಗಿ ಅವುಗಳನ್ನು ಪರಿಷ್ಕರಿಸಬೇಕು ಎನ್ನುವ ಪರಿಷ್ಕಾರವಾದೀ ನಿಲುವು ವ್ಯಕ್ತವಾಗುತ್ತದೆ.

ಟಿಪ್ಪಣಿಗಳು

1. ಡಾ.ಸಿ.ಎನ್.ರಾಮಚಂದ್ರನ್ ಅವರು 'ಸಾಹಿತ್ಯ ವಿಮರ್ಶೆ' ಕೃತಿಯಲ್ಲಿ ವಿಮರ್ಶೆಯ ವೈವಿಧ್ಯಗಳನ್ನು ವಿವರಿಸುತ್ತ ಮಾರ್ಕ್ಸ್‌ವಾದೀ ವಿಮರ್ಶೆಯ ನೆಲೆಗಳನ್ನು ಚರ್ಚಿಸಿದ್ದಾರೆ. ಮಾರ್ಕ್ಸ್‌ವಾದೀ ವಿಮರ್ಶೆಯ ನೆಲೆಗಳು ಪಠ್ಯವನ್ನು ಮಾತ್ರ ಗ್ರಹಿಸುವುದಿಲ್ಲ ಎಂಬ ಅಂಶವನ್ನು ಚರ್ಚಿಸಿದ್ದಾರೆ.
2. ಡಾ.ಬಿ.ಶಿವರಾಮ ಶೆಟ್ಟಿ–'ಮಲೆಗಳಲ್ಲಿ ಮದುಮಗಳು ದೇಶ ಪ್ರದೇಶ' ಲೇಖನದಲ್ಲಿ ಈ ವಿಷಯವನ್ನು ಚರ್ಚಿಸಿದ್ದಾರೆ. ರಾಷ್ಟ್ರ ನಿರ್ವಚನ ಕುವೆಂಪು ವಾಙ್ಮಯ, ಪುಟ–98.
3. ಸಾವರ್ಕರ್ ಅವರು Hindutva ಎನ್ನುವ ಕೃತಿಯಲ್ಲಿ ಹಾಗೂ ಎಂ.ಎಸ್.ಗೊಳವಾಲ್ಕರ್ ಅವರ We the nationhood defined ಕೃತಿಗಳಲ್ಲಿ ರಾಷ್ಟ್ರ ಎನ್ನುವ ಸಂಸ್ಕೃತಭೂಯಿಷ್ಠ ಕಲ್ಪನೆಗಳಿವೆ. 'ಆ ಸಿಂಧು ಸಿಂಧು ಪರ್ಯಂತ' ಎಂದು ಸಾವರ್ಕರ್ ಗ್ರಹಿಸುತ್ತಾರೆ.
4. Bunch of Thoughts ಕೃತಿಯಲ್ಲಿ Territorial Nationalism ಹಾಗೂ Call for courage of conviction ಲೇಖನಗಳು ಈ ಮಾತುಗಳಿಗೆ ಪುಷ್ಟಿನೀಡುತ್ತವೆ.
5. ಧರ್ಮಶ್ರೀ ಕಾದಂಬರಿ(2008) ಪುಟ 122ರಲ್ಲಿ ಆನಂದ ಕುಮಾರಸ್ವಾಮಿ ಅವರ ಕೃತಿಗಳ ಪಟ್ಟಿಯನ್ನೇ ಸತ್ಯನಾರಾಯಣ ಕೊಡುತ್ತಾನೆ. ಅವುಗಳನ್ನು ಓದುವಂತೆ ಆತ ಲಿಲ್ಲಿಗೆ ಹೇಳುತ್ತಾನೆ.
6. According to my observation, it is only those sons who have received an English education in India who no longer honour their fathers and mothers. - Anand coomaraswamy – Dance of shiva. ಪುಟ 117(1974)

ಇಲ್ಲಿಯ ಮಾತುಗಳು ಆಧುನಿಕವಿರೋಧಿ ನೆಲೆಯವು ಆಗಿವೆ. ಅವುಗಳ ಮೂಲಕ ಹೆಣ್ಣಿನ ಪಾವಿತ್ರ್ಯದ ಬದುಕಿನ ಚಿತ್ರಣವನ್ನು ಕುಮಾರಸ್ವಾಮಿ ಅವರು ಕಟ್ಟಿಕೊಡುತ್ತಾರೆ.

7. ಸೌಂದರ್ಯದ ಅವಶ್ಯಕತೆ ಇರುವುದು ಕಲಾಭಿವ್ಯಕ್ತಿಯಲ್ಲಿಯೇ ಹೌದಷ್ಟೆ. ಆದರೆ ಕಲೆ ನಮ್ಮ ಜೀವನದಿಂದ ಪ್ರತ್ಯೇಕವಾಗಿರುವಂಥ ಚಟುವಟಿಕೆ ಅಲ್ಲ. ಜೀವನದ ಒಂದೊಂದು ವಿವರವೂ ಕಲೆಯೇ ಹೌದು. ಸೌಂದರ್ಯತತ್ತ್ವದ ಪ್ರಕಟೀಕರಣ ಜೀವನದ ಎಲ್ಲ ವಿವರಗಳಲ್ಲೂ ನಿರಂತರವಾಗಿ ಆಗುತ್ತಿರಬೇಕು. ಅದೇ ಜೀವನದ ಸೌಂದರ್ಯ ತತ್ತ್ವ–ಆನಂದ ತಾಂಡವ, (2014, ಪುಟ 98)
8. ಅದೇ ಪುಟ 101.
9. ಭಿತ್ತಿ, (1996 ಪುಟ, 338)
10. ಡಾ ಕೆ.ಎಲ್. ಗೋಪಾಲಕೃಷ್ಣಯ್ಯ, ಎಸ್.ಎಲ್. ಭೈರಪ್ಪನವರ ಕಾದಂಬರಿಗಳೊಡನೆ ಧರ್ಮ ಕರ್ಮ ಜಿಜ್ಞಾಸೆ, (2011, ಪುಟ 26) ಇದರ ಪ್ರವೇಶಿಕೆಯಲ್ಲಿ ಹಿಂದುತ್ವವು ಹತ್ತೊಂಬತ್ತನೆಯ ಶತಮಾನದಲ್ಲಿ ತಿಲಕ್, ಸಾವರ್ಕರ್, ದಯಾನಂದ ಸರಸ್ವತಿ ಯಂಥವರಿಂದ ಹೇಗೆ ರೂಪುಗೊಂಡಿತು ಎಂದು ಚರ್ಚಿಸಿದ್ದಾರೆ.
11. ಈ ಅಂಶಗಳ ಬಗ್ಗೆ 'ಸಹ ಸ್ಪಂದನ' ಕೃತಿಯಲ್ಲಿ ಶ್ರೀರಂಗರು, ಡಾ.ದಿವಾನ್‌ಜಿ, ಹೆಚ್.ಎಸ್. ಹರಿಶಂಕರ ಮೊದಲಾದವರು ಚರ್ಚಿಸಿದ್ದಾರೆ.(1978 ಪುಟ 160 ರಿಂದ 174)
12. ಧರ್ಮಶ್ರೀ (2008, ಪುಟ 17)
13. ಅದೇ ಪುಟ 29
14. 'ಆ ಊರಿನ ಪಕ್ಕದ ಹೊಲೆಯರ ಊರಾದ ಕೊಪ್ಪಲಿಗೆ ಅವನು ಆಗಾಗ್ಗೆ ಭೇಟಿ ನೀಡುತ್ತಿದ್ದನಂತೆ. ಅವರಿಗೆ ಏನಾದರೂ ಕಾಯಿಲೆಯಾದರೆ ಬಿಟ್ಟಿ ಔಷಧಿ ಪಾದ್ರಿ ಕೊಡುತ್ತಿದ್ದನಂತೆ...ಅವರಿಗೆಲ್ಲ ಇನ್ನೂ ಏನೇನೋ ಆಸೆ ಹುಟ್ಟಿಸಿದನಂತೆ' ಧರ್ಮಶ್ರೀ, 2008 ಪುಟ 37.
15. ಈಗಲೂ ಹಿಂದೂ ಸಮಾಜ ಎಚ್ಚೆತ್ತುಕೊಳ್ಳದಿದ್ದರೆ ಭವಿತವ್ಯದಲ್ಲಿ ಹಿಂದೂ ಎಂಬುದು ಕೇವಲ ಐತಿಹಾಸಿಕ ಅಂಶವಾಗಿ ಉಳಿದೀತೇ ವಿನಾ ಜೀವಂತವಾಗಿ ಬದುಕುವ ಜನಾಂಗವಾಗಿ ಮುನ್ನಡೆಯುವುದಿಲ್ಲ. ಮುಂದೆ ಮತ್ತೊಮ್ಮೆ ಬ್ರಿಟಿಷರ ಕೈಗೆ ಸಿಕ್ಕಿದರೆ ಹಿಂದುಸ್ಥಾನದಲ್ಲಿ ಪಾಕಿಸ್ಥಾನದ ನಿರ್ಮಾಣವಾದಂತೆ ಒಂದು ಪ್ರತ್ಯೇಕ ಏಸುಸ್ಥಾನ ಬೇಕೆಂಬ ಚಳುವಳಿ ಎಬ್ಬಿಸಿಯಾರು (ಧರ್ಮಶ್ರೀ 2008 ಪುಟ 262) ಎನ್ನುವ ಮಾತುಗಳು ಇವೆ.
16. ರಾಷ್ಟ್ರದ ಪ್ರಾಚೀನ ಪರಂಪರೆಯ ಅರಿವೇ ನಮಗೆ ಇಲ್ಲವಾಗಿದೆ. ವಿಶ್ವ ವಿದ್ಯಾಲಯಗಳಿಂದ ಹೊರಬರುವ ಪದವೀಧರನಿಗೆ ತನ್ನ ಸಂಸ್ಕೃತಿಯ ಗಂಧ ಇರುವುದಿಲ್ಲ. ಈ ನಾಚಿಗೆಗೇಡಿತನದ ಪರಿಸ್ಥಿತಿಯಿಂದ ಸ್ವಾಭಿಮಾನಶೂನ್ಯವಾದ ಜನಾಂಗವೊಂದರ ಸೃಷ್ಟಿಯಾಗುತ್ತಿದೆ. ಇನ್ನು ಕೆಲವೇ ದಿನಗಳಲ್ಲಿ ಹಿಂದೂಸ್ಥಾನವು ಸಾಂಸ್ಕೃತಿಕವಾಗಿ ದಿವಾಳಿ ತೆಗೆಯುವ ಸ್ಥಿತಿಗೆ ಬಂದರೂ ಆಶ್ಚರ್ಯವಿಲ್ಲ. ಧರ್ಮಶ್ರೀ (2008, ಪುಟ 54) ಶಂಕರ ಹೇಳುವ ಮಾತುಗಳು ಇವು. ಇಲ್ಲಿ ಆಧುನಿಕ ಅಂದರೆ ಇಂಗ್ಲಿಷ್ ವಿದ್ಯಾಭ್ಯಾಸ ಎಂಬುದು ಗಮನಾರ್ಹ.
17. ಗೊಳವಾಲ್ಕರ್ ಅವರು We the Nationhood Defined ಕೃತಿಯಲ್ಲಿ The idea contained in the word nation is the compound of five distinct factors

fused into one indissoluble whole the famous five unities geographical (country) Racial, (Race) Religious (religion) culture and linguistic language (1946, ಪುಟ 21) ಎಂದು ವಿವರಿಸಿದ್ದಾರೆ.

18. ಶಂಕರ ಹೇಳುವ ಮಾತುಗಳು ಧರ್ಮಶ್ರೀ (2008) ಪುಟ 61
19. ಸತ್ಯನಾರಾಯಣನು ಮನಸ್ಸಿನ ಕ್ಲೇಶವನ್ನು ವಿವರಿಸುತ್ತ... ಕ್ರೌರ್ಯ ಅನಾಗರಿಕತೆ, ಇದನ್ನೆಲ್ಲ ಸಹಿಸಿದ ಕ್ರಿಸ್ತನು ಮಹಾತ್ಮನೆಂಬುದು ನಿಜ. ಆದರೆ ಈ ಚಿತ್ರಗಳನ್ನು ನೋಡಿದರೆ ಮನಸ್ಸಿನಲ್ಲಿ ಹುಟ್ಟುವುದು ಜುಗುಪ್ಸೆ; ಶಾಂತಿಯಲ್ಲ (ಧರ್ಮಶ್ರೀ2008, ಪುಟ 206,) ಎನ್ನುವ ಮಾತುಗಳು ಇದಕ್ಕೆ ಉದಾಹರಣೆಗಳಾಗಿವೆ.
20. ವೇದಗಳ ಕಾಲದಲ್ಲಿ ನಮ್ಮಲ್ಲಿ ವಿಗ್ರಹಾರಾಧನೆ ಇರಲಿಲ್ಲ. ಆರ್ಯರು ವೇದದಲ್ಲಿ ಹೇಳಿರುವ ರೀತಿಯ ಧರ್ಮದ ಆಚರಣೆಗಳನ್ನು ಮಾತ್ರ ಎತ್ತಿ ಹಿಡೀತಾರೆ. ವೇದವೇ ಸರ್ವಶ್ರೇಷ್ಠವೆಂಬುದನ್ನು ಎಲ್ಲ ಹಿಂದುಗಳು ನಂಬುತ್ತಾರೆ. (ಧರ್ಮಶ್ರೀ 2008 ಪುಟ 260)

ಗ್ರಂಥ ಋಣ

1. ಗೋಪಾಲಕೃಷ್ಣಯ್ಯ ಕೆ.ಎಲ್., ಎಸ್.ಎಲ್.ಭೈರಪ್ಪನವರ ಕಾದಂಬರಿಗಳೊಡನೆ ಧರ್ಮ ಕರ್ಮ ಜಿಜ್ಞಾಸೆ, ನವಕರ್ನಾಟಕ ಪಬ್ಲಿಕೇಶನ್ಸ್ ಬೆಂಗಳೂರು–2011
2. ಗೋವಿಂದರಾವ್, ಮಾಧವ ಕುಲಕರ್ಣಿ(ಸಂ) ಸಹ ಸ್ಪಂದನ, ಸಾಹಿತ್ಯ ಭಂಡಾರ ಬೆಂಗಳೂರು–1978
3. ನಿತ್ಯಾನಂದ ಬಿ.ಶೆಟ್ಟಿ (ಸಂ) ರಾಷ್ಟ್ರ ನಿರ್ವಚನ : ಕುವೆಂಪು ವಾಙ್ಮಯ, ಆಳ್ವಾಸ್ ಪ್ರಕಾಶನ, ಮೂಡುಬಿದಿರೆ–2004
4. ಭೈರಪ್ಪ ಎಸ್.ಎಲ್., ಭಿತ್ತಿ, ಸಾಹಿತ್ಯ ಭಂಡಾರ ಬೆಂಗಳೂರು– 2008
5. ಭೈರಪ್ಪ ಎಸ್.ಎಲ್., ಧರ್ಮಶ್ರೀ, ಸಾಹಿತ್ಯ ಭಂಡಾರ ಬೆಂಗಳೂರು– 2008
6. ರವಿಕುಮಾರ (ಸಂ), ಆನಂದ ತಾಂಡವ, ಅಭಿನವ ಪ್ರಕಾಶನ ಬೆಂಗಳೂರು–2014
7. ರಾಮಚಂದ್ರನ್ ಸಿ.ಎನ್. ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು–1992
8. ಹರೀಶ್ ಜಿ.ಬಿ., ಆನಂದ ಕುಮಾರಸ್ವಾಮಿ, ಅಭಿನವ ಪ್ರಕಾಶನ, ಬೆಂಗಳೂರು–2014

ಇಂಗ್ಲಿಷ್ ಕೃತಿಗಳು

1. Golwalkar M.S., We the Nationhood Defined, Nagpur Publication, Nagpur-1946
2. Golwalkar M.S., Bunch of Thoughts, Sahityasindhu Prakashana, Bangalore-2000
3. Savarkar V.D, Hindutva, Hindi Sahitya Sadan, New Delhi-2009

****

❒

ಸಂತ ಎಲೋಶಿಯಸ್ ಸಂಧ್ಯಾ ಕಾಲೇಜಿನ ಸುವರ್ಣ ಮಹೋತ್ಸವ ಸಂಚಿಕೆ 'ಸುವರ್ಣ ಸಂಧ್ಯಾ' ವಿಶಿಷ್ಟವಾಗಿ ಮೂಡಿಬಂದಿದೆ. ಮೊಸ್ಕನಿಯ ಚಿತ್ರಗಳ ಜೊತೆಯಲ್ಲಿಯೇ ಸಂಜೆ ಕಾಲೇಜಿನ ವಿದ್ಯಾರ್ಥಿಗಳ ಜೀವನ ಚಿತ್ರಗಳು ವಿಶಿಷ್ಟ ಸೊಬಗನ್ನು ಈ ಸಂಚಿಕೆಗೆ ನೀಡಿವೆ. ಲೇಖನಗಳಿಗೆ ನೀಡಿರುವ ಕನ್ನಡ ಮತ್ತು ಇಂಗ್ಲಿಷ್ ದ್ವಿಭಾಷೆಯ ಪ್ರವೇಶಿಕೆಗಳು ಎಲ್ಲ ಹಿರಿ–ಕಿರಿಯ ಲೇಖಕರನ್ನು ಹೆಮ್ಮೆಯಿಂದ ಪರಿಚಯಿಸುವ ಬಗೆಯೂ ಸೊಗಸಾಗಿದೆ.



❒

ಅಮ್ಮೆಂಬಳ ಶಂಕರನಾರಾಯಣ ನಾವಡ ಸಮಗ್ರ ಸಾಹಿತ್ಯ ಸಂಪುಟವನ್ನು ಪ್ರೊ.ಎ.ವಿ.ನಾವಡ – ಡಾ. ಗಾಯತ್ರೀ ನಾವಡ ದಂಪತಿಗಳು ಸಂಪಾದಿಸಿದ್ದು ಅಮ್ಮೆಂಬಳ ಶಂಕರನಾರಯಣ ನಾವಡ ಶತಮಾನೋತ್ಸವ ಸಮಿತಿಯು ಇದನ್ನು ಪ್ರಕಟಿಸಿದೆ. ಅಮ್ಮೆಂಬಳರ ಎಲ್ಲ ಪ್ರಕಟಿತ ಮತ್ತು ಅಪ್ರಕಟಿತ ಸಾಹಿತ್ಯವನ್ನು ಒಳಗೊಂಡ ಅಮೂಲ್ಯ ಸಂಪುಟ ಇದು.

Form IV

Statement about ownership and other particulars about CHINTHANABAYALU (Quarterly)

1.	Place of Publication	:	Bantwal, Dakshina Kannada
2.	Periodicity of its publication	:	Quarterly
3.	Printers Name	:	Reshma G. Bhat
	Nationality	:	Indian
	Address	:	No. 15-109, Modankapu Bantwal Taluk, D.K. - 574 219
4.	Publishers Name	:	Reshma G. Bhat
	Nationality	:	Indian
	Address	:	No. 15-109, Modankapu Bantwal Taluk, D.K. - 574 219
5.	Editors Name	:	Reshma G. Bhat
	Nationality	:	Indian
	Address	:	No. 15-109, Modankapu Bantwal Taluk, D.K. - 574 219
6.	Names and address of individuals who own the newspaper and partners or sharesholders holding more than one percent of the total capital	}	Reshma G. Bhat No. 15-109, Modankapu, Bantwala Taluk D.K. - 574 219

I, Reshma G. Bhat, hereby declare that the particulars given above are true to the best of my knowledge and belief.

Date: 30 June 2016

Reshma G. Bhat
(Publisher)

ವಿವೇಕ ಶಾನಭಾಗ ಮತ್ತು ವಸುಧೇಂದ್ರರ ಕತೆಗಳಲ್ಲಿ ನವ ವಸಾಹತುಶಾಹಿಯ ಬಿಕ್ಕಟ್ಟುಗಳು

ಕಿರಣ್
ಕನ್ನಡ ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗ
ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ – 517426

ವಸಾಹತು ಸಂಸ್ಕೃತಿ ನಮ್ಮ ಸಮಾಜದ ಮೇಲೆ ಹೇಗೆ ಅನೇಕ ಬದಲಾವಣೆಗೆ ಕಾರಣವಾಯಿತೋ, ಅದೇ ರೀತಿಯಲ್ಲಿ ಕಳೆದ ಶತಮಾನದ ಕೊನೆಯ ದಶಕದಲ್ಲಿ ಜಾರಿಯಾದ ಹೊಸ ಆರ್ಥಿಕ ನೀತಿಯೂ ನಮ್ಮ ಸಮಾಜದಲ್ಲಿ ಅನೇಕ ಬದಲಾವಣೆ, ಸ್ಥಿತ್ಯಾಂತರಗಳಿಗೂ ಕಾರಣವಾಯಿತು. ಈ ನವ ವಸಾಹತುಶಾಹಿಯು ತಂದಿರಿಸಿರುವ ಬಿಕ್ಕಟ್ಟುಗಳಿಗೆ ಪರ್ಯಾಯಗಳನ್ನು ಹುಡುಕಬೇಕಾದರೆ, ಅದು ನಮ್ಮ ಬದುಕಿನ ಮೇಲೆ ಮಾಡಿರುವ ಪ್ರಭಾವಗಳನ್ನು ಸರಿಯಾಗಿ ಅರ್ಥೈಸಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ಈ ಕಾಲಘಟ್ಟದ ಬದುಕನ್ನು ಕುರಿತಾದ ಅಧ್ಯಯನ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.

ಈ ನವ ವಸಾಹತುಶಾಹಿ ನೇರವಾಗಿ ನಮ್ಮ ಆರ್ಥಿಕತೆಗೆ ಸಂಬಂಧಿಸಿದ್ದರೂ, ಅದು ಅಷ್ಟಕ್ಕೆ ಸೀಮಿತವಾಗದೇ ಸಾಮಾಜಿಕ, ಸಾಹಿತ್ಯಿಕ ವಲಯಗಳನ್ನು ಒಳಗೊಂಡಂತೆ ನಮ್ಮ ಒಟ್ಟಾರೆ ಸಾಂಸ್ಕೃತಿಕ ಬದುಕಿನ ವಲಯಗಳನ್ನು ಸದ್ದಿಲ್ಲದೇ ಆಕ್ರಮಿಸಿದೆ. ಈ ಹೊಸ ಆರ್ಥಿಕ ನೀತಿಯ ಭಾಗಗಳಾದ ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣದಿಂದಾಗಿ ಭಾರತ ಅನೇಕ ಪಶ್ಚಿಮದೇಶಗಳ ಬಂಡವಾಳ ಹೂಡಿಕೆಯ ನೆಚ್ಚಿನ ಕೇಂದ್ರವಾಯಿತು. ವಸಾಹತು ಸಾಮ್ರಾಜ್ಯಶಾಹಿಯಾದರೆ, ನವ ವಸಾಹತು ಬಂಡವಾಳಶಾಹಿ. ವಸಾಹತು ಕಾಲದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ, ಆಧುನಿಕ ಚಿಂತನೆಗಳು ಬದುಕನ್ನು ಪ್ರಭಾವಿಸಿದರೆ, ಇಂದಿನ ನವ ವಸಾಹತುಶಾಹಿ ಅವಧಿಯಲ್ಲಿ ಉದಯವಾದ ಅಧಿಕಾರ ಕೇಂದ್ರ, ಹಣದ ಪ್ರಭಾವ, ಸರಕು ಸಂಸ್ಕೃತಿ,ವಿಜ್ಞಾನ ತಂತ್ರಜ್ಞಾನದ ವಿವಿಧ ಶಾಖೆಗಳ ಅಧ್ಯಯನ, ಆಧುನಿಕ ವೃತ್ತಿಕ್ಷೇತ್ರಗಳಾದ ಮಾಹಿತಿ ತಂತ್ರಜ್ಞಾನ, ಸಾಫ್ಟ್‌ವೇರ್ ಪ್ರಪಂಚ ಮೊದಲಾದವುಗಳ ಕಾರಣವಾಗಿ ಇಲ್ಲಿನ ಬದುಕು ಅನೇಕ ರೀತಿಯ ಪಲ್ಲಟಗಳಿಗೆ ಕಾರಣವಾಯಿತು. ಈ ರೀತಿಯ ಬದಲಾವಣೆ, ಸ್ಥಿತ್ಯಂತರಗಳನ್ನು ಹಲವು ಸಮಕಾಲೀನ ಕತೆಗಾರರು ತಮ್ಮ ಕತೆಗಳಲ್ಲಿ ಕಂಡರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಈ ನಿಟ್ಟಿನಲ್ಲಿ ವಿವೇಕ ಶಾನಭಾಗ, ವಸುಧೇಂದ್ರರ ಕಥೆಗಳ ಅಧ್ಯಯನವನ್ನು ಈ ಲೇಖನ ಹೊಂದಿದೆ. ಈ ಇಬ್ಬರೂ ಕತೆಗಾರರ ಕತೆಗಳಲ್ಲಿಯ ಕೆಲ ಸಮಾನ ಅಂಶಗಳು ತೌಲನಿಕವಾಗಿ ನೋಡಲು ಕಾರಣವಾಗಿವೆ. ವಿವೇಕ ಶಾನಭಾಗರಂತೆ ವಸುಧೇಂದ್ರರು ಶೈಕ್ಷಣಿಕವಾಗಿ ಸಾಹಿತ್ಯಿಕ ಹಿನ್ನೆಲೆಯವರಲ್ಲ. ವೃತ್ತಿಯಲ್ಲಿ ಸಾಫ್ಟವೇರ್ ಇಂಜಿನಿಯರ್ ಆಗಿದ್ದು ದೇಶ, ವಿದೇಶಗಳನ್ನು ಸುತ್ತಿ ಬಂದವರು. ಮುಖ್ಯವಾಗಿ ಆಧುನಿಕತೆಯಿಂದಾಗಿಯೇ ಬದುಕನ್ನು ರೂಪಿಸಿಕೊಂಡವರು. ಸಾಮಾಜಿಕವಾಗಿಯೂ ಹೆಚ್ಚು ಕಡಮೆ ಒಂದೇ ವರ್ಗದ ಹಿನ್ನೆಲೆಯಿಂದಲೇ ಬಂದವರಾಗಿದ್ದು, ಒಂದೇ ಬಗೆಯ ವೃತ್ತಿಯ ಹಿನ್ನೆಲೆಯೂ ಇಬ್ಬರಲ್ಲೂ ಸಮಾನ ಅಂಶಗಳು ಕಾಣಿಸಿಕೊಳ್ಳುವುದಕ್ಕೆ ಕಾರಣವಾಗಿದೆನ್ನಬಹುದು.

ವಿವೇಕ ಶಾನಭಾಗ ಹಾಗೂ ವಸುಧೇಂದ್ರರ ಕತೆಗಳಲ್ಲಿ ಒಂದು ರೀತಿಯ ಹೊಸತನವಿದೆ. ಮೇಲ್ನೋಟಕ್ಕೆ ಇವರ ಕಥಾನಕಗಳ ವಸ್ತು ಅಷ್ಟೇನೂ ಗಂಭೀರವಿಲ್ಲದಂತೆ ತೋರಿದರೂ ಸೂಕ್ಷ್ಮವಾಗಿ ಗಮನಿಸಿದಾಗ ಈ ಕತೆಗಾರರು ಇಂದಿನ ಜೀವನ ಕ್ರಮ, ಬದುಕಿನಲ್ಲಾಗುತ್ತಿರುವ ಬದಲಾವಣೆ, ಸ್ಥಿತ್ಯಂತರಗಳನ್ನು ಸೂಕ್ಷ್ಮವಾಗಿ, ನವಿರಾಗಿ ಚರ್ಚಿಸುತ್ತಾ ವಿಷಯದ ಸಂಕೀರ್ಣತೆಯನ್ನು ತೆರೆದಿಡುವುದನ್ನು ಕಾಣಬಹುದು. ಆಧುನಿಕ ಶಿಕ್ಷಣಕ್ರಮ, ಆಧುನಿಕ ಉದ್ಯೋಗವಕಾಶಗಳಿಂದಾಗಿ ನಮ್ಮ ಪಾರಂಪರಿಕ ಮೌಲ್ಯ, ಬದುಕು ಮೊದಲಾದವುಗಳಿಂದ ಹೇಗೆ ಜನರು ವಿಮುಖರಾಗುತ್ತಿದ್ದಾರೆಂಬುದು ವಿವೇಕ ಶಾನಭಾಗ ಹಾಗೂ ವಸುಧೇಂದ್ರರ ಕತೆಗಳು ವಿವರಿಸುತ್ತವೆ. ಬದಲಾದ ಜೀವನ ಕ್ರಮದ ಒತ್ತಡ, ಆದ್ಯತೆ, ಆಶೋತ್ತರಗಳನ್ನು ಚಿತ್ರಿಸುವಲ್ಲಿ ಈ ಕತೆಗಳು ಯಶಸ್ವಿಯಾಗಿವೆ.

ಆರ್ಥಿಕ ಯಶಸ್ಸೊಂದೇ ಜೀವನದ ಸಫಲತೆಯನ್ನು ಅಳೆಯುವ ಏಕೈಕ ಮಾನದಂಡವೇ ಎಂಬ ನೈತಿಕಪ್ರಶ್ನೆ ಈ ಎಲ್ಲಾ ಕತೆಗಳ ಹಿಂದಿನ ಪ್ರಧಾನ ಕಾಳಜಿಯಾಗಿದೆ. ವಿಜ್ಞಾನ, ತಂತ್ರಜ್ಞಾನ, ಅಭಿವೃದ್ಧಿ, ರಾಜಕಾರಣ, ಅರ್ಥಶಾಸ್ತ್ರ ಮೊದಲಾದವುಗಳೆಲ್ಲಾ ಮೌಲ್ಯಾತೀತವೆ ಎಂಬ ಪ್ರಶ್ನೆ ಈ ಕತೆಗಳಲ್ಲಿ ಸಾಮಾನ್ಯವಾಗಿ ಕೇಳಿಬರುತ್ತದೆ. ಹಣ ಸಂಪಾದನೆಯೇ ಬದುಕಿನ ಯಶಸ್ಸೆಂದು ಭಾವಿಸಿ ಅದರ ಬೆನ್ನುಹತ್ತಿ ನಾಗಾಲೋಟದಲ್ಲಿ ಮುನ್ನುಗ್ಗುತ್ತಿರುವ ಸದ್ಯದ ನಾಗರಿಕತೆಯಲ್ಲಿ ವ್ಯಕ್ತಿಗಳು, ಕುಟುಂಬಗಳು, ಸಂಸ್ಕೃತಿಗಳು ತಮ್ಮ ಅಸ್ಮಿತೆಗಳನ್ನು ಕಳೆದುಕೊಳ್ಳುವ ಪ್ರಕ್ರಿಯೆಯನ್ನು ವಿವೇಕ ಶಾನಭಾಗರ 'ಶರವಣ ಸರ್ವಿಸಸ್', 'ನಿರ್ವಾಣ' ಹಾಗೂ ವಸುಧೇಂದ್ರರ 'ಮನೀಷೆ' 'ಹಲೋ ಭಾರತಿ' ಮುಂತಾದ ಕತೆಗಳು ಉತ್ತಮವಾಗಿ ಚಿತ್ರಿಸುತ್ತವೆ.

ವಿವೇಕ್ ಶಾನಭಾಗರ 'ಶರವಣ ಸರ್ವಿಸಸ್' ಕತೆಯಲ್ಲಿ ಹಣ ಗಳಿಕೆಯ ಉದ್ದೇಶದಿಂದ ಶ್ರವಣ ಕುಮಾರನು ತನ್ನ ತಂದೆ-ತಾಯಿಯಿಟ್ಟ ಹೆಸರನ್ನೇ ಅಪಭ್ರಂಶಗೊಳಿಸಿಕೊಳ್ಳುತ್ತಾನೆ. " *ಗಿರಾಕಿಗಳ ನಾಲಿಗೆಗೆ ಸರಾಗವಾಗಲಿ ಎಂದು ಹೆಸರಿಗಿರುವ ಒತ್ತಕ್ಷರಗಳನ್ನು ತೆಗೆದು ಸಪಾಟು ಮಾಡಿ*" ಶರವಣನಾಗುವುದು." *ದುಡಿಮೆಯೇ ಇಲ್ಲದೇ ಬರೀ ಕಾಗದದ ಮೇಲೆ ವೃದ್ಧಿಸುವ ಸಂಪತ್ತಿನ ವಿಷಯದಲ್ಲಿ ಹುಷಾರಾಗಿರಪ್ಪ*" ಎಂಬ ತಂದೆಯ ಎಚ್ಚರಿಕೆಯ ಮಾತುಗಳು ಶರವಣನನ್ನು ತಾಗುವುದಿಲ್ಲ. ಈ ಸಂದರ್ಭದಲ್ಲಿ ವಸುಧೇಂದ್ರರ 'ಯುಗಾದಿ' ಕತೆಯ ಗೋಪಣ್ಣ ಮಾಸ್ತರರೂ ತಮ್ಮ ಮಗನ ಕುರಿತಾಗಿ ಇದೇ ರೀತಿಯ ಕಳವಳ ವ್ಯಕ್ತಪಡಿಸುವುದನ್ನು ನೆನೆಪಿಸಿಕೊಳ್ಳಬಹುದು. (ಪು.09, ಯುಗಾದಿ, ವಸುಧೇಂದ್ರ, ಛಂದ ಪುಸ್ತಕ, 2010)

'ಶರವಣ ಸರ್ವಿಸಸ್'ನ ಶರವಣನಿಗೂ ಹಾಗೂ ವಸುಧೇಂದ್ರರ 'ಯುಗಾದಿ' ಕತೆಯ ಪ್ರಹ್ಲಾದನಿಗೂ ಹೆಚ್ಚು ವ್ಯತ್ಯಾಸಗಳಿಲ್ಲ. ಇಬ್ಬರೂ ಹಳ್ಳಿಯನ್ನು ತ್ಯಜಿಸಿ ನಗರ ಸೇರಿ, ನಗರದ ರೀತಿ ರಿವಾಜು, ಜೀವನ ಶೈಲಿಯನ್ನು ರೂಢಿಸಿಕೊಂಡವರು. ಇಬ್ಬರೂ ಆರ್ಥಿಕವಾಗಿ ಸದೃಢರಾಗಿದ್ದಾರೆ. 'ಯುಗಾದಿ'ಯ ಪ್ರಹ್ಲಾದನಂತೂ ಸಂತೆಗೆ ಹೋಗಿ ತರಕಾರಿ ತೆಗೆದುಕೊಂಡು ಬಂದಷ್ಟೇ ಸಲೀಸಾಗಿ ಬೆಂಗಳೂರಿನಲ್ಲಿ ಮನೆಯೊಂದನ್ನು ಕೊಂಡುಕೊಳ್ಳಬಲ್ಲ. ಶರವಣ ಬೆಂಗಳೂರಿಗೆ ಬಂದ ಮೂರೇ ವರ್ಷಗಳಲ್ಲಿ ಅವನ ಗಳಿಕೆ ಏರುತ್ತಾ ಹೋಗುತ್ತದೆ. ಇತ್ತ ಯುಗಾದಿಯ ಪ್ರಹ್ಲಾದನೂ ತನ್ನ ತಂದೆ ಜೀವನವಿಡೀ ಮಾಸ್ತರಿಕೆ ಮಾಡಿ ಗಳಿಸಿದ್ದ ಎಲ್ಲಾ ಸಂಪತ್ತನ್ನು ಒಂದೆರಡು ತಿಂಗಳಲ್ಲೇ ಸಂಪಾದಿಸಬಲ್ಲ ಶಕ್ತಿವಂತ. ಈ ಇರ್ವರ ಆರ್ಥಿಕ ಯಶಸ್ಸು, ಬದಲಾದ ಜೀವನ ಕ್ರಮ, ಆದ್ಯತೆ,

ಆಶೋತ್ತರಗಳನ್ನು ಕತೆಗಾರರು ದಾಖಲಿಸುತ್ತಲೇ ಅವರ ಕೌಟಂಬಿಕ ಸಂಬಂಧಗಳು ಕ್ಷಯಿಸುತ್ತಾ ಹೋಗುವುದನ್ನು ವಿವರಿಸುತ್ತವೆ. ಒಂದು ಹಂತದಲ್ಲಿ ಈ ಕತೆಗಳ ನಾಯಕರು ತಾವು ಪಡೆದು ಕೊಂಡಿದ್ದಕ್ಕಿಂತ, ಸಾಧಿಸಿದ್ದಕ್ಕಿಂತ ಕಳೆದುಕೊಂಡದ್ದೇ, ವಿಫಲವಾದದ್ದೇ ಹೆಚ್ಚು ಎಂಬುದನ್ನು ಈ ಕತೆಗಳು ವಿಷಾದದಲ್ಲಿ ದಾಖಲಿಸುತ್ತವೆ. ಅರ್ಥದ ಬೆನ್ನೇರಿ ಹೊರಟ ರಾಷ್ಟ್ರಗಳು ತಮ್ಮ ಅಸ್ಮಿತೆ, ಸಂಸ್ಕೃತಿ, ಸ್ವಾತಂತ್ರ್ಯಗಳನ್ನೇ ಕಳೆದುಕೊಳ್ಳುತ್ತಿರುವಂತೆ ವೈಯಕ್ತಿಕ ನೆಲೆಯಲ್ಲಿ ಶರವಣ ಮತ್ತು ಪ್ರಹ್ಲಾದ ತಮ್ಮ ಹೆಸರು, ಕೌಟಂಬಿಕ ನೆಮ್ಮದಿ ಎಲ್ಲವನ್ನೂ ಕಳೆದುಕೊಳ್ಳುತ್ತಾರೆ.

'ನಿರ್ವಾಣ' ವಿವೇಕ ಶಾನಭಾಗರ ಮತ್ತೊಂದು ಉತ್ತಮ ಕತೆ. ನಿರ್ವಾಣ ಪದದ ಅರ್ಥಕೈವಲ್ಯ ತಲುಪುವ ಸ್ಥಿತಿಯನ್ನು ಸೂಚಿಸುವಂತದ್ದು. 'ನಾನು' ಎಂಬ ಅಹಂಕಾರವನ್ನು ಕಳೆದುಕೊಳ್ಳುವುದು. ನಮ್ಮನ್ನು ಬಾಧಿಸುವ ಅರಿಷಡ್ವರ್ಗಗಳಿಂದ ಕಳಚಿ ಕೊಳ್ಳುವುದು ಎಂದರ್ಥವಲ್ಲವೇ? ಸದ್ಯ ಕತೆಯ ಶೀರ್ಷಿಕೆ ಈ ಅರ್ಥವನ್ನು ಹೊರಡಿಸದೇ ವ್ಯಂಗ್ಯದ ರೀತಿಯಲ್ಲಿ ಬಳಕೆಯಾಗಿದೆ. ಇಲ್ಲಿ 'ನಿರ್ವಾಣ' ಆಧ್ಯಾತ್ಮಿಕ ಅರ್ಥದಲ್ಲಿ ಬಳಕೆಯಾಗದೆ ಸದ್ಯದ ನಾಗರಿಕತೆಯ ವಿಕೃತಿಯನ್ನು ಸೂಚಿಸುವ ಪದವಾಗಿ ಬಳಕೆಯಾಗಿದೆ. "*ಇಲ್ಲಿ ಕಳೆದುಕೊಳ್ಳುವುದು ಎಂದರೆ ನಮ್ಮತನವನ್ನೇ ಕಳೆದುಕೊಳ್ಳುವುದು. ಅಸ್ಮಿತೆಯನ್ನು ಕಳೆದು ಕೊಳ್ಳುವುದು. ಮೌಲ್ಯಗಳನ್ನು, ಸಂಬಂಧಗಳನ್ನು ಕಳೆದುಕೊಳ್ಳುವುದು. ನಂದುವುದು; ಸಾಯುವುದು; ಇನ್ನಿಲ್ಲವಾಗುವುದು*" (ಪು.182, ಸಾಹಿತ್ಯ ಸಮೃದ್ಧಿ, ಅಶೋಕ, ಟಿ.ಪಿ., ಅಂಕಿತ ಪುಸ್ತಕ, ಬೆಂಗಳೂರು, 2013.)

'ನಿರ್ವಾಣ' ಕತೆಯಲ್ಲಿ ನಿರೂಪಕನ ಹೆಸರು, ಅವನು ಭೇಟಿ ಮಾಡುವ ಇನ್ನೊಬ್ಬ ವ್ಯಕ್ತಿಯ ಹೆಸರು ತಿಳಿಯುವುದಿಲ್ಲ. ಪರಸ್ಪರ ಅವರಿಗೂ ಗೊತ್ತಾಗುವುದಿಲ್ಲ. ಅದರ ಅಗತ್ಯವೇ ಇಲ್ಲದಂತೆ ಅವರ ನಡುವೆ ಚರ್ಚೆ, ಹರಟೆಯೊಂದಿಗೆ ಒಂದು ಸಂಜೆ ಕಳೆದು ಹೋಗುತ್ತದೆ. ನಿಜವಾಗಿ ತಾವು ಭೇಟಿ ಮಾಡಿದ ವ್ಯಕ್ತಿ ಯಾರೆಂದು ಪರಸ್ಪರ ತಿಳಿಯದೆ ಅವರು ಒಬ್ಬರನ್ನೊಬ್ಬರು ಬೀಳ್ಕೊಡುತ್ತಾರೆ. ಇಲ್ಲಿ ಪರಸ್ಪರ ಪರಿಚಯವಿಲ್ಲದಿದ್ದರೂ ಅವರಿಗೆ ಚರ್ಚೆ, ಮಾತುಗಳಿಗೆ ಅಡ್ಡಿಯಾಗುವುದಿಲ್ಲ. ಅವರಿಗೆ ಹೇಳಿಕೊಳ್ಳಲು ಹೆಸರೇ ಇಲ್ಲವಲ್ಲ. ಅಂದರೆ ತಮ್ಮತನವನ್ನು ಕಾರ್ಪೋರೇಟ್ ಬದುಕಿಗಾಗಿ ಬದಲಾಯಿಸಿಕೊಂಡವರು, ವ್ಯಕ್ತಿತ್ವಗಳನ್ನು ಕಳೆದುಕೊಂಡು ಬದುಕುತ್ತಿರುವವರಷ್ಟೇ.

'ನಿರ್ವಾಣ'ದ ನಿರೂಪಕ ದೊಡ್ಡ ಕಂಪನಿಯೊಂದರಲ್ಲಿ ಉನ್ನತ ಹುದ್ದೆಯಲ್ಲಿದ್ದಾನೆ. ರಜೆಯ ಕಾರಣವಾಗಿ ಅವನ ಆಫೀಸಿನ ಜನ ಅವನಿಂದ ದೂರ ಹೋಗಿದ್ದಾರೆ. ಒಂಟಿತನ, ಬೇಸರ, ಮಾಡಲು ನಿರ್ದಿಷ್ಟ ಕೆಲಸವಿಲ್ಲದೆ, "*ಎದ್ದು ಈ ಮೇಲ್ ತೆಗೆದು ಖಾಲಿ ಇನ್‌ಬಾಕ್ಸ್ ನೋಡಿ ಬೇಜಾರಾಗಿ ಹಳೆಯ ಈ ಮೇಲ್‌ಗಳನ್ನೆಲ್ಲಾ ತೆಗೆದು ಯಾವಾಗಲೂ ಬರೆಯದೇ ಇದ್ದವರಿಗೂ ಎರಡೆರಡು ಸಾಲು ಗೀಚಿಹಾಕಿದೆ. ಅದೇ ಸಾಲುಗಳನ್ನು ಕಾಪಿಪೇಸ್ಟ್ ಮಾಡೋದು. ಹೆಸರು ಬಿಟ್ಟರೆ, ಎಲ್ಲರಿಗೂ ಅದೇ ಸಾಲುಗಳು. ಅವರಿಗೆಲ್ಲಾ ಬರೆಯದೇ ಇದ್ದರೂ ನಡೆಯುತ್ತದೆ. ಆದರೆ ಬರೆದಾಗ ಎಲ್ಲರಿಗೂ ಒಂದೇ ಪತ್ರ ಬರೆದರೂ ವ್ಯತ್ಯಾಸ ಆಗಲ್ಲ. ಸಂಪರ್ಕ ಇರಲಿ ಅಂತ ಆಗೀಗ ಬರೆಯೋದು*" (ನಿರ್ವಾಣ, ವಿವೇಕ ಶಾನಭಾಗ, ಅಕ್ಷರ ಪ್ರಕಾಶನ, ಹೆಗ್ಗೋಡು) ಎಂಬಿತ್ಯಾದಿ ವಿವರಗಳಲ್ಲಿ, ಆಧುನಿಕತೆಯು ಸಂಪರ್ಕ, ಸಂವಹನಗಳನ್ನು ಸುಲಭಗೊಳಿಸಿದ್ದರೂ ಅವುಗಳಲ್ಲಿ ಸಹಜ ಕಾಳಜಿ, ಪ್ರೀತಿ ಮೊದಲಾದುವುಗಳಿಲ್ಲದೇ ಕೇವಲ ಲಾಭ-ನಷ್ಟದ ಲೆಕ್ಕಾಚಾರಗಳಾಗಿ ಯಾಂತ್ರಿಕವಾಗುವುದನ್ನು ಕಾಣಬಹುದು.

ಗಂಡ, ಹೆಂಡತಿ ಶಾಲಿನಿಗೆ ಫೋನ್ ಮಾಡಿದರೆ ಅವಳಿಗೆ ಯಾತಕ್ಕೋ ಸಿಟ್ಟು ಬಂದಿರುತ್ತದೆ. ಅವರೀರ್ವರ ಟೆಲಿಫೋನ್ ಸಂಭಾಷಣೆಯಲ್ಲಿ ಅವರ ದಾಂಪತ್ಯವೂ ಅಷ್ಟೇನೂ ಸುಖಕರವಾಗಿಲ್ಲವೆನಿಸುತ್ತದೆ. "*ದಿನಕ್ಕೆ ಒಂದ್ಸಲಾ ಫೋನ್ ಮಾಡಿದ್ರೆ ಸಾಕು. ನಿನ್ನ ಕಾಟ ಇಲ್ಲದೇ ಎಲ್ಲಾ ಹೆಚ್ಚು ಸರಿಯಾಗೇ ನಡೆಯುತ್ತಿದೆ*" (ನಿರ್ವಾಣ, ವಿವೇಕ ಶಾನಭಾಗ) ಎಂದು ಹೆಂಡತಿ ಫೋನ್ ಇಟ್ಟೇಬಿಡುತ್ತಾಳೆ. "*ದಿನಾ ನಾವು ಜಗಳ ಮಾಡ್ತಾ ಮಾಡ್ತಾ ದೂರ ಹೋಗಿದ್ದೇವೆ. ಮಗ ಚಿಪ್ಸ್ ತಿನ್ನತಾ ಟಿ.ವಿ. ನೋಡತಾ ಬೆಳೀತಾ ಇದಾನೆ. ಆಟ ಆಡೋ ಅಂದ್ರೆ ಕಂಪ್ಯೂಟರ್ ಗೇಮ್ಸ್ ಆಡತಾನೆ*" ಎನ್ನುವಲ್ಲಿಯೂ ಹಾಗೂ "*ಒಂದು ಸುಖ ಸಂಸಾರಕ್ಕೆ ಇನ್ನೇನು ಬೇಕು? ಹೆಂಡತಿ ಜೊತೆ ಮಾತೇ ಇಲ್ಲ; ಮಗ ಮಾತು ಕೇಳಲ್ಲ, ಆಫೀಸಿನಲ್ಲಿ ಸಿಕ್ಕಾಪಟ್ಟೆ ಕೆಲಸ, ಬ್ಯಾಂಕ್ ಬ್ಯಾಲೆನ್ಸ್ ಮಾತ್ರ ಏರತಾನೇ ಇದೆ. ಆದರೆ ಅದರ ಬಗ್ಗೆ ಯಾರಿಗೂ ಕಿಮ್ಮತ್ತೆ ಇಲ್ಲ. ಎಲ್ಲಾ ಬದಲಾಗಿಬಿಟ್ಟಿದೆ. ಇಪ್ಪತ್ತು ವರ್ಷದ ಹಿಂದೆ ತೆಗೆದ ಫೋಟೋ ನೋಡಿದರೆ ಅದರಲ್ಲೂ ಅವಳು ನನ್ನ ಜೊತೆ ನಿಂತಿರೋ ರೀತಿಯಲ್ಲೇ ಪ್ರೀತಿ ಇಲ್ಲದೇ ಇರೋದು ಕಾಣಿಸ್ತಾ ಇದೆ. ಈಗ ಒಬ್ಬರನ್ನೊಬ್ಬರು ಅಸಹ್ಯಪಡಿಸಿಕೊಂಡು ಬಿಟ್ಟಿದೀವಿ*" ಎಂಬ ವಿವರಾದಿಗಳನ್ನು ಗಮನಿಸಿದಾಗ ಇಂದು ಮನುಷ್ಯನಿಗೆ ಅಗತ್ಯಕ್ಕಿಂತ ಹೆಚ್ಚಿನದಾದ ಸುಖ, ಸಂಪತ್ತು ದೊರೆತಿರುವುದು ನಿಜವಾದರೂ ಅದರ ಹಿಂದಗಡೆಯೇ ಅವರೆಲ್ಲರೂ ಅಸಂತೋಷ, ಅತೃಪ್ತಿಯಿಂದ ಕೊರಗುತ್ತಿರುವುದನ್ನು ಕಾಣಬಹುದು. ದಾಂಪತ್ಯದಲ್ಲಿಯೂ ಸುಖವಿಲ್ಲದೇ ವಿಚ್ಛೇದನದ ದಾರಿ ಹಿಡಿಯುವ ಕತೆಗಳೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವುದು ವರ್ತಮಾನದ ಬದುಕಿಗೆ ಹಿಡಿದ ಕನ್ನಡಿಯ ಹಾಗೇ ತೋರುತ್ತದೆ. ಒಟ್ಟಾರೆ ಇಲ್ಲಿಯ ಪಾತ್ರಗಳು ಎಲ್ಲಾ ಇದ್ದು ಏನು ಇಲ್ಲದಂತೆ, ಏನನ್ನೋ ಕಳೆದುಕೊಂಡಂತೆ ಚಡಪಡಿಸುತ್ತಲೇ ಇರುತ್ತವೆ. ಸುಖ, ಶಾಂತಿ, ನೆಮ್ಮದಿ, ತೃಪ್ತಿಗಾಗಿ ಕತೆಯುದ್ದಕ್ಕೂ ಹಂಬಲಿಸುತ್ತಲೇ ಇರುವುದು ಈ ಎಲ್ಲಾ ಕತೆಗಳ ಸಾಮಾನ್ಯ ಸಂಗತಿಯಾಗಿ ಕಾಣಿಸುತ್ತದೆ.

"*ಹೋಗಲಿ ಬಿಡು ಈ ರೀತಿಯಿಂದಾದರೂ ನಮ್ಮ ಪರಿಚಯವಾಯಿತು. ಎಂದು ಹೇಳಬಹುದಿತ್ತು. ಆದರೆ, ಆಗ ನಾವು ಮಾತಾಡುವ ಯಾವುದು ಬೇರೆಯಾಗುತ್ತಿರಲಿಲ್ಲ. ಹೆಸರು ಬೇರೆಯಾಗಿರುತಿತ್ತು ಅಷ್ಟೇ. ಅಥವಾ ಪ್ರತ್ಯೇಕ ಅನಿಸುವಂಥ ಸಂಗತಿಗಳನ್ನು ನಮ್ಮ ಜೀವನದಲ್ಲಿ ನಾವು ಗಮನಿಸಲೇ ಇಲ್ಲವೇ? ಯಾವ ದಾರಿ ಆಯ್ದುಕೊಂಡರೂ ವ್ಯತ್ಯಾಸವಾಗುವುದಿಲ್ಲ*" (ನಿರ್ವಾಣ, ವಿವೇಕ ಶಾನಭಾಗ) ಎನ್ನುವ ನಿರೂಪಕನ ಮಾತುಗಳಲ್ಲಿ ನಮ್ಮ ಸಮಕಾಲೀನ ಬದುಕು ಹೇಗೆ ಮಾರುಕಟ್ಟೆ ನಿಯಂತ್ರಿತವಾಗಿ ತನ್ನ ಅನನ್ಯತೆ ಹಾಗೂ ಬಹುತ್ವವನ್ನು ಕಳೆದುಕೊಂಡು, ಸರಳವಾಗಿ ಏಕರೂಪಗೊಂಡಿದೆ ಎಂಬುದನ್ನು ತಿಳಿಯಬಹುದಾಗಿದೆ.

ಕೊನೆಗೆ ನಿರೂಪಕನಿಗೆ ಆ ವ್ಯಕ್ತಿಯೂ ತಾನು ಅಂದುಕೊಂಡಂತೆ 'ಜ್ಯೋತಿರ್ಮಯಿ' ಅಲ್ಲ 'ಫಣೀಶ್' ಎಂದು ತಿಳಿದು ಬರುತ್ತದೆ. ಅನಂತರ ಆ ವ್ಯಕ್ತಿಯೂ 'ಫಣೀಶ್' ಕೂಡಾ ಆಗಿರದೇ ಇನ್ನಾರೊ ಆಗಿರುತ್ತಾನೆ. ಇತ್ತ ನಿರೂಪಕನನ್ನು ಆ ಇನ್ನೊಬ್ಬ ವ್ಯಕ್ತಿ 'ರತನ್ ಕಾವಲೇ' ಎಂದು ಭಾವಿಸಿಯೇ ಮಾತನಾಡಿರುತ್ತಾನೆ. ಕೊನೆಗೆ ನಿರೂಪಕನೂ ತಾನೂ ರತನ್ ಕಾವಲೇ ಅಲ್ಲವೆಂದು ತಿಳಿಸಿ ಹೊರಡುತ್ತಾನೆ. ಈ ವಿಷಯ ತಿಳಿದಾಗ ಇಬ್ಬರಲ್ಲೂ ಪಶ್ಚಾತಾಪ, ಆಶ್ಚರ್ಯ ಕಾಣುವುದಿಲ್ಲ. ಅವರು ಪರಿಚಿತರೆ ಆಗಿದ್ದರೂ ಸಹ ಅವರ ಮಾತು-ಕತೆಯಲ್ಲೇನು ಹೆಚ್ಚು ವ್ಯತ್ಯಾಸ ಕಾಣುತ್ತಿರಲಿಲ್ಲ. ಮಾತಿನ ವಿವರ,

ವಿಷಯ, ಒಂದೇ ಆಗಿರುತ್ತಿದ್ದವು. ಹೆಸರು ಮಾತ್ರ ಬದಲಾಗಿರುತ್ತಿದ್ದವಷ್ಟೆ. ಮಿಕ್ಕಂತೆ ಸದ್ಯದ ಎಲ್ಲರ ಬದುಕು, ಜೀವನ ಕ್ರಮ, ವಿವರಗಳು ಒಂದೇ ಆಗಿ ಕಾಣುತ್ತವೆ. ಪರಸ್ಪರ ವ್ಯಕ್ತಿಗಳು ಅದಲು ಬದಲಾದರೂ ವ್ಯತ್ಯಾಸಗಳಾಗುವುದಿಲ್ಲ.

ನಿರೂಪಕ ಹಾಗೂ ಆ ವ್ಯಕ್ತಿ ಒಬ್ಬರಿಗೊಬ್ಬರು ಪರಿಚಯವಾಗದೇ ತಮ್ಮ ನಿಜ ನಾಮಗಳನ್ನು ಹೇಳಿಕೊಳ್ಳದೇ ಬೇರೆಯಾಗುತ್ತಾರೆ. ಇಲ್ಲಿ ಅವರಿಗೆ ತಮ್ಮದಾದ ಹೆಸರೇ ಇಲ್ಲಾ; ಅಂತಯೇ ವ್ಯಕ್ತಿತ್ವವೂ. ತಮ್ಮತನವನ್ನೇ ಕಳೆದುಕೊಂಡ, ಆರ್ಥಿಕ ಲೆಕ್ಕಾಚಾರಗಳೇ ಬದುಕನ್ನು ನಿಯಂತ್ರಿಸುವ ಒಂದು ವರ್ಗದ ಬದುಕಿನ ಕ್ರಮವನ್ನು ಕತೆ ವ್ಯಂಗ್ಯವಾಗಿ ಚಿತ್ರಿಸುತ್ತದೆ. ತಮ್ಮಲ್ಲಿಯ ವಿಶೇಷತೆ, ಅನನ್ಯತೆ, ಆಸಕ್ತಿಗಳನ್ನೆ ಗುರುತಿಸಲಾಗದ ಜನ, ಗಂಡ, ಹೆಂಡತಿ, ಮಕ್ಕಳ ಆಸಕ್ತಿ, ಬದುಕಿಗೆ ಏನು ಬೆಲೆ ಕೊಟ್ಟಾರು? ಹಣದ ಲೆಕ್ಕಾಚಾರದ ಮೇಲೆ ರೂಪಿತವಾಗುವ ಒಂದು ಜೀವನ ಕ್ರಮದಲ್ಲಿ ಹಣ ಗಳಿಕೆಯಿಂದ ಹೊರತಾದ ಆಸಕ್ತಿ, ಹವ್ಯಾಸ, ಆನಂದ, ಸಂತಸ ಮೊದಲಾದವುಗಳೆಲ್ಲಾ ಅಪಮೌಲ್ಯಗೊಂಡಿರುವುದನ್ನು ಕತೆ ಎತ್ತಿ ತೋರುತ್ತದೆ. ಸುಖ, ಸಂತೋಷವಿರುವುದು ಕೇವಲ ಕೊಳ್ಳುವುದರಲ್ಲಿ, ವೃತ್ತಿ ಬದುಕಿನಲ್ಲಿ ಮೇಲೆರುವುದರಲ್ಲಿ, ಬ್ಯಾಂಕ್ ಬ್ಯಾಲೆನ್ಸ್ ಏರುವುದರಲ್ಲಿ ಮಾತ್ರವೆಂದು ನಂಬಿ ಬದುಕುತ್ತಿರುವ ಒಂದು ವರ್ಗದ ಜೀವನಕ್ರಮವನ್ನು 'ನಿರ್ವಾಣ' ಕತೆಯು ಸಣ್ಣ ದನಿಯಲ್ಲಿಯೇ ಪ್ರಶ್ನಿಸುತ್ತದೆ.

ವಿವೇಕರ 'ನಿರ್ವಾಣ' ಹಾಗೂ 'ಶರವಣ ಸರ್ವಿಸಸ್' ಮತ್ತು ವಸುಧೇಂದ್ರರ 'ಮನೀಷೆ', 'ಯುಗಾದಿ' ಕತೆಗಳಿಗೆ ಹೆಚ್ಚು ಹೋಲುತ್ತವೆ. 'ನಿರ್ವಾಣ' ಕತೆಯಲ್ಲಿ ಕೊನೆಯವರೆಗೂ ನಾಯಕನ ನಿಜ ಹೆಸರು, ವ್ಯಕ್ತಿತ್ವಗಳು ಪರಿಚಯವಾಗುವುದೇ ಇಲ್ಲ. ಆ ಹೆಸರಿನ ಅಗತ್ಯವೇ ಇಲ್ಲದಂತೆ ಕತೆ ಮುಗಿದುಹೋಗುತ್ತದೆ. ವಸುಧೇಂದ್ರರ 'ಮನೀಷ'ಯೂ ಇದಕ್ಕಿಂತ ಭಿನ್ನವಲ್ಲ. ಇಲ್ಲಿಯೂ ಕಥಾ ನಾಯಕನ ಪರಿಚಯ ಅವನ ಹಸರಿಲ್ಲದೇ, ಕೇವಲ ಅವನ ಉದ್ಯೋಗದ ವಿವರಗಳೊಂದಿಗೆ ನಡೆಯುತ್ತದೆ. " *ಅವನೊಬ್ಬ ಯಂತ್ರ ನಿರ್ವಹಣಾ ಇಂಜಿನಿಯರ್. ಯಂತ್ರಗಳಲ್ಲಿ ಏನಾದರೂ ತೊಂದರೆ ಬಂದರೆ ಅದನ್ನು ಸರಿಪಡಿಸುವುದು ಅವನ ಜವಾಬ್ದಾರಿ."* ಎಂದು ಹೆಸರನ್ನು ಹೇಳದೆ ಪರಿಚಯಿಸುವುದು ಹಾಗೂ " *ಕೆಲವೊಮ್ಮೆ ಅಷ್ಟೊಂದು ಯಂತ್ರಗಳ ಮಧ್ಯದಲ್ಲಿ ಕುಳಿತಿರುವ ಅವನು ಮತ್ತೊಂದು ಯಂತ್ರದಂತೆ ಕಂಡುಬಿಡುತ್ತಾನೆ"* ಎನ್ನುವ ಮಾತು ಧ್ವನಿಪೂರ್ಣವಾಗಿದೆ. ಸಮಕಾಲೀನ ಬದುಕು ಜೀವಂತಿಕೆ, ಚೈತನ್ಯ, ಅನನ್ಯತೆಗಳನ್ನು ಕಳೆದುಕೊಂಡು ಏಕರೂಪಗೊಂಡು ಯಾಂತ್ರಿಕವಾಗಿರುವುದನ್ನು ಉತ್ತಮವಾಗಿ ಧ್ವನಿಸುತ್ತದೆ.

'ನಿರ್ವಾಣ' ಹಾಗೂ 'ಮನೀಷೆ'ಯ ನಾಯಕರ ಸ್ಥಿತಿ ತಾತ್ವಿಕವಾಗಿ ಬೇರೆಯಾಗಿ ಕಾಣುವುದಿಲ್ಲ. ಕತೆಯ ಸಂದರ್ಭದಲ್ಲಿ ಇವರಿಗೆ ತಮ್ಮದಾದ ಹೆಸರುಗಳೂ ಇಲ್ಲ. ಇವರು ಎಲ್ಲವೂ ಇದ್ದು, ಏನನ್ನೊ ಕಳೆದುಕೊಂಡವರಂತೆ ಚಡಪಡಿಸುತ್ತಲೇ ಇರುತ್ತಾರೆ. ಕಳೆದುಕೊಂಡ ಅವ್ಯಕ್ತ ಭಾವ ಕೊನೆವರೆಗೂ ಕಾಡುತ್ತಲೇ ಇರುತ್ತದೆ. ಕೊನೆಗೆ ಅವರು ಕಳೆದುಕೊಂಡದ್ದು ಏನು? ಎಂಬುದು ಈ ನವ ವಸಾಹತುಶಾಹಿ ಬದುಕಿನ ಸಾಮಾನ್ಯ ಸಂಗತಿಯೆನಿಸುತ್ತದೆ. ಸ್ವತಃ 'ತಾವ್ಯಾರು' ಎಂಬ ಪ್ರಶ್ನೆ ಎರಡು ಕತೆಗಳ ಪ್ರಧಾನ ಪಾತ್ರಗಳಿಗೆ ಬರುತ್ತದೆ. ಈ ಪ್ರಶ್ನೆಯನ್ನು ಎದುರಿಸಲಾರದೆ, ಗೊಂದಲಗೊಂಡು ಓಡಿ ಹೋಗುವಲ್ಲಿ ತಮ್ಮತನವನ್ನೇ ತಾವು ತೊರೆದಿರುವುದನ್ನು ಸೂಕ್ಷ್ಮವಾಗಿ ಕಥೆ ದಾಖಲಿಸುತ್ತದೆ.

ಬಾಲ್ಯದ ಗೆಳೆಯ ಹಲವು ವರ್ಷಗಳ ನಂತರ ಮನೆಗೆ ಬಂದಾಗಲೂ, ಪ್ರೀತಿ, ವಿಶ್ವಾಸದಿಂದ ಕಾಣುವ ಬದಲು ಈ ಹಿಂದಿನಂತೆಯೇ ಹಣ ಬೇಡಿ ಬಂದಿರಬೇಕೆಂದು ಭಾವಿಸಿ ಅವನಾಡುವ ವ್ಯಂಗ್ಯದ ನುಡಿಗಳು, ಇಂದಿನ ಆಧುನಿಕ ದಿನಗಳ ಬದುಕು ಮಾನವೀಯ ಸಂಬಂಧಗಳಿಂದ ದೂರವಾಗಿ ಹಣ, ಅಧಿಕಾರ, ಅಂತಸ್ತುಗಳೇ ನಮ್ಮ ಮೌಲ್ಯ, ಆದರ್ಶಗಳಾಗಿ ಬದಲಾಗುವುದನ್ನು ಕಥೆ ದಾಖಲಿಸುತ್ತಲೇ ಇಂದಿನ ಹಣ ಪ್ರಧಾನ ಸಂಸ್ಕೃತಿಯನ್ನು ಪ್ರಶ್ನಿಸುತ್ತದೆ. ಶಾಪಿಂಗ್ ಮಾಡುವುದರಿಂದ ಖುಷಿ ಪಡುವ ಸಂಸಾರವನ್ನು ತೋರುತ್ತಲೇ ಕೊಳ್ಳುಬಾಕುತನದ ಸರಕು ಸಂಸ್ಕೃತಿಯ ಬಗೆಗೂ ಗಮನಸೆಳೆಯುವಲ್ಲಿ ಕಥೆ ಯಶಸ್ವಿಯಾಗಿದೆ.

ನಾಯಕ ತಾನ್ಯಾರು ಎಂಬ ಯೋಚನೆಯಲ್ಲಿಯೇ ತನ್ನ ದೈನಂದಿನ ಜೀವನ ಕ್ರಮವೆಲ್ಲಾ ಅಸಂಬದ್ಧವಾಗಿ ಮೂಡಿಬಂದು ಅವನನ್ನು ರಸ್ತೆಯಲ್ಲಿ ಸಾವಿನ ಅಂಚಿಗೆ ಕರೆದೊಯ್ದಿದ್ದವು. ಈ ನಡುವೆ ಅವನು ತನ್ನದಲ್ಲದ ದಾರಿಯಲ್ಲಿ ಕುರುಡಾಗಿ ಸಾಗಿದ್ದನ್ನು ಗಮನಿಸಬೇಕು. ಇದು ನಮ್ಮದಲ್ಲದ ಜೀವನ ಕ್ರಮವನ್ನು ರೂಢಿಸಿಕೊಂಡಿದ್ದರಿಂದಾದ ಆಘಾತ ಎಂಬುದನ್ನು ಕಥೆ ಸೂಚ್ಯವಾಗಿಸುತ್ತದೆ. ಇನ್ನು ಹಿಮ್ಮುಖ ಚಲಿಸುವಂತೆಯೂ ಇಲ್ಲ. ಏಕೆಂದರೆ ಇದು ಏಕಮುಖ ರಸ್ತೆ. ನಾವು ನಮ್ಮ ಸಾಂಪ್ರದಾಯಿಕ ಬದುಕಿಗೆ ಮತ್ತೆ ಮರಳಲಸಾಧ್ಯ. ಇಂದು ನವೀನ ಹಾಗೂ ಪಾರಂಪರಿಕ ಬದುಕಿನೊಂದಿಗೆ ಇಂದಿನ ಸಮಾಜ ಪ್ರಜ್ಞೆಯೊಂದಿಗೆ ಹೆಜ್ಜೆಹಾಕಬೇಕಿದೆ ಎನ್ನುವಲ್ಲಿ ಕಥೆಗಾರರ ಕಾಣ್ಕೆಯೂ ಕಾಣಿಸಿಕೊಂಡಿದೆ ಎನ್ನಬಹುದು.

ಹತ್ತು ವರ್ಷ ಜೊತೆಗೆ ಜೀವನ ಸಾಗಿಸಿದ ಹೆಂಡತಿಯೂ ಅವನಿಗೆ ಅಸಹ್ಯವಾಗಿ ಕಂಡಿದ್ದು, ಅವನ ಇದುವರೆಗಿನ ಕಾಲದ ಜಗತ್ತೇ ಆಗಿದ್ದ ಕಾರ್ಖಾನೆ, ಯಂತ್ರ, ಅರ್ಜಿ, ಸಿನಿಮಾ, ಕ್ರಿಕೆಟ್, ಕ್ಯಾಸೆಟ್, ಹೋಟಲ್ ಮೊದಲಾದವ್ಯಾವುವೂ ಕಥೆಯಾಗಲು ಯೋಗ್ಯವಲ್ಲ ಎನ್ನುವಲ್ಲಿ, ಅವೆಲ್ಲವುಗಳ ಕುರಿತು ಅವನ ಅಸಮಾಧಾನ, ಅತೃಪ್ತಿಯನ್ನು ಗಮನಿಸಬಹುದು. ಕೊನೆಗೆ ತನ್ನ ಬಾಲ್ಯ, ಹವ್ಯಾಸ, ಮಾಸ್ತರರು, ಅಮ್ಮ ನೆನಪಾಗುವಂತದ್ದನ್ನು ನೋಡಿದರೆ, ತಾನು ಕಳೆದುಕೊಂಡಿರುವಂತದ್ದೇನು? ಕಳೆದುಕೊಂಡಿರುವಂತಹ ಅವ್ಯಕ್ತ ಭಾವ ಮೂಡಲು ತನ್ನಲ್ಲಿ ಕಾರಣವಾದದ್ದೇನೆಂಬ ಅಂಶ ಮನವರಿಕೆಯಾಗುತ್ತದೆ.

ಮನೀಷೆಯ ಕಥಾನಾಯಕ ಆಧುನಿಕತೆಯಿಂದಾಗಿಯೇ ಬದುಕನ್ನು ಕಟ್ಟಿಕೊಂಡಿದ್ದಾನಾದರೂ ಆ ಬಗೆಗೆ ಅವನಿಗೇನೂ ಒಳ್ಳೆಯ ಅಭಿಪ್ರಾಯವಿಲ್ಲ. ಆಧುನಿಕತೆ, ಶ್ರೀಮಂತಿಕೆಗಳು ತನ್ನ ಶಾಂತಿ, ನೆಮ್ಮದಿ, ಆದರ್ಶಗಳನ್ನು ಹಾಳುಮಾಡಿದವು ಎಂದೇ ಕೊರಗುತ್ತಾನೆ. ತನ್ನ ಬಾಲ್ಯ, ಶಾಲೆ, ಟೀಚರ್ ಮೊದಲಾದವುಗಳನ್ನು ನೆನೆಯುತ್ತಾ ಆಧುನಿಕತೆ, ಅತಿಯಾದ ನಗರೀಕರಣದ ಕುರಿತಾದ ತನ್ನ ಅತೃಪ್ತಿ, ಅಸಮಾಧಾನವನ್ನು ತೋರುತ್ತಾನೆ. ಇದೇ ರೀತಿಯ ಸಂದರ್ಭವನ್ನು ನಾವು ವಿವೇಕರ 'ನಿರ್ವಾಣ'ದಲ್ಲೂ ಕಾಣಬಹುದಾಗಿದೆ.

'ಹುಲಿ ಸವಾರಿ' ವಿವೇಕರ ಅತ್ಯುತ್ತಮ ರಚನೆಗಳಲ್ಲಿ ಒಂದು. " *ಇಪ್ಪತ್ತನೆಯ ಶತಮಾನದಲ್ಲಿ ವಸಾಹತುಶಾಹಿಯು ತಂದ ಆಧುನಿಕತೆಯನ್ನು ನಮ್ಮ ಸಂಸ್ಕೃತಿಯು ನಿಭಾಯಿಸಲು ಪಟ್ಟ ಪ್ರಯತ್ನದ ರೂಪಕವೆಂಬಂತೆ 'ಬೈಸಿಕಲ್ ಸವಾರಿ'ಯ ರೂಪಕವನ್ನು ಕುವೆಂಪು ತಮ್ಮ ಕಾದಂಬರಿಯಲ್ಲಿ ಸೃಷ್ಟಿಸಿದ್ದಾರಷ್ಟೆ. ಶತಮಾನ ಕಳೆಯುವಷ್ಟರಲ್ಲಿ ಏಷ್ಯಾ ಮತ್ತು ಆಫ್ರಿಕಾದ ಎಲ್ಲಾ ದೇಶಗಳು ಸ್ವತಂತ್ರವಾದರೂ ನವ ವಸಾಹತುಶಾಹಿಯ ಕಪಿಮುಷ್ಟಿಯಿಂದ*

ತಪ್ಪಿಸಿಕೊಳ್ಳಲು ಮಾತ್ರ ಸಾಧ್ಯವಾಗಲಿಲ್ಲ. ಜಾಗತೀಕರಣ, ಮುಕ್ತ ಮಾರುಕಟ್ಟೆ, ಹೊಸ ಆರ್ಥಿಕ ನೀತಿ, ಬಹುರಾಷ್ಟ್ರೀಯ ಸಂಸ್ಥೆಗಳ ಸ್ಥಾಪನೆ ಮೊದಲಾದ ವಿದ್ಯಮಾನಗಳು ಸ್ಥಳೀಯ ಸಂಸ್ಕೃತಿ ಮತ್ತು ಜೀವನಕ್ರಮಗಳ ಮೇಲೆ ಹೂಡಿದ ಹೊಸ ಒತ್ತಡಗಳು ಎಷ್ಟು ಸಂಕೀರ್ಣವೂ, ಸಮಸ್ಯಾತ್ಮಕವೂ ಆದವೆಂದರೆ ಅವುಗಳನ್ನು ಗ್ರಹಿಸಲು 'ಬೈಸಿಕಲ್ ಸವಾರಿ'ಯ ರೂಪಕ ಸಾಕಾಗುವುದಿಲ್ಲ. ಹಾಗಾಗಿ ನಮ್ಮ ಸಂದರ್ಭವು ವಿವೇಕ ಶಾನಭಾಗರ ಮೂಲಕ 'ಹುಲಿ ಸವಾರಿ' ಎಂಬ ಹೊಸ ರೂಪಕವೊಂದನ್ನು ಸೃಷ್ಟಿಸಿಕೊಂಡಿದೆ." (ಪು.229, ಪುಸ್ತಕ ಸಮಯ, ಅಶೋಕ, ಟಿ.ಪಿ.ಅಕ್ಷರ ಪ್ರಕಾಶನ, ಹೆಗ್ಗೋಡು, 2011.)

ವಿವೇಕರ 'ಹುಲಿ ಸವಾರಿ' ಕತೆಯಲ್ಲಿ ಸ್ಥಳೀಯರ ಆತಂಕ, ಅನುಮಾನ, ಪ್ರತಿರೋಧಗಳನ್ನು ಲೆಕ್ಕಿಸದೆ ಕೇವಲ ಆರ್ಥಿಕ ಲಾಭಕ್ಕಾಗಿ ಆಫ್ರಿಕಾದಲ್ಲಿ ಕಂಪನಿಯೊಂದನ್ನು ಸ್ಥಾಪಿಸಲು 'ಮ್ಯಾನೇಜಮೆಂಟ್ ಗೇಮ್' ರೂಪಿತವಾಗಿದೆ. ಈ ಕತೆ ನಮ್ಮ ಊರು, ಹಳ್ಳಿಗಳಲ್ಲಿ ಸಂಭವಿಸುತ್ತಿರುವ ವಿದ್ಯಮಾನಗಳನ್ನು ಸೂಚ್ಯವಾಗಿ ಧ್ವನಿಸುವಂತೆ ಇಡೀ ಜಾಗತೀಕ ವಿದ್ಯಮಾನಗಳಿಗೂ ಹಿಡಿದ ಕನ್ನಡಿಯಾಗಿಬಿಟ್ಟಿದೆ. ವ್ಯವಹಾರ, ಹಣ ಗಳಿಕೆಗಳೆ ಪ್ರಥಮ ಆದ್ಯತೆಗಳಾದಾಗ ಮನುಷ್ಯ ಕಳೆದುಕೊಳ್ಳುವುದೇನು ಎಂಬುದು ವಿವೇಕ ಶಾನಭಾಗರ ಹಲವು ಕಥೆಗಳ ಶೋಧವಾಗಿದೆ.

ಪ್ರಸ್ತುತ ಕತೆಯಲ್ಲಿ 'ಮ್ಯಾನೇಜಮೆಂಟ್ ಗೇಮ್'ನ ಭಾಗವಾಗಿ ಇಂಗ್ಲೀಷ್ ಮೂಲದ ಜೆಫ್, "ಆಫ್ರಿಕಾದಲ್ಲಿ ನಾವು ವ್ಯಾಪಾರ ವಿಸ್ತರಿಸಿದರೆ ಲಾಭ ಇದೆ" ಎಂದಾಗ ಆಫ್ರಿಕಾದ ಉಚೆ ವಿಚಲಿತನಾಗುತ್ತಾನೆ. ಭಾರತೀಯ ನಿರೂಪಕನೊಂದಿಗೆ ಉಚೆ ಆಡುವ, "ಅದು ಜನರನ್ನು *ನಾಶ ಮಾಡುತ್ತದೆ. ನೀನೂ ಯಾಕೆ ಹೀಗನ್ನತ್ತೀ... ನೋಡು ಜೆಫ್‌ಗಿಂತ ನಿನಗೆ ಇದು ಹೆಚ್ಚು ಅರ್ಥವಾಗಬೇಕು? ನೂರಾರು ಜಾತಿ ಧರ್ಮ ದೇವರು ಇರುವ ನಿಮಗೂ ನಮಗೂ ಆಳದಲ್ಲಿ ಬಹಳ ಅಂತರವಿಲ್ಲ. ನಮ್ಮಲ್ಲಿ ಪ್ರತಿ ಊರಿಗೂ ಒಂದೊಂದು ಜೀವನ ವಿಧಾನವಿದೆ"* ಎನ್ನುವ ಮಾತುಗಳಲ್ಲಿ ಬಹುರಾಷ್ಟ್ರೀಯ ಕಂಪನಿಯೊಂದು ಸ್ಥಳೀಯ ಮಾರುಕಟ್ಟೆ ಪ್ರವೇಶದ ಮೂಲಕ ಅಯಾ ಸ್ಥಳೀಯ ಸಂಸ್ಕೃತಿ, ಜೀವನ, ಭಾಷೆ ಮೊದಲಾದವುಗಳ ಮೇಲೆ ಉಂಟು ಮಾಡಲಿರುವ ದುಷ್ಪರಿಣಾಮಗಳ ಕುರಿತ ಆತಂಕವನ್ನು ತೋರುತ್ತದೆ.

ಮುಂದುವರೆದು ಉಚೆ, "*ನಾವೆಲ್ಲ ಇನ್ನೂ ಗುಲಾಮರು. ಹೆಸರಿಗೆ ಮಾತ್ರ ನಮ್ಮಲ್ಲಿ ಪ್ರಜಾಪ್ರಭುತ್ವ ಇದೆ. ನನ್ನ ದೂರದ ಸಂಬಂಧಿಯೊಬ್ಬ ಅಧ್ಯಕ್ಷನಾಗಿದ್ದ. ಅವನನ್ನು ಕೊಂದು ಈಗಿರುವಾತ ಮಿಲಿಟರಿ ಆಡಳಿತ ತಂದ. ಚುನಾವಣೆಯ ನಾಟಕವಾಡಿ ಹದಿನೈದು ವರ್ಷಗಳಿಂದ ಇದ್ದಾನೆ. ನಮ್ಮಲ್ಲಿ ಪ್ರೆಸಿಡೆಂಟ್ ಅನ್ನುವ ಶಬ್ದವನ್ನು ಅವನಿಗೆ ಬಿಟ್ಟರೆ ಬೇರೆ ಯಾರಿಗೂ ಬಳಸಬಾರದು. ನಮ್ಮ ದೇಶದಲ್ಲಿ ನಮ್ಮ ಕಂಪನಿಗೆ ಚೇರಮನ್ ಇದ್ದಾನೆ, ನಿಮ್ಮಲ್ಲಿಯ ಹಾಗೆ ಪ್ರೆಸಿಡೆಂಟ್ ಇಲ್ಲ... ನಮ್ಮ ದೇಶ ಒಂದು ಕಾಲದಲ್ಲಿ ಬಹಳ ಕೋಕೋ ಬೆಳೆಯುತಿತ್ತು. ಹಿಂದಿನ ಆಡಳಿತ ಅದರ ರಫ್ತಿಗಾಗಿ ದೊಡ್ಡ ಸಂಗ್ರಹಾಲಯವನ್ನು ನಿರ್ಮಿಸಿತ್ತು. ಅದು ಹಿಂದಿನ ಸರ್ಕಾರದ ದೊಡ್ಡ ಸಾಧನೆಯಾಗಿ ಜನರಿಗೆ ಕಂಡಿದ್ದರಿಂದ ಈತ ಅವುಗಳನ್ನೆಲ್ಲ ನಾಶ ಮಾಡಿದ. ಜನರನ್ನು ಬಡವರನ್ನಾಗಿ ಮಾಡಿದ. ಆದರೆ ಅವರ ಕೊಳ್ಳುವ ಆಸೆಯನ್ನು ಹೆಚ್ಚಿಸಿದ. ಈ ರಾಜಕೀಯ ಹುನ್ನಾರಿನಲ್ಲಿ ಬೇರೆ ದೇಶದ ದೊಡ್ಡ ಕಂಪನಿಗಳೆಲ್ಲ ಶಾಮೀಲಾಗಿದ್ದವು. ನಮ್ಮಲ್ಲಿ ಏನು ತಯಾರಾಗದಂತೆ ಮಾಡಿದ. ನಾನು ಹಾಕಿರುವ ಈ ಶರ್ಟು ಕೂಡ ಬೇರೆ ಯಾರೋ ಮಾಡಿ ನಮಗೆ ಕೊಡಬೇಕು. ಇದ್ದ*

ದೇಶೀ ಉದ್ಯಮಗಳೆಲ್ಲ ಈ ಹೊಸ ತಂತ್ರಜ್ಞಾನ ಇಲ್ಲದೇ, ಸರ್ಕಾರದ ಬೆಂಬಲವಿಲ್ಲದೇ ಸೊರಗಿ ಸಾಯುತ್ತಲಿವೆ. ನಮ್ಮ ನೆಲದಲ್ಲಿ ಒಂದಿಷ್ಟು ಪೆಟ್ರೋಲ್, ಎಣ್ಣೆ ಸಿಗುವುದರಿಂದ ಬದುಕಿದ್ದೇವೆ. ಅದೆಲ್ಲ ಸರ್ಕಾರಕ್ಕೆ ಸೇರಿದ್ದು. ಆಹಾರ ವಿತರಣೆಯ ಸೂತ್ರ ಇರುವುದು ಸರ್ಕಾರದ ಕೈಯಲ್ಲಿ. ಅವರು ವಿತರಿಸುವುದು ದೊಡ್ಡ ಕಂಪನಿಗಳ ಉತ್ಪಾದನೆಗಳು. ನಮ್ಮ ರುಚಿ, ವಾಸನೆ, ಬಟ್ಟೆ, ಆಹಾರದ ಪ್ರಮಾಣ ಬದಲಾಗತೊಡಗಿದೆ. ಎಲ್ಲರ ಮನೆ ಊಟವೂ ಒಂದೇ ರೀತಿಯಾಗುತ್ತಲಿದೆ. ಯಾರಿಗೂ ವೈವಿಧ್ಯ ಬೇಕಿಲ್ಲ. ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸಿ ಮಾರುವುದು ಬೇಕು. ಹೇರದೇ ಇದ್ದರೆ, ಆಯ್ಕೆ ಇದ್ದರೆ ಯಾರು ತಾನೆ ಕೊಳ್ಳುತ್ತಾರೆ? ನಾವು ಅವರಿಗಾಗಿ ದುಡಿಯುವುದು, ಅವರು ಮಾಡಿದ್ದನ್ನು ಕೊಳ್ಳುವುದು. ನಾವೆಲ್ಲ ಕಡಿಮೆ ಬೆಲೆಗೆ ಸಿಗುವ ಕೂಲಿಗಳಾಗುತ್ತಿದ್ದೇವೆ. ನನ್ನ ಮನೆಯಲ್ಲಿ ನನ್ನ ಇಬ್ಬರು ಚಿಕ್ಕಪ್ಪಂದಿರು ಕೆಲಸ ಕಳೆದುಕೊಂಡು ಕೂತಿದ್ದಾರೆ. ಕಾರ್ಖಾನೆ ಮುಚ್ಚಿ ಅವರಿಗೆ ಇಪ್ಪತ್ತು ಸಾವಿರ ಕೊಟ್ಟು ಮನೆಗೆ ಕಳಿಸಿದರು. ಒಬ್ಬನಂತೂ ಕೆಲಸ ಮಾಡುವಾಗ ತನ್ನ ಎಡಗೈಯ ನಾಲ್ಕು ಬೆರಳುಗಳನ್ನು ಕತ್ತರಿಸಿಕೊಂಡಿದ್ದಾನೆ”. (ಹುಲಿ ಸವಾರಿ, ವಿವೇಕ ಶಾನಭಾಗ) ಎನ್ನುತ್ತಾನೆ. ಉಚೆಯ ಪ್ರತಿ ಮಾತುಗಳು, ಇಂದು ವಸಾಹತುಶಾಹಿಯಿಂದ ಬಿಡುಗಡೆ ಹೊಂದಿದ್ದರೂ, ನೈಜವಾದ ಸ್ವತಂತ್ರ್ಯ ದೊರೆಯದೆ ನವ ವಸಾಹತುಶಾಹಿಯ ತೆಕ್ಕೆಗೆ ಬಿದ್ದಿರುವ ಎಲ್ಲಾ ತೃತೀಯ ಜಗತ್ತಿನ ರಾಷ್ಟ್ರಗಳು ಎದುರಿಸುತ್ತಿರುವ ಸಾಂಸ್ಕೃತಿಕ ಬಿಕ್ಕಟ್ಟನ್ನು ಎಳೆ ಎಳೆಯಾಗಿ ಬಿಚ್ಚಿಡುತ್ತವೆ. ತಮ್ಮ ವ್ಯಾಪಾರ ವಹಿವಾಟಿನ ವಿಸ್ತರಣೆಗಾಗಿ ಬಹುರಾಷ್ಟ್ರೀಯ ಕಂಪನಿಗಳು ಸ್ಥಳೀಯ ಸರ್ಕಾರ, ಜಾಗತಿಕ ಒಕ್ಕೂಟ, ವಿಶ್ವಸಂಸ್ಥೆ ಮೊದಲಾದವುಗಳ ಜೊತೆ ಸೇರಿ ಮಾಡುವ ಹುನ್ನಾರಗಳನ್ನು ಬಯಲುಮಾಡುತ್ತವೆ. ನವ ವಸಾಹತು ಶಕ್ತಿಗಳು ಒಂದು ಸ್ಥಳೀಯ ಮಾರುಕಟ್ಟೆ, ಉತ್ಪಾದನಾ ವಲಯ, ಅಲ್ಲಿನ ಜನರ ಕೌಶಲಗಳನ್ನು ಹಾಳುಗೆಡುವುದರ ಮೂಲಕ ಒಂದು ಸಮಾಜದ ಅಸ್ಮಿತೆಯನ್ನು ನಾಶಮಾಡುವ ಕರಾಳ ಮುಖವನ್ನು ಉಚೆ ತನ್ನ ಸರಳ ಮಾತುಗಳಲ್ಲಿ ವಿವರಿಸುತ್ತಾನೆ.

ಮ್ಯಾನೇಜ್‌ಮೆಂಟ್ ಗೇಮ್ ಪ್ರಕಾರ ಆಫ್ರಿಕಾದಲ್ಲಿ ತಮ್ಮ ಕಂಪನಿಯ ವ್ಯಾಪಾರ, ವಹಿವಾಟನ್ನು ವಿಸ್ತರಿಸಲು ತೀವ್ರ ವಿರೋಧ ವ್ಯಕ್ತಪಡಿಸುವ ಆಫ್ರಿಕಾದ ಉಚೆಯನ್ನು ಜೆಫ್ ಕೆಲಕಾಲ ಹೊರಗೆ ಕರೆದೊಯ್ದು ಅವನನ್ನು ಅದಕ್ಕೆ ಒಪ್ಪಿಸಿಕೊಂಡು ಬರುತ್ತಾನೆ. ಅವನನ್ನು ಒಪ್ಪಿಸಲು ಹೂಡಿದ ತಂತ್ರ ಯಾವುದು ಎನ್ನುವುದು ಕತೆಯ ಓದುಗರಿಗೆ ತಿಳಿಯುವುದಿಲ್ಲ. ಅವನಿಗೆ ಬೆದರಿಸಿದನೇ? ಆಮಿಷ ಒಡ್ಡಿದನೇ? ಅವನ ವಿರೋಧವನ್ನು ಹತ್ತಿಕ್ಕಲು ಬಯಸಿದ ತಂತ್ರ ಒಗಟುಒಗಟಾಗಿಯೇ ಉಳಿಯುತ್ತದೆ. ವರ್ತಮಾನದ ಬದುಕಿನಲ್ಲಿ ನವ ವಸಾಹತು ಶಕ್ತಿಗಳು ಅದರ ವಿರುದ್ಧವಿರುವ ಬಂಡಾಯ, ವಿರೋಧವನ್ನು, ಜನರ ಹೋರಾಟವನ್ನು ಹೇಗೆ ಹತ್ತಿಕ್ಕುತ್ತದೆಂಬುದನ್ನು ಈ ಮೂಲಕ ಉತ್ತಮವಾಗಿ ಚಿತ್ರಿಸಿದ್ದಾರೆ. ಅದು ಏನು? ಹೇಗೆ? ಅನ್ನುವುದು ಯಾರಿಗೂ ಸ್ಪಷ್ಟವಿಲ್ಲ. ಆದರೆ ಅದು ತನಗೆ ಬೇಕಾದ ಹಾಗೆ ಅಧಿಕಾರ ಚಲಾಯಿಸಬಲ್ಲದು ಎಂಬುದನ್ನು ಕತೆ ಮೌನದಲ್ಲೇ ಹೇಳಿರುವುದು ಹೆಚ್ಚು ಧ್ವನಿಪೂರ್ಣವಾಗಿದೆ. ಈ ನಿಟ್ಟಿನಲ್ಲಿ ‘ಹುಲಿ ಸವಾರಿ’ ಒಂದು ಉತ್ತಮ ರಚನೆ.

ವಿವೇಕರ ‘ಹುಲಿ ಸವಾರಿ’ ಕಥೆ ತೋರುವಂತೆ, ಕಾರ್ಪೋರೇಟ್ ಸಂಸ್ಥೆಗಳ ಲಾಭ ಪ್ರವೃತ್ತಿ, ಆದಾಯ, ಉತ್ತಮ ವಹಿವಾಟಿಗಾಗಿ ಯಾವುದೇ ಮಾರ್ಗವನ್ನು ತುಳಿಯಬಲ್ಲವು ಎಂಬುದನ್ನು ತೋರುವ ವಸುಧೇಂದ್ರರ ಕತೆ ‘ಹಲೋ ಭಾರತಿ’. ನಿರೂಪಣೆ, ವಸ್ತು

ವಿವರಗಳಲ್ಲಿ ಲಘು ದಾಟಿಯೆನಿಸಿದರೂ ಸೂಕ್ಷ್ಮ ವಿವರಗಳೊಂದಿಗೆ ಸಂಕೀರ್ಣ ವಿಚಾರವೊಂದನ್ನು ಚರ್ಚಿಸುತ್ತದೆ. ಕಾರ್ಪೋರೇಟ್ ಸಂಸ್ಥೆಗಳ ಲಾಭ ಪ್ರವೃತ್ತಿ, ಆದಾಯ, ಉತ್ತಮ ವಹಿವಾಟಿಗಾಗಿ ಯಾವುದೇ ಮಾರ್ಗವನ್ನು ತುಳಿಯಬಲ್ಲವು ಎಂಬುದನ್ನು ಕತೆ ಎತ್ತಿ ತೋರುತ್ತದೆ. ಮಾಹಿತಿ ತಂತ್ರಜ್ಞಾನದ ಮಹತ್ವದ ಬೆಳವಣಿಗೆಯಲ್ಲಿ ಫೋನ್ ಸೆಕ್ಸ್ ಕೂಡ ಒಂದು. ಲೈಂಗಿಕತೆ ಕುರಿತು ಮಾತನಾಡುವುದೇ ಮಹಾಪಾಪ. ಅದು ಸಂತಾನೋತ್ಪತ್ತಿಯ ಮಾರ್ಗ ಮಾತ್ರವೆಂದು ಚಿಂತಿಸುವ ಕಾಲವೊಂದು ನಮ್ಮಲ್ಲಿತ್ತು. ಈಗಲೂ ಇದೆ. ಆದರೆ ಬದಲಾದ ಆಧುನಿಕ ಬದುಕಿನಲ್ಲಿ ಈ ರೀತಿಯ ಮಡಿವಂತಿಕೆ ಮಾಯವಾಗಿ ವಿಚಿತ್ರವಾದ ಫೋನ್ ಸೆಕ್ಸ್‌ಗೆ ಭಾರತೀಯ ಯುವ ಮನಸ್ಸುಗಳು ಹಾತೊರೆಯುವುದನ್ನು ನೋಡಿದರೆ ನಮ್ಮ ಸಾಂಸ್ಕೃತಿಕ ಬದುಕಿನಲ್ಲಿಯ ಸ್ಥಿತ್ಯಂತರಗಳನ್ನು ಢಾಳವಾಗಿಯೇ ಗುರುತಿಸಬಹುದು.

ಕತೆಯಲ್ಲಿ ಸ್ಟೀವ್ ಭಾರತದ ಜನಜೀವನದ ಬಗ್ಗೆ, "*ಭಾರತವೆಂದರೆ ಒಂಟೆ, ಆನೆಯ ಮೇಲೆ ಜನರು ತಿರುಗುವ ದೇಶವಲ್ಲ. ಅಥವಾ ಅಲ್ಲಿ ಬರೀ ಭಿಕಾರಿಗಳೇ ತುಂಬಿದ್ದಾರೆ ಎನ್ನುವ ಕಲ್ಪನೆಯೂ ಬೇಡ. ಪ್ರಪಂಚದ ಅತ್ಯಾಧುನಿಕ ಜೀವನ ಶೈಲಿ ಈಗ ಭಾರತದಲ್ಲಿ ಲಭ್ಯ.*" (ಹಲೋ ಭಾರತಿ, ವಸುಧೇಂದ್ರ) ಹಾಗೂ "*ಭಾರತದಲ್ಲಿ ವಿದ್ಯಾಭ್ಯಾಸವೆಲ್ಲವೂ ಇಂಗ್ಲಿಷ್‌ನಲ್ಲಿಯೇ ನಡೆಯುತ್ತದೆ. ಅಲ್ಲಿಯ ಸರ್ಕಾರಗಳು ಪ್ರಾದೇಶಿಕ ಭಾಷೆಗಳನ್ನು ಮೂಲೆಗೆ ತಳ್ಳಿ ಇಂಗ್ಲಿಷ್ ಭಾಷೆಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿರುವದನ್ನು ಅಂಕಿ ಅಂಶಗಳೊಂದಿಗೆ ವಿವರಿಸುತ್ತಾ, ನಗರದಲ್ಲಿಯೇ ಬೆಳೆದ ನವ ಪೀಳಿಗೆಯ ಯುವಕರಿಗೆ ಇಂಗ್ಲಿಷ್ ಭಾಷೆಯನ್ನು ಬಿಟ್ಟು ಬೇರೆ ಭಾಷೆಯು ಬರುವುದಿಲ್ಲ*" (ಹಲೋ ಭಾರತಿ, ವಸುಧೇಂದ್ರ) ಎಂಬ ವಿವರಗಳಲ್ಲಿ ನಮ್ಮ ಸಮಾಜದ ಬದಲಾದ ಚಿತ್ರಣ, ಭಿನ್ನ ಜೀವನಶೈಲಿ ಅನುಕರಣೆ ಹಾಗೂ ಇಂಗ್ಲಿಷ್ ಭಾಷೆಯಿಂದ ದೇಶ ಭಾಷೆಗಳಿಗೆ ಒದಗಿದ ದುರ್ಗತಿಯನ್ನು ಕಥೆ ವ್ಯಂಗ್ಯದಲ್ಲಿ ಚಿತ್ರಿಸುತ್ತದೆ. ಮಾರ್ಕ್‌ನ, "*ಎಲ್ಲಾ ನಮ್ಮ ತಾತ, ಮುತ್ತಾತಂದಿರು ಕೊಟ್ಟ ಕೊಡುಗೆ*" (ಹಲೋ ಭಾರತಿ, ವಸುಧೇಂದ್ರ) ಎನ್ನುವ ಹೆಮ್ಮೆಯ ನಗುವಿನೊಂದಿಗೆ ವಸಾಹತು ಕಾಲದ ಅಮಾನವೀಯ ಅನುಭವಗಳನ್ನು ನೆನಪಿಗೆ ತರುತ್ತದೆ. ಆ ಮೂಲಕ ವಸಾಹತುಶಾಹಿಯ ಹೊಸ ಅವತರಣಿಕೆಯೇ ಆದ ನವ ವಸಾಹತುಶಾಹಿಯ ಬಗೆಗೆ ಪ್ರಜ್ಞೆಯೊಂದಿಗೆ ವ್ಯವಹರಿಸಬೇಕಾದ ಎಚ್ಚರಿಕೆಯನ್ನು ಕತೆ ನೀಡುತ್ತದೆ.

ಕಾಮವೆನ್ನುವುದು ಮನುಷ್ಯನ ಅತೀವ ಬಯಕೆಗಳಲ್ಲೊಂದು. ಸಮಾಜದಲ್ಲಿ ಇದು ಯಾವ ಕಾಲಕ್ಕೂ ತಗ್ಗುವಂತದ್ದಲ್ಲ. ಈ ಕಾಮದ ಬಯಕೆ, ಬೇಡಿಕೆಗಳನ್ನೆ ಕಂಪನಿಯೊಂದು ತನ್ನ ಹಣಗಳಿಕೆಯ ಬಂಡವಾಳವನ್ನಾಗಿಸುತ್ತದೆ. ಇದಕ್ಕಾಗಿ ಕಾಲ್‌ಸೆಂಟರ್ ಒಂದನ್ನು ತೆರೆದು, ಇಂಗ್ಲೆಂಡ್‌ನ ಹುಡುಗ, ಹುಡುಗಿ, ಸಲಿಂಗಿಗಳು ಗುರುತು ಪರಿಚಯವಿಲ್ಲದ ಭಾರತೀಯ ಹುಡುಗ ಹುಡುಗಿಯರೊಂದಿಗೆ ತೀರ ಆಪ್ತವಾಗಿ ಮಾತನಾಡಿ ಅವರಿಗೆ ಮೈಥುನದ ಸಂತೃಪ್ತಿಯನ್ನು ಮಾತನಾಡಿಯೇ ನೀಡುವಂತಹದ್ದು ಈ ಯೋಜನೆಯ ಉದ್ದೇಶ.

ಕತೆಯಲ್ಲಿ, ಈ ಯೋಜನೆಯನ್ನು ಪ್ರಾಯೋಗಿಕವಾಗಿ ನಡೆಸಲು ಕೋರಿದಾಗ ಭಾರತೀಯನಾದ ನಿರೂಪಕ, ಇಂತಹ ಯೋಜನೆಗಳಿಗೆಲ್ಲಾ ಭಾರತೀಯ ಯುವ ಮನಸ್ಸುಗಳು ಒಪ್ಪುತ್ತವೆಯೇ? ಎಂಬ ಯೋಚನೆಯಲ್ಲಿರುವಾಗಲೇ ನಿರೂಪಕನಿಗೇ ಅಚ್ಚರಿಯೆನಿಸುವಂತೆ, "*ವಿಪರೀತ ಖುಷಿಯೊಂದಿಗೆ ನಾವು ಅದಕ್ಕೆ ಸಿದ್ಧರಿದ್ದೇವೆ.* ಇದು

ನಮ್ಮ ಅತ್ಯಂತ ಖುಷಿಯ ದಿನವಲ್ಲವಾ?" (ಹಲೋ ಭಾರತಿ, ವಸುಧೇಂದ್ರ) ಎಂಬ ಪ್ರತಿಕ್ರಿಯೆಗಳು ನಮ್ಮ ಬದಲಾದ ಮನಸ್ಥಿತಿಯನ್ನು ಎತ್ತಿ ತೋರುತ್ತದೆ.

"ನಿಮ್ಮ ಕಾಲ್ ಸೆಂಟರ್‌ನ ವರ್ಷದ ರಜೆಗಳನ್ನು ನಾವು ನಿರ್ಧರಿಸುತ್ತೇವೆ. ನಿಮ್ಮ ಹಬ್ಬದ ದಿನಗಳಿಗೆ ನೀವು ರಜೆ ತೆಗೆದುಕೊಳ್ಳುವಂತಿಲ್ಲ. ನಿಮ್ಮ ದೀಪಾವಳಿ ನಮ್ಮ ಹುಡುಗರಿಗೆ ಗೊತ್ತಿಲ್ಲ. ಬೇಕಿದ್ದರೆ ನಮ್ಮ ಕ್ರಿಸ್‌ಮಸ್, ಗುಡ್‌ಫ್ರೈಡೇಗಳಿಗೆ ರಜೆ ತೆಗೆದುಕೊಂಡರೆ ನಮ್ಮ ಅಡ್ಡಿಯಿಲ್ಲ" ಎಂಬ ಸಂದೀಪ್‌ನ ಮಾತುಗಳು ಹಾಗೂ ಮಾಲ್ಕಂನ, "ನಿಮ್ಮ ಕಾಲ್‌ಸೆಂಟರ್‌ನ ಏಜಂಟ್‌ಗಳು ತಮ್ಮ ಹೆಸರನ್ನು ಬದಲಾಯಿಸಿಕೊಳ್ಳಬೇಕು. ನಿಮ್ಮ ದೇಶದ ಹೆಸರನ್ನು ಹೇಳಿದರೆ ನಮ್ಮ ಹುಡುಗರಿಗೆ ಉದ್ರೇಕವಾಗಲಿಕ್ಕಿಲ್ಲ. ಅಥವಾ ಮಾತನಾಡಲು ಆಸಕ್ತಿಯೂ ಮೂಡಲಿಕ್ಕಿಲ್ಲ. ಅದಕ್ಕೆ ಜೆಫ್, ಕ್ರಿಸ್, ಯಾನ್. ಮಿಷೆಲ್ ಎಂದೆಲ್ಲಾ ಹೆಸರಿಟ್ಟುಕೊಳ್ಳಬೇಕು. ಅದೇ ಹೆಸರಿನಿಂದಲೇ ಕಾಲ್‌ಗಳನ್ನು ಉತ್ತರಿಸಬೇಕು"

ಮೊದಲಾದ ವಸ್ತು ವಿವರಗಳಲ್ಲಿ ನಮ್ಮ ಸಂಪ್ರದಾಯ, ಪರಂಪರೆ, ಹಬ್ಬ ಹರಿದಿನಗಳು, ಅವುಗಳ ಆಚರಣೆಗಳಿಂದ ಮುಕ್ತವಾಗಿ, ನಮ್ಮ ಸಂಸ್ಕೃತಿಯ ಅನನ್ಯತೆಯನ್ನು ಬದಿಗಿರಿಸುವುದು ಮಾತ್ರವಲ್ಲದೇ, ವೈಯಕ್ತಿಕವಾಗಿಯೂ ನಾವೂ ನಾವಾಗಿರದೇ, ನಮ್ಮ ಹೆಸರನ್ನು ಬದಲಿಸಿ ಕೊಂಡು, ನಮ್ಮತನವನ್ನು ಕಳಚಿಕೊಂಡು ಯಾರದ್ದೋ ಸುಖ, ಸಂತೋಷ, ಲಾಭಕ್ಕಾಗಿ ಮೌಲ್ಯಹೀನವಾಗಿ ಹೋಗುವ ಸ್ಥಿತಿಯಿದೆ. ಅಂತರ್‌ಸಂಬಂಧಗಳಿಲ್ಲದೇ ಕೇವಲ ಹಣ ಗಳಿಕೆಗಾಗಿ ಗ್ರಾಹಕ–ವರ್ತಕ ಸಂಬಂಧದೊಂದಿಗೆ ಲೈಂಗಿಕತೆಗೆ ಇಳಿಯುವುದು ನೈತಿಕವೇ? ಜಾಗತೀಕರಣ ಉಂಟುಮಾಡುವ ಉದ್ಯೋಗ ಸೃಷ್ಟಿ, ಅಭಿವೃದ್ಧಿಯ ಮಾರ್ಗ ಇದುವೇ? ಈ ರೀತಿಯ ಬೆಳವಣಿಗೆ ನಮ್ಮ ಸಾಂಸ್ಕೃತಿಕ ಬದುಕಿನಲ್ಲಿ ಯಾವ ರೀತಿಯ ಸ್ಥಿತ್ಯಂತರಗಳಿಗೆ ಕಾರಣವಾಗ ಬಲ್ಲದು ಎಂಬುದನ್ನು ಗಂಭೀರವಾಗಿ ಆಲೋಚಿಸಬೇಕಿದೆ.

ವಸಾಹತುಶಾಹಿ ನಮ್ಮನ್ನು ಒಂದು ಬಗೆಯಲ್ಲಿ ಶೋಷಿಸಿದಂತೆಯೇ ಇನ್ನೊಂದು ರೀತಿಯಲ್ಲಿ ಅದು ನಮ್ಮನ್ನು ಉತ್ತಮ ರೀತಿಯಲ್ಲಿ ಪ್ರಭಾವಿಸಿದೆ. ಆ ರೀತಿಯ ಸಾಧ್ಯತೆ ಇಂದಿನ ನವವಸಾಹತುಶಾಹಿಗಿದೆಯೇ? ಎಂಬುದರ ಕುರಿತು ಚಿಂತಿಸಬೇಕಿದೆ. ವಸಾಹತು ಶಾಹಿಯು ನಮ್ಮಲ್ಲಿ ತಂದ ಆಧುನಿಕತೆಯ ಮಾದರಿಗೂ ಪ್ರಸ್ತುತ ನಾವು ಕಾಣುತ್ತಿರುವ ಜಾಗತೀಕರಣದ ಸಂದರ್ಭದ ಆಧುನಿಕತೆಗೂ ಸಾಕಷ್ಟು ವೈರುಧ್ಯಗಳಿರುವುದನ್ನು ಕಾಣಬಹುದು. ಇದನ್ನು ಕುವೆಂಪು ಸೃಜಿಸಿದ 'ಬೈಸಿಕಲ್ ಸವಾರಿ'ಯಿಂದಲೂ ಮತ್ತು ಇಂದು ವಿವೇಕ ಶಾನಭಾಗರ 'ಹುಲಿ ಸವಾರಿ' ಪ್ರತಿಮೆಗಳ ಮೂಲಕ ಅರ್ಥಮಾಡಿಕೊಳ್ಳ ಬೇಕಾಗಿದೆ. ವಸಾಹತು ಆಡಳಿತ ನಮ್ಮನ್ನು ಹಲವು ರೀತಿಯಲ್ಲಿ ಪ್ರಭಾವಿಸಿದೆ. ಹೊಸ ಶಿಕ್ಷಣದ ಮೂಲಕ ನಮ್ಮ ಅರಿವನ್ನು ಹಿಗ್ಗಿಸಿದೆ. ವೈಚಾರಿಕತೆಯನ್ನು ಬೆಳೆಸಿದೆ. ಇದು ನಮ್ಮ ಸಮಾಜದ ಸುಧಾರಣಾ ಚಳುವಳಿಗೂ ಕಾರಣವಾಗಿ, ಹಲವು ಸಮುದಾಯದವರಿಗೆ ಬಿಡುಗಡೆಯ ಹಾದಿಯಾಗಿದ್ದನ್ನು ಕಂಡಿದ್ದೇವೆ. ಅಂತಯೇ ಇಂದಿನ ನವ ವಸಾಹತುಶಾಹಿಗೆ ಈ ರೀತಿಯ ಸಾಧ್ಯತೆಗಳಿವೆಯೇ? ಎಂಬ ಪ್ರಶ್ನೆಯನ್ನು ಈ ಕತೆಗಳು ಎತ್ತುತ್ತವೆ. ಇಂದಿನ ವಿದ್ಯಾಭ್ಯಾಸ, ತಂತ್ರಜ್ಞಾನದಿಂದಾಗಿ ಹೆಂಗಸರಿಗೆ ಸ್ವಂತಿಕೆ ಬಂದಿದೆ. ಜೀವನಾವಕಾಶ ಹೆಚ್ಚಿದೆ. ಆತ್ಮವಿಶ್ವಾಸ ಗರಿಗೆದರಿದೆ. ಈ ಹಿನ್ನೆಲೆಯಲ್ಲಿ ನಮ್ಮ ಕಾಲದ ಗಂಡು–ಹೆಣ್ಣುಗಳ ಸಂಬಂಧ ಸಫಲತೆಯ ದಾರಿ ಹಿಡಿದಿದೆಯೆ? ಎಂಬುದನ್ನು ಈ ಕತೆಗಳ ಅಧ್ಯಯನದೊಂದಿಗೆ ಚಿಂತಿಸಬಹುದು.

ಆರ್ಯಾಂಬ ಪಟ್ಟಾಭಿಯವರ 'ವಿಶ್ವಧರ್ಮ'

ಸುವರ್ಣ ಎಸ್. ಹುಡೇದ
ಸಹಾಯಕ ಪ್ರಾಧ್ಯಾಪಕರು
ಶ್ರೀ ವೀರೇಂದ್ರ ಪಾಟೀಲ್ ಪದವಿ ಮಹಾವಿದ್ಯಾಲಯ, ಸದಾಶಿವನಗರ., ಬೆಂಗಳೂರು–80

ಆಧುನಿಕ ಸಾಹಿತ್ಯದ ಪ್ರಮುಖ ಲೇಖಕಿಯರಲ್ಲಿ ಆರ್ಯಾಂಬ ಪಟ್ಟಾಭಿಯವರು ಒಬ್ಬರಾಗಿದ್ದಾರೆ. ಸುಮಾರು ಅರವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ, ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆಯನ್ನು ನೀಡಿದ್ದಾರೆ. ಅವರ ಬಗ್ಗೆ ಸಂಕ್ಷಿಪ್ತವಾಗಿ ಹೇಳುವುದಾದರೆ ಬಿ.ಎಂ.ಶ್ರೀ. ಅವರ ತಮ್ಮನ ಮಗಳೂ, ಖ್ಯಾತ ಕಾದಂಬರಿಗಾರ್ತಿ ತ್ರಿವೇಣಿಯವರ ತಂಗಿಯೂ ಆದ ಆರ್ಯಾಂಬ ಅವರು ಸಾಹಿತ್ಯ ಪರಿಸರದಲ್ಲಿ ಬೆಳೆದುಬಂದವರು. ಅವರೇ ಹೇಳುವಂತೆ ಸಂಪ್ರದಾಯಸ್ಥ ಕುಟುಂಬದಲ್ಲಿ ಹುಟ್ಟಿ ಬೆಳೆದರೂ ಯಾವುದೇ ಕಟ್ಟುಪಾಡುಗಳಿಲ್ಲದೆ ಸ್ವತಂತ್ರವಾಗಿ ಬೆಳೆದವರು. ತಂದೆ ಶ್ರೀ ಬಿ.ಎಂ.ಕೃಷ್ಣಸ್ವಾಮಿಯವರು ಮಂಡ್ಯದಲ್ಲಿ ಪ್ರಸಿದ್ಧ ವಕೀಲರಾಗಿ ಸೇವೆಸಲ್ಲಿಸಿದವರು. ತಾಯಿತಂಗಮ್ಮನವರು ಕೂಡ ಆ ಕಾಲದಲ್ಲಿಯೇ ಆಧುನಿಕ ಮೌಲ್ಯಗಳನ್ನು ಅಳವಡಿಸಿ ಕೊಂಡಿದ್ದರು. ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ, ಆರ್ಥಿಕ ಸ್ವಾವಲಂಬನೆಗೆ ಹೆಚ್ಚಿನ ಮಹತ್ವ ಕೊಟ್ಟಿದ್ದರು. ಹೆಣ್ಣುಮಕ್ಕಳ ಅಭಿವೃದ್ಧಿಗಾಗಿ ಮಂಡ್ಯದಲ್ಲಿ ಮಹಿಳಾ ಸಮಾಜ ಸ್ಥಾಪಿಸಿ ಅದಕ್ಕೊಂದು ಕಟ್ಟಡ ಹೊಂದಲು ನೆರವಾದರು. ಸೊಗಸಾಗಿ ವೀಣೆ ನುಡಿಸುವ ಇವರು ಬಹಳ ವರ್ಷ ಮಹಿಳಾ ಸಮಾಜದ ಕಾರ್ಯದರ್ಶಿಯಾಗಿ ಸಮಾಜದ ಸೇವೆ ಮಾಡಿದರು.

ಆರ್ಯಾಂಬ ಪಟ್ಟಾಭಿಯವರ ಸಾಹಿತ್ಯವನ್ನುಕುರಿತು ಹೇಳುವುದಾದರೆ ಕಾವ್ಯವನ್ನು ಬಿಟ್ಟರೆ ಉಳಿದ ಎಲ್ಲಾ ಸಾಹಿತ್ಯ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿರುವುದು ಕಂಡು ಬರುತ್ತದೆ. ಕಾದಂಬರಿ, ಸಣ್ಣಕತೆ, ವ್ಯಕ್ತಿಚಿತ್ರಣ, ಜೀವನಚರಿತ್ರೆ, ನಾಟಕ, ಪ್ರವಾಸ ಸಾಹಿತ್ಯ, ನಗೆಬರಹ, ಮಕ್ಕಳ ಸಾಹಿತ್ಯ, ಕ್ರೀಡಾ ಸಾಹಿತ್ಯ–ಹೀಗೆ ಒಟ್ಟು 60ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.ಅಷ್ಟೇ ಅಲ್ಲದೆ ಧ್ಯಾನ ಶಿಕ್ಷಕಿಯಾಗಿಯೂ, ಸಮಾಜ ಸೇವಕಿಯಾಗಿಯೂ ಇಂದಿಗೂ ಅವರು ಸೇವೆ ಸಲ್ಲಿಸುತ್ತಿದ್ದಾರೆ. ಅವರ ನಾಲ್ಕು ಕಾದಂಬರಿಗಳು ಚಲನಚಿತ್ರವಾಗಿವೆ ಎಂಬುದು ಗಮನಾರ್ಹವಾಗಿದೆ.

ಆರ್ಯಾಂಬ ಪಟ್ಟಾಭಿಯವರ ಕಾದಂಬರಿಗಳಲ್ಲಿ ಮಹಿಳಾ ಸ್ವಾತಂತ್ರ್ಯ, ಶೋಷಣೆ, ಅರ್ಥಹೀನ ಮೌಲ್ಯಗಳ ವಿರೋಧ, ಮಹಿಳೆಯರಿಗೆ ಮನೆ ಮಾತ್ರ ಸೀಮಿತವಲ್ಲ, ಮನಸ್ಸು ಮಾಡಿದರೆ ಎಲ್ಲ ಕ್ಷೇತ್ರಗಳಲ್ಲಿಯೂ ಸಾಧನೆಯನ್ನು ಮಾಡಬಲ್ಲಳು ಎಂಬುದರ ಮನವರಿಕೆ, ಬಡಕಾರ್ಮಿಕರ ಬದುಕು (ಆ ಹಾಡು), ಮನೋರೋಗದ ವಿಶ್ಲೇಷಣೆ (ಎರಡು ಮುಖ) ಮಹಿಳೆಯ ಸ್ವಾಭಿಮಾನ (ಕಸ್ತೂರಿ), ಕುಷ್ಟ ರೋಗಿಯೊಬ್ಬಳ ಜೀವನ (ಮರಳಿ ಗೂಡಿಗೆ), ಹಿಂದೂ ಮುಸ್ಲಿಂ ವಿವಾಹ ಸಂಬಂಧ (ವಿಶ್ವಧರ್ಮ), ಪೋಲಿಯೊಗ್ರಸ್ತೆಯ ಹೋರಾಟದ ಬದುಕು(ಪ್ರಿಯಸಂಗಮ), ದೇವದಾಸಿ ಪದ್ಧತಿ(ಬಸವಿ), ಬುದ್ಧಿಮಾಂದ್ಯತೆ–ಹೀಗೆ ಸಮಾಜದ ಬೇರೆಬೇರೆ ಸಮಸ್ಯೆಗಳನ್ನು ಕುರಿತು ಅವರು ಕಾದಂಬರಿಗಳನ್ನು ರಚಿಸಿರುವುದು ವಿಶೇಷವಾಗಿದೆ.

ಶ್ರೀಮತಿ ಆರ್ಯಾಂಬ ಪಟ್ಟಾಭಿಯವರ ಕಾದಂಬರಿಗಳಲ್ಲಿ 'ವಿಶ್ವಧರ್ಮ' ಗಮನ ಸೆಳೆಯುವಂತಹುದು ಮತ್ತು ಮಹತ್ವವಾದುದು. ಈ ಕಾದಂಬರಿಯಲ್ಲಿ ಹೆಣ್ಣು

ಪುರುಷಕೇಂದ್ರಿತ ಸಂಸ್ಕೃತಿಯ ಅಧೀನದಲ್ಲಿದ್ದರೂ, ಬದಲಾದ ದಾರಿಯಲ್ಲಿ ನಡೆದಿರುವುದನ್ನು ಕಾಣುತ್ತೇವೆ. ಸ್ತ್ರೀಯರ ಸಮಸ್ಯೆಗಳನ್ನು ಬಿಡಿಸುತ್ತಾ, ಸ್ತ್ರೀಯರಿಗೆ ಗಟ್ಟಿಧ್ವನಿಯನ್ನು ಕೊಟ್ಟ ದಿಟ್ಟ ಮಹಿಳೆಯಾಗಿ ಲೇಖಕಿ ನಿಲ್ಲುತ್ತಾರೆ. ಸರಳವಾದ ನಿರೂಪಣೆಯಲ್ಲಿ ಸ್ಪಷ್ಟವಾಗಿ ಹೇಳುವ ಶೈಲಿ ಅವರ ಸಾಹಿತ್ಯದ ಆಕರ್ಷಣೆಯಾಗಿದೆ. ಸಾಮಾಜಿಕ ಪ್ರಜ್ಞೆಯನ್ನು ಜಾಗೃತಗೊಳಿಸುತ್ತಾ, ಬಂಡಾಯದ ಆಶಯಗಳನ್ನು ಹುಟ್ಟು ಹಾಕುತ್ತಾ, ಶೋಷಣೆಯ ವಿವಿಧ ಮುಖಗಳನ್ನು, ಮೌಢ್ಯದ ವಿವರಗಳನ್ನು ಜೀವಂತವಾಗಿ ದಾಖಲಿಸಿರುವುದನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ. ಮಧ್ಯಮ ವರ್ಗದ ಕುಟುಂಬದ ಸಮಸ್ಯೆಗಳು, ಪ್ರೇಮ ಸಂಬಂಧಗಳು, ಸಹೋದರ–ಸಹೋದರಿಯರ ನಡುವಿನ ಭಾವಗಳ ತಾಕಲಾಟಗಳ ಸರಳ ಚಿತ್ರಣಗಳನ್ನು ನೋಡುತ್ತೇವೆ.

'ವಿಶ್ವಧರ್ಮ' ಕಾದಂಬರಿಯಲ್ಲಿ ಎರಡು ಬೇರೆಬೇರೆ ಧರ್ಮಗಳ ಮಧ್ಯೆ ನಡೆಯುವ ಸಂಘರ್ಷವನ್ನು ಹೇಳುತ್ತಾ ಹೊರಟ ಲೇಖಕಿ, ಅಂತರ್‌ಧರ್ಮೀಯ ವಿವಾಹವಾದರೆ ಏನೆಲ್ಲಾ ಕಷ್ಟ ಪಡಬೇಕಾಗುತ್ತದೆ ಎಂಬುದನ್ನು ವಿವರಿಸುತ್ತಾ ಹೋಗುತ್ತಾರೆ. ಇಲ್ಲಿನ ನಾಯಕಿ ಉಮಾ ಕಟ್ಟಾ ವೀರಶೈವ ಸಂಪ್ರದಾಯಸ್ಥ ಮನೆತನದಲ್ಲಿ ಬೆಳೆದುಬಂದ ಹೆಣ್ಣುಮಗಳು. ತಂದೆ ಶಿವಣ್ಣನವರದು ಅಪೂರ್ವ ಮತ್ತು ಅಸಾಮಾನ್ಯ ವ್ಯಕ್ತಿತ್ವ. ಅಪ್ಪಟ ದೈವಭಕ್ತರಾಗಿದ್ದ ಶಿವಣ್ಣನವರು ಕಟ್ಟುನಿಟ್ಟಿನ ವ್ಯಕ್ತಿಯಾಗಿದ್ದರು. ಎಲ್ಲ ಧರ್ಮಗಳಿಗಿಂತ ತಮ್ಮ ಧರ್ಮದ ಆಚಾರ ವಿಚಾರಗಳೇ ಶ್ರೇಷ್ಠ ಎಂದು ನಂಬಿದವರು. ಪ್ರತಿದಿನ ಪೂಜೆ ಪುನಸ್ಕಾರಗಳು ತಪ್ಪದೇ ನಡೆಯುತ್ತಿದ್ದವು. ಇಂಥ ಸಂಪ್ರದಾಯಸ್ಥ ಮನೆಯಲ್ಲಿ ಉಮಾ ಬೆಳೆದಿದ್ದರೂ, ಜಾತಿಯ ಬಗ್ಗೆ ಅವಳಿಗೆ ನಂಬಿಕೆ ಇರಲಿಲ್ಲ. ಶಿವಣ್ಣನವರಿಗೆ ಇಬ್ಬರು ಹೆಂಡತಿಯರು. ಮೊದಲ ಹೆಂಡತಿಯ ಮಗ ಬಸವಣ್ಣ. ಮೊದಲ ಹೆಂಡತಿ ಸತ್ತ ನಂತರ ಗೌರಮ್ಮನನ್ನು ಮದುವೆಯಾದರು. ಇವರಿಗೆ ಎರಡು ಹೆಣ್ಣು, ಒಂದು ಗಂಡು. ಇವರಲ್ಲಿ ಹಿರಿಯ ಮಗಳೇ ಕಥಾನಾಯಕಿಯಾದ ಉಮಾ. ಶಿವಣ್ಣನವರು ತೀರಿಕೊಂಡ ಮೇಲೆ ಅವಳ ಮಲ ಅಣ್ಣನಾದ ಬಸವಣ್ಣನ ಯಜಮಾನಿಕೆಯಲ್ಲಿ ಜೀವನ ಕಷ್ಟಕರವಾಗತೊಡಗಿತು. ಬಸವಣ್ಣನಿಗೆ ಮಲತಾಯಿ ಗೌರಮ್ಮ, ಮಲತಮ್ಮ, ಮಲ ತಂಗಿಯರನ್ನು ಕಂಡರೇ ಆಗುತ್ತಿರಲಿಲ್ಲ. ಅಂಗಡಿಯ ವ್ಯವಹಾರ, ಮನೆಯ ಯಜಮಾನಿಕೆಯನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಉಳಿದವರನ್ನು ಕಾಲಕಸವಾಗಿ ಕಾಣತೊಡಗಿದ. ಹೆಂಡತಿ ರಾಜೇಶ್ವರಿಯೂ ದರ್ಪದ ಹೆಂಗಸು. ಗಂಡ ಹೊರಗೆ ಹೋದಾಗ ಇವಳದೇ ಕಾರುಬಾರು. ಗಂಡನನ್ನು ಕಳೆದುಕೊಂಡು ವಿಧವೆಯಾಗಿದ್ದ ತಾಯಿ ಗೌರಮ್ಮನ ಅಸಹಾಯಕತೆ, ಮುಗ್ಧ ತಂಗಿ, ತಮ್ಮಂದಿರೇ ಉಮಾಳ ಸುತ್ತ ಇರುವುದು. ಆದರೆ ಪ್ರತಿಭಾವಂತಳಾದ ಉಮಾ ಬಿ.ಎ ಮುಗಿಸಿ ಎಂ.ಎ ಮಾಡುತ್ತೇನೆ ಎಂದಾಗ ಕೋಪದಿಂದ ನಿಷ್ಠುರವಾಗಿ ಬಸವಣ್ಣ ವಿರೋಧಿಸಿ, 'ಮದುವೆ ಮಾಡುತ್ತೇನೆ, ಓದಿ ಯಾರನ್ನು ಉದ್ಧಾರ ಮಾಡಬೇಕಿಲ್ಲ' ಎಂದು ಉದ್ಧಟತನದ ಮಾತಾಡುತ್ತಾನೆ. ಆದರೆ ಮದುವೆಯೂ ಮಾಡದೆ ಬೇಜವಾಬ್ದಾರಿಯಿಂದ ನಡೆದು ಕೊಳ್ಳುತ್ತಾನೆ. ಅನೇಕ ಚಟಗಳಿಗೆ ಬಲಿಯಾಗಿ ಎಲ್ಲರನ್ನು ಕಡೆಗಣಿಸುತ್ತಾ ಕಾಲಕಳೆಯ ತೊಡಗಿದಾಗ, ಉಮಾ ಎರಡು ವರ್ಷ ಮನೆಯಲ್ಲಿದ್ದು, ನಂತರ ಅಣ್ಣನ ಮಾತನ್ನು ಲೆಕ್ಕಿಸದೆ ಎಂ.ಎ.ಗೆ ಸೇರಿ ತನ್ನ ಆಸೆಯನ್ನು ನೆರವೇರಿಸಿಕೊಳ್ಳುತ್ತಾಳೆ. ಇಲ್ಲಿ ಪುರುಷರ ದಬ್ಬಾಳಿಕೆ, ಸ್ವಾರ್ಥ ಕಂಡುಬರುತ್ತದೆ. ಕಾಲೇಜಿನಲ್ಲಿ ಮುಸ್ಲಿಂ ಧರ್ಮದ ವಹೀದಳು ಆತ್ಮೀಯ ಗೆಳತಿಯಾಗಿದ್ದನ್ನು ತಿಳಿದು, ಅದನ್ನು ಕೂಡ ಸಹಿಸದ ಬಸವಣ್ಣ ಅವರ

ಜಾತಿಯನ್ನು ಹೀಯಾಳಿಸುತ್ತಾನೆ. ಜಾತಿಗಿಂತಲೂ ಮನಸ್ಸು ಮುಖ್ಯ ಎಂಬ ಭಾವನೆ ಅಂದಿಗೂ, ಇಂದಿಗು ಇಲ್ಲದಿರುವುದನ್ನೇ ಸಮಾಜದಲ್ಲಿ ಕಾಣುತ್ತೇವೆ. ಉಮಾ ಅಂಜದೆ ಧೈರ್ಯದಿಂದ ಎದುರು ಉತ್ತರಕೊಟ್ಟು, ತನ್ನ ಇಷ್ಟದಂತೆ ನಡೆದುಕೊಳ್ಳುವ ಹಕ್ಕನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುತ್ತಾಳೆ.

ಇಲ್ಲಿನ ನಾಯಕ ಅಹಮದ್ ತುಂಬ ಸಂಕೋಚದ ಸ್ವಭಾವದವನು. ಉಮಾಳ ಗೆಳತಿ ವಹೀದಳ ಅಣ್ಣನಾದ ಅಹಮದ್ ಸಂಕೋಚ ಪ್ರವೃತ್ತಿಯ ಯುವಕನಾದರೂ ಪ್ರತಿಭಾವಂತನಾಗಿದ್ದನು ಮತ್ತು ಸಾಹಿತ್ಯದಲ್ಲಿ ವಿಶೇಷ ಆಸಕ್ತಿಯುಳ್ಳವನಾಗಿದ್ದನು. ಮುಸ್ಲಿಂ ಧರ್ಮದ ಸಂಪ್ರದಾಯಸ್ಥರ ಮನೆಯಲ್ಲಿ ಹುಟ್ಟಿದರೂ ಆಧುನಿಕ ವಿಚಾರಗಳನ್ನು ತುಂಬಿಕೊಂಡು, ಅದರಂತೆ ನಡೆಯುವ ಆದರ್ಶ ವ್ಯಕ್ತಿಯಾಗಿದ್ದನು. ಅಲ್ಲದೆ ಪ್ರಸಿದ್ಧ ವೈದ್ಯನಾಗಿದ್ದನು. ಕಾಲಕ್ರಮೇಣ ತಂಗಿ ವಹೀದಳ ಸ್ನೇಹಿತೆಯಾಗಿದ್ದ ವೀರಶೈವ ಸಂಪ್ರದಾಯದ ಉಮಾ ಇವನ ಬಾಳಲ್ಲಿ ಪ್ರವೇಶಿಸಿದಾಗ ಜಾತಿ, ಧರ್ಮದ ಬಗ್ಗೆ ಯಾವ ಗೊಂದಲವು ಇಲ್ಲದೆ ಅವಳನ್ನು ಮದುವೆಯಾಗಲು ನಿಶ್ಚಯಿಸುತ್ತಾನೆ. ಈ ನಿರ್ಧಾರವನ್ನು ಮನೆಯಲ್ಲಿ ತಿಳಿಸಲು ಸಂಕೋಚವಾಗಿ ಇಬ್ಬರು ಮನೆಬಿಟ್ಟು ಹೋಗಿ ಮದುವೆಯಾಗುತ್ತಾರೆ. ನಂತರ ವಿಷಯ ಮನೆಯವರಿಗೆ ಗೊತ್ತಾಗಿ, ನಾಯಕಿಯ ಮನೆಯವರು ಛೀಮಾರಿ ಹಾಕಿದರೂ, ಅಹಮದನ ತಂದೆ–ತಾಯಿ ಮಗನ ಸಂತೋಷಕ್ಕೆ ಅಡ್ಡಿಯಾಗದೆ ಸಂತೋಷದಿಂದಲೇ ಸ್ವಾಗತಿಸುತ್ತಾರೆ. ಆದರೂ ಮುಸ್ಲಿಂ ಧರ್ಮದವರ ಒತ್ತಾಯದಿಂದ ಅವರ ಸಮಾಧಾನಕ್ಕಾಗಿ ಆ ಧರ್ಮದ ಸಂಪ್ರದಾಯದಂತೆ ಮಸೂದರು(ಅಹಮದ್‌ನ ತಂದೆ) ಮತ್ತೊಮ್ಮೆ ಮದುವೆ ಮಾಡಿ ನಾಯಕಿಯ ಹೆಸರು ಬದಲಾವಣೆ ಮಾಡಿದಾಗ ಉಮಾಳ ಮನಸ್ಸಿಗೆ ವೇದನೆಯಾದರೂ, ಅಹಮದ್‌ನು ಹೆಂಡತಿ ಉಮಾಳಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಡುವಲ್ಲಿ ಅವನ ಮನೋವೈಶಾಲ್ಯವನ್ನು ಕಾಣುತ್ತೇವೆ. ಆದರೆ ವೀರಶೈವ ಬಂಧುಗಳು ನಾಯಕಿಯ ಮನೆಯವರಿಗೆ ಬಹಿಷ್ಕಾರ ಹಾಕಬೇಕೆಂದು ತೀರ್ಮಾನಿಸಿದ್ದು, ಅಕ್ಕನು ಬೇರೆ ಧರ್ಮದವನೊಂದಿಗೆ ಮದುವೆಯಾಗಿದ್ದರಿಂದ ತಂಗಿಯ ಮದುವೆಗೆ ಅಡ್ಡಿಯಾದದ್ದು, ಬಸವಣ್ಣನಿಗೆ ಅಪಘಾತವಾಗಿ ಕೊನೆಗೆ ಅಹಮದ್‌ನೇ ಸಹಾಯ ಮಾಡಿದ್ದು, ಹೀಗೆ ತಮಗೊದಗಿದ ಕಷ್ಟಕಾರ್ಪಣ್ಯಗಳ ಸಂದರ್ಭದಲ್ಲಿ ಒಂದು ಕಾಲಕ್ಕೆ ತಿರಸ್ಕರಿಸಿದವರ ಬಳಿಯೇ ಸಹಾಯ ಕೇಳುವ ಸ್ಥಿತಿ ಬಂದದ್ದು, ಕೊನೆಗೆ ಎಲ್ಲರೂ ಒಂದಾಗುವ ಸುಖಾಂತ ಕತೆಯಾಗಿದೆ. ಅಹಮದ್ ಕೂಡ ಹೆಂಡತಿಗೆ ತನ್ನ ಧರ್ಮದ ಆಚಾರಗಳನ್ನು ಆಚರಿಸಲು ಯಾವುದೇ ಒತ್ತಾಯ ಮಾಡದೇ ಅವಳಿಷ್ಟದಂತೆ ಇರಲು ಅನುವು ಮಾಡಿಕೊಡುತ್ತಾನೆ. ಕ್ರಮೇಣ ಹೆಂಡತಿಯ ಮನೆಯವರೆಲ್ಲರ ಮನ ಗೆದ್ದು ತನ್ನ ಪ್ರೀತಿ, ಉದಾರ ಮನೋಭಾವದಿಂದ ಹೆಂಡತಿಯನ್ನಷ್ಟೇ ಅಲ್ಲ, ಊರಿನವರೆಲ್ಲರ ಮನವನ್ನು ಗೆಲ್ಲುತ್ತಾನೆ. ಜಾತಿ, ಮತ, ಧರ್ಮಕ್ಕಿಂತಲೂ ಪ್ರೀತಿ ಶ್ರೇಷ್ಠ ಎಂಬುದನ್ನು ತಮ್ಮ ನಡವಳಿಕೆಯಿಂದ ತೋರಿಸಿಕೊಡುತ್ತಾರೆ.

ಅಂತರ್‌ಜಾತಿಯ ವಿವಾಹದ ಸಮಸ್ಯೆಯನ್ನು ವಸ್ತುವನ್ನಾಗಿಟ್ಟುಕೊಂಡು, ಪ್ರೀತಿಯಿದ್ದರೆ ಸುಖಾಂತ್ಯ ಜೀವನವನ್ನು ಕಾಣಬಹುದು ಎಂಬುದನ್ನು ಈ ಕಾದಂಬರಿಯ ಮೂಲಕ ತೋರಿಸಿಕೊಟ್ಟ ಲೇಖಕಿ ಧರ್ಮಕ್ಕಿಂತ ವಿಶೇಷವಾದುದು ಪ್ರೀತಿ; ಇಂಥ ಪ್ರೀತಿ, ಪ್ರೇಮ, ನಂಬಿಕೆಗಳಿಂದ ಜಾತಿಯನ್ನು ಮೀರಿ ಸಂಬಂಧವನ್ನು ಗಟ್ಟಿಗೊಳಿಸಬಹುದಲ್ಲದೆ, ವಿಶ್ವಧರ್ಮಕ್ಕೇರುವ ಸಾಮರ್ಥ್ಯ ಪ್ರೇಮಕ್ಕೆ ಮಾತ್ರ ಇದೆ ಎಂಬುದನ್ನು ಈ ಕಾದಂಬರಿಯಲ್ಲಿ ತೋರಿಸಿಕೊಟ್ಟಿದ್ದಾರೆ.

- ಚಿಂತನ ಬಯಲು ತ್ರೈಮಾಸಿಕ ಪತ್ರಿಕೆಯನ್ನು ವೃತ್ತಿಪರವಾಗಿ ನಡೆಸಿಕೊಂಡು ಹೋಗಬೇಕೆಂಬುದು ನಮ್ಮ ಅಪೇಕ್ಷೆ.
- ಈ ಪತ್ರಿಕೆ ISSN ಮಾನ್ಯತೆ ಪಡೆದಿರುತ್ತದೆ. ISSN 2278-2192
- ಗಂಭೀರ ಚಿಂತನೆಯನ್ನೊಳಗೊಂಡ ಲೇಖನಗಳು, ವಿಮರ್ಶಾ ಲೇಖನಗಳು ಹಾಗೂ ಸಂಶೋಧನಾತ್ಮಕ ಲೇಖನಗಳನ್ನು ಪ್ರಕಟಣೆಗಾಗಿ ಆಹ್ವಾನಿಸುತ್ತಿದ್ದೇವೆ.
- ಇಲ್ಲಿ ಪ್ರಕಟವಾಗುವ ಲೇಖನಗಳ ಗುಣಮಟ್ಟವನ್ನು ಉಳಿಸಿ ಬೆಳೆಸುವುದಕ್ಕಾಗಿ, ಲೇಖನಗಳನ್ನು ಆಯಾ ಕ್ಷೇತ್ರಗಳಲ್ಲಿ ಪರಿಣತರಾದವರಿಂದ ಸಮೀಕ್ಷೆ ಮಾಡಿಸಿ, ಅಂದರೆ, ಅನಾಮಿಕ ಸಂಪಾದಕರಿಂದ ಅಭಿಪ್ರಾಯ ಪಡೆದು ಪ್ರಕಟಿಸಲಾಗುವುದು. ತಜ್ಞರ ಸೂಚನೆಗಳನ್ನು ಅನುಸರಿಸಿ, ಅವಶ್ಯವೆನಿಸಿದರೆ, ಸೂಕ್ತ ಪರಿಷ್ಕರಣೆಗಳನ್ನು ಮಾಡುವಂತೆ ಲೇಖಕರನ್ನು ಕೋರಲಾಗುವುದು.
- ಎಲ್ಲಾ ಪ್ರಕಟಿತ ಲೇಖನಗಳಿಗೆ ಸಂಭಾವನೆ ನೀಡಲಾಗುವುದು.
- ಲೇಖನಗಳಿಗೆ ಬಹಳ ಕಟ್ಟುನಿಟ್ಟಾದ ಪದಗಳ ಮಿತಿ ಇಲ್ಲ.
- ಯಾವುದೇ ಆಧಾರಗಳಿಲ್ಲದೆ, ಕೇವಲ ಹೇಳಿಕೆ, ಅಭಿಪ್ರಾಯ ರೂಪದ ಬರಹಗಳನ್ನು ದಯವಿಟ್ಟು ಕಳುಹಿಸುವುದು ಬೇಡ. ಅಗತ್ಯವಿರುವ ಕಡೆಗಳಲ್ಲಿ ಟಿಪ್ಪಣಿ, ಪರಾಮರ್ಶನ ಗ್ರಂಥಗಳು ಇತ್ಯಾದಿ ಮಾಹಿತಿಗಳನ್ನು ಲೇಖನಗಳು ಹೊಂದಿರಲಿ.
- ಲೇಖನಗಳು ಬೇರೆ ಕಡೆ ಪ್ರಕಟವಾಗಿರಬಾರದು. ಜಾಲಲೇಖ (ಬ್ಲಾಗ್)ಗಳಲ್ಲಿ ಪ್ರಕಟವಾಗಿದ್ದರೆ ವಿವರಗಳನ್ನು ನೀಡಬೇಕು. ಅನುವಾದಿತ ಲೇಖನಗಳಾದರೆ ಮೂಲದ ಬಗ್ಗೆ ಪೂರ್ಣ ವಿವರ ಹಾಗೂ ಮೂಲಲೇಖಕರ ಅನುಮತಿ ಇತ್ಯಾದಿ ತಾಂತ್ರಿಕ ಆವಶ್ಯಕತೆಗಳನ್ನು ಪೂರೈಸಿರಬೇಕು. ಲೇಖನಗಳನ್ನು ಕೈಬರಹ ಅಥವಾ ಬೆರಳಚ್ಚು ಮಾಡಿ ಕಳುಹಿಸುವುದಾದರೆ ಒಂದೇ ಮಗ್ಗುಲಲ್ಲಿ ಇರಲಿ. ಮಿಂಚಂಚೆಯ ಮೂಲಕ ಕಳುಹಿಸಿದರೆ ಉತ್ತಮ. ಟಿಪ್ಪಣಿಗಳು ಲೇಖನದ ಕೊನೆಗೇ ಇರಬೇಕು.
- ಲೇಖಕರು ತಮ್ಮ ಲೇಖನಗಳ ಪ್ರತಿಗಳನ್ನು ಇಟ್ಟುಕೊಳ್ಳಬೇಕಾಗಿ ಕೋರಿಕೆ.
- ಲೇಖಕರು ತಮ್ಮ ಪೂರ್ಣ ಅಂಚೆ ವಿಳಾಸ, ಮಿಂಚಂಚೆ ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳನ್ನು ಕಡ್ಡಾಯವಾಗಿ ನಮೂದಿಸಿರಬೇಕು.
- ಪುಸ್ತಕ ವಿಮರ್ಶೆ, ಸಮೀಕ್ಷೆಗಾಗಿ ಕೆಲವು ಪುಟಗಳನ್ನು ಮೀಸಲಿಡಲಾಗುವುದು. ಲೇಖಕರು, ಪ್ರಕಾಶಕರು ತಮ್ಮ ಪ್ರಕಟಿತ ಪುಸ್ತಕಗಳ ಎರಡು ಪ್ರತಿಗಳನ್ನು ವಿಮರ್ಶೆ ಸಮೀಕ್ಷೆಗಾಗಿ ಕಳುಹಿಸಿಕೊಡಬಹುದು.
- ಓದುಗರ ಪ್ರತಿಕ್ರಿಯೆಗಳನ್ನು ಸ್ವಾಗತಿಸುತ್ತೇವೆ.
- ಚಂದಾದಾರರಿಗೆ ವಂಚನೆಯಾಗುವಂತೆ ಪತ್ರಿಕೆಯನ್ನು ಅರ್ಧದಲ್ಲಿ ನಿಲ್ಲಿಸುವುದಿಲ್ಲ.
- ಸಂಪರ್ಕ ವಿಳಾಸ : ಸಂಪಾದಕರು, ಚಿಂತನ ಬಯಲು, ನಂ. 15-109
ಮೊಡಂಕಾಪು ಅಂಚೆ, ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ - 574 219.
ಮಿಂಚಂಚೆ : chinthanabayalu@gmail.com
ದೂರವಾಣಿ : 9449772651

RNI Reg No. : KARKAN /2012/49251

CHINTHANA BAYALU A Peer Reviewed Journal ISSN 2278-2192
Kannada Quarterly, Volume 4, Issue 4, April - June 2016
Edited, Published, Printed & Owned by
Reshma G. Bhat
Door No. 15-109, Modankapu Post,
Bantwal Taluk, Dakshina Kannada 574 219.
Printed at
Aakrithi Prints
Light House Hill Road, Mangalore - 575 001

Pages : 64

ವಾರ್ಷಿಕ ಚಂದಾ : ರೂಪಾಯಿ ಇನ್ನೂರು
(ಅಂಚೆ ವೆಚ್ಚ ಸೇರಿ)
ಮೂರು ವರ್ಷಗಳಿಗೆ : ರೂಪಾಯಿ ಆರುನೂರು
ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ
ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ
ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ
ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

ಕರ್ಣಾಟಕ ಬ್ಯಾಂಕ್
ಬಂಟ್ವಾಳ ಮೂಡ ಶಾಖೆಯಲ್ಲಿ
ಚಿಂತನ ಬಯಲು ಹೆಸರಿನಲ್ಲಿರುವ

ಕರೆಂಟ್ ಅಕೌಂಟ್ ಸಂಖ್ಯೆ : 0712000100041401

IFSC: KARB 0000071

ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444ಗೆ ಕರೆ ಮಾಡಿರಿ

ಕರ್ಣಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com